

# ಅಖಿಲ ಭಾರತ ಪತ್ರಿಕೆ

ಜುಲೈ 2025

# ಜೀವಾತ್ಮನ ಶತ್ರುಗಳು

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಹಲವು ಆಕಾರ ಹಲವು ಆಯಾಮಗಳಲೀಗ ರೂಪುಗೊಂಡು
ಅಕ್ಷರದ ಸೂಕ್ಷ್ಮಗಳಲೀಗ ಲಕ್ಷ್ಯಗೊಳ್ಳುತಿಹ ವಾಸಿಯಿಂದು;
ಜೀವರೂಪಕ್ಕೆ ಭಾವಾನುಭಾವ ವೈರಂಭಣದಾ ಪವನ
ಅವನ ಚೈತನ್ಯವದನೆ ಉಸಿರಾಗಿ ಪಡೆಯುತಲಿ ಸ್ಪಂದ–ತಾನ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 5 ಪುಟ 82)**

**ಅಖಿಲ ಭಾರತ ಪತ್ರಿಕೆ**
**ಜುಲೈ 2025**

ಸಂಪುಟ: 35 ಸಂಚಿಕೆ: 07

# ಪರಿವಿಡಿ

## ಜೀವಾತ್ಮನ ಶತ್ರುಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಕೋಪ** 15
ಅನು: ಡಾ॥ ಮಹಾದೇವ ಸಕ್ರಿ

**ಲಾಲಸೆ** 27
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಲೋಭ** 40
**ಮೋಹ** 43
ಅನು: ನಾಗಜ್ಯೋತಿ ಮಾನ್ವಿ

**ಮಹತ್ವಾಕಾಂಕ್ಷೆ, ಗರ್ವ ಮತ್ತು ಸ್ವಾಭಿಮಾನ** 45
**ಅಸೂಯೆ** 50
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದೋಪನಿಷತ್ತು** 52
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ‘ಉರ್ವಶಿ’** 55
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಶ್ರೀ ಅರವಿಂದರ ‘ಗೀತಾ ಪ್ರಬಂಧಗಳು’** 65
ಅನು: ಜಾನ್ವಿ

**ವಾರ್ತಾಪತ್ರ** 76

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಸಂಪಾದಕರ ಟಿಪ್ಪಣಿ

ಆಧ್ಯಾತ್ಮಿಕ ಪ್ರಜ್ಞೆ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಪ್ರಗತಿ ಸಾಧಿಸುವದು ಎಂದರೆ ಅದೊಂದು ಸುಲಭದ ಪಥವಂತೂ ಅಲ್ಲವೇ ಅಲ್ಲ ಎಂದು ಕೆಲವರು ಭಾವಿಸಿದ್ದಾರೆ. ಇಲ್ಲಿ, ಮುಖ್ಯವಾಗಿರುವ ಸಂಗತಿ ಎಂದರೆ, ಯಾರೇ ಆಗಿರಲಿ ಅವರಂತರಂಗದಲ್ಲಿ ಷಡ್ವೈರಿಗಳು ಇದ್ದೇ ಇರುತ್ತಾರೆ. ಆ ರೀತಿಯಲ್ಲಿ ವೈರಿಗಳು ಇದ್ದಾರೆ ಎನ್ನುವದೂ ಗೊತ್ತಾಗದ ಸ್ಥಿತಿ ಇರುತ್ತದೆ. ಏಕೆಂದರೆ ಆ ಶತ್ರುಗಳನ್ನು ಸುಲಭದಲ್ಲಿ ಗುರುತಿಸಲು ಸಾಧ್ಯವಾಗುವದಿಲ್ಲ, ಏಕೆಂದರೆ ಅವೆಲ್ಲವೂ ಮುಖವಾಡದಲ್ಲಿ ಅಡಗಿರುತ್ತವೆ. ಪರಿಶುದ್ಧವಾದ ವಿವೇಚನಾಶಕ್ತಿಯಿಂದ ಕೂಡಿರುವ ವಿವೇಕ, ಅಪ್ರತಿಹತವಾದ ಅಭೀಪ್ಸೆ, ಸದಾ ಪ್ರಗತಿಗೊಳ್ಳುತ್ತಿರುವ ಪ್ರಾಮಾಣಿಕತೆ, ವಿಶ್ವಾಸ, ಭಕ್ತಿ, ನಿಷ್ಠೆ, ತಿತಿಕ್ಷು ಹಂತದ ಸಹನಶೀಲತೆ, ಮತ್ತೆ ಇವೆಲ್ಲಕ್ಕೂ ಮಿಗಿಲಾಗಿ ಆ ದೈವೀ ಮಾತೆಯ ಕೃಪೆಗಾಗಿ ಸದಾ ಸಮರ್ಪಣಾ ಮನೋಭಾವವನ್ನು ಹೊಂದಿರಬೇಕಾಗುತ್ತದೆ.

ಇಂತಹ ಪ್ರಮುಖ ಅಡೆತಡೆಗಳ ಜಾಲದಿಂದ ಮುಕ್ತಗೊಂಡು ನಮ್ಮ ಯಾನವನ್ನು ಸೂಕ್ತ ಪಥದಲ್ಲಿ ಸಾಗಿಸಿಕೊಂಡು ಹೋಗಲು ಇರುವ ಕೆಲವು ವಿಷಯಗಳನ್ನು ಕುರಿತು ಈ ಸಂಚಿಕೆಯು ರೂಪಿತಗೊಂಡಿದೆ. (ಎಐಎಮ್)

## ಸಂಪಾದಕೀಯ

**ಅರಿಷಡ್ವರ್ಗಗಳ ಅಡೆತಡೆಯು ಕೇವಲ ಮಾನವ ಕುಲಕ್ಕೆ ಮಾತ್ರವಲ್ಲ, ದೇವನೂ ಸಹಿತ ಇಂತಹ ವಿಷಣ್ಣ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎನ್ನುವದನ್ನು ಶ್ರೀ ಅರವಿಂದರು "ದೇವನಾ ಪರಿಶ್ರಮ" ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ. ಮಾನವ ಶರೀರ ಧಾರಣೆಯಲ್ಲಿ ರೂಪಾಂತರಗೊಂಡ ದೇವನೂ ಸಹಿತ ಇಂತಹ ಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅದಕ್ಕಾಗಿಯೇ ಸ್ವಯಂ ಸಾಕ್ಷಾತ್ಕಾರಕ್ಕಾಗಿ ಎನ್ನುವಂತೆ "ಎಂದಿಗೂ ಹತಾಶಗೊಳ್ಳಬೇಡ"** ಎನ್ನುವ ಭರವಸೆ ತುಂಬಿದ ಹಾಗೂ ಸದಾ ಸುರಕ್ಷೆಯ ಕವಚವನ್ನು ಒದಗಿಸುವ ಶ್ರೀ ಅರವಿಂದರ ಅಭಿವ್ಯಕ್ತಿಯಲ್ಲಿ, ಭಾರತದ ಭವ್ಯ ಪರಂಪರೆಯು ಮತ್ತು ಉಜ್ವಲೋಜ್ವಲವಾಗಿ ಬೆಳಗುವದರ ಕುರಿತು ಖಚಿತ ಭವಿಷ್ಯವನ್ನು ತಮ್ಮ ಪ್ರಾರಂಭದ ಕವನ 'ದೇವನಾ ಪರಿಶ್ರಮ'ದಲ್ಲಿ (ಸಂಪುಟ 2 ಪುಟ 538) ದ್ರಷ್ಟಾರ ವಾಣಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಸ್ವತಃ ದೇವನೂ ಸಹಿತ ಇದಕ್ಕಾಗಿ ಪರಿಶ್ರಮಿಸುತ್ತಿದ್ದಾನೆ ಎನ್ನುವದನ್ನು ಹೇಳುತ್ತ, ಈ ರೀತಿಯ ನವೀನ ಸೃಷ್ಟಿಯು ಇಲ್ಲಿ ನಿರ್ಮಾಣಗೊಳ್ಳುವದು 'ನಿಯತಿಯ ಆಣತಿ'ಯಾಗಿದೆ ಎನ್ನುವದನ್ನೂ ಅಭಿವ್ಯಕ್ತಿಸಿದ್ದಾರೆ.

ರಜತ ಪವನದ ಸೂತ್ರಗಳಲ್ಲಿ ಈ ಅಭಿಲಾಶೆಯ ಕುರಿತು ಸ್ವಪ್ನ ಮಾಲೆಗಳನ್ನು ಹೆಣೆದು ನಿರ್ಮಿಸಿಕೊಂಡ ಈ ನಿರ್ಮಿತಿಯು ಆ ಸ್ವರ್ಣ ಮತ್ತು ಈ ನೀಲದ ಮಧ್ಯದಲ್ಲಿಯೇ ಪೋಣಿಸಲ್ಪಟ್ಟಿದೆ. ಇಲ್ಲಿ ಸ್ವರ್ಣವು ವ್ಯೋಮಸ್ಥಿತವಾಗಿರುವ ಪರಮ ದೇವನ ಕೃಪೆಯಾಗಿದ್ದು, ಈ ನೀಲವೆನ್ನುವದು ಮಾನವನ ಹೃದಯದಲ್ಲಿ ಸ್ಥಿತವಿರುವ ಅನಾಹತದ ವರ್ಣವಾಗಿದೆ. ಮಾನವನ ಹೃದಯ ಮತ್ತು ದೇವನ ಇಚ್ಛೆ ಎರಡೂ ಒಂದೇ ಶ್ರುತಿಯಲ್ಲಿ ಮಿಡಿದಾಗ, ಅಲ್ಲಿ ಸೃಷ್ಟಿಯಾಗುವದು ಭವ್ಯ ಹಾಗು ದಿವ್ಯತ್ವವೇ ಆಗಿರುತ್ತದೆ. ಈ ರೀತಿಯ ಕೋಮಲ ಸ್ವರೂಪದಲ್ಲಿ ಅವುಗಳನ್ನು ಆವರಣಗೊಳಿಸಿ, ಅಲ್ಲಿಯೇ ಪ್ರತಿಸ್ಥಾಪಿಸುತ್ತಾನೆ, ರತ್ನಖಚಿತದಲ್ಲಿ ಹೊಳೆಯುತ್ತಿರುವ ಸ್ವಪ್ನಗಳನ್ನು ನಾನು ಕಂಡಿರುವೆನಾದರೂ, ಅವೆಲ್ಲವೂ ನೀನೇ ನನಗಿತ್ತಿರುವ ಕೃಪೆಯಾಗಿವೆ ಎಂದು ನಮ್ರತೆಯಲ್ಲಿಯೇ ಸಮರ್ಪಣೆಯನ್ನು ತೋರುತ್ತಾರೆ. ಮೃಣ್ಮಯದ ಬದುಕನ್ನು ಮತ್ತು ಸ್ವರ್ಗದ ಸಂತೋಷವನ್ನು ಸಂಪರ್ಕಿಸಲು ಇಂದ್ರಚಾಪವೊಂದನ್ನು ರೂಪಿಸಿಕೊಳ್ಳಲೆಂದೇ ನನ್ನೆದೆಯು ಸದಾ ಮಿಡಿಯುತ್ತಿದೆ. ಈ ಮೂಲಕ ಬಾನು ಹಾಗು ಬುವಿಗೆ ಸದಾ ಸಂಪರ್ಕವೊಂದನ್ನು ರೂಪಿಸಿದಂತಾಗುತ್ತದೆ. ವಿರಾಟ್ ವಿಶ್ವದ ನಿಯತಿ ನಿಗದಿತ ಸೂತ್ರದ ತಾಳದಂತೆಯೇ ಈ ಕ್ಷೀಣವಾಗಿರುವ ಗ್ರಹದಲ್ಲಿ

– ಬುವಿಯಲ್ಲಿ – ಈ ಸ್ವಪ್ನವನ್ನು ಬಿತ್ತುತ್ತ, ಅದು ಅಂಕುರಗೊಂಡು, ಅನಂತತೆಯ ಆ ಚಿತ್ತವೃತ್ತಿಗಳೂ ಇಲ್ಲಿ ಸದಾ ಸ್ಪಂದಗೊಳ್ಳುವಂತೆ ರೂಪಿಸಬೇಕಾಗಿದೆ.

ಆದರೆ, ಈ ರೀತಿಯ ಉದಾತ್ತವಾಗಿರುವ ನಮ್ಮ ಸ್ವರ್ಗಗಳು ನಮ್ಮಿಂದ ದೂರ ದೂರ ದೂರದಲ್ಲಿವೆ; ಪರಿಶುಭ್ರತೆಯ ಪರಮೋಚ್ಚ ಹಂತದಲ್ಲಿವೆ. ಅವುಗಳ ಎಡೆಗೆ ನಾವೀಗ ಸಾಗಬೇಕಾಗಿದೆ. ಈ ಪಾರಲೌಕಿಕದ ಕೃಪಾ ಕೊಡುಗೆಯಲ್ಲಿ ಭಂಗುರತೆ ಎನ್ನುವದು ಇರುವದಿಲ್ಲ. ಅಲ್ಲಿರುವ ಆ ವೈಭವದ ಭರತದ ಜೊತೆಗೆ, ಆ ತೇಜತ್ವದ ಜೊತೆಗೆ ನಮ್ಮ ನೆಳಲೂ ಸಹಿತ ನಿಲ್ಲಲು ವಿಫಲವಾಗುತ್ತದೆ. ಅದರ ಮೂಲದ ತಲಕ್ಕೆ ತಲುಪಲೆನೆ ಇನ್ನೂ ನಾವು ಸಫಲತೆಯನ್ನು ಸಾಧಿಸಲು ವಿಫಲರಾಗಿದ್ದೇವೆ. ಮಾನವನ ಸೀಮಿತತನದ ಹಾಗೂ ಅವನ ಈ ಕ್ಷೀಣ ಸ್ಥಿತಿಯನ್ನು ಅರಿತುಕೊಂಡ 'ಆ ದೇವನು' ತನ್ನದೇ ಸ್ವರ್ಗಗಳನ್ನು ಇಲ್ಲಿಗೆ ಅವತರಣಗೊಳಿಸಿ ತರುತ್ತಾನೆ. ಈ ಮೃಣ್ಮಯದ ಬದುಕಿಗೆ ತಾನೇ ತಾನಾಗಿ ಸದಾ ರಕ್ಷೆಯ ಆವರಣವಾಗುವಂತೆಯೇ ರೂಪುಗೊಳಿಸುತ್ತಾನೆ; ರೂಪುಗೊಳ್ಳುತ್ತಾನೆ. ಈ ಮೂಲಕ ಭೂ ಬದುಕಿನ, ಮಾನವನ ಎಲ್ಲ ಕಷ್ಟಗಳನ್ನೂ ತಾನು ಧರಿಸಿಕೊಂಡು, ಅವುಗಳಿಗೆ ಸೂಕ್ತ ಪರಿಹಾರ ಮತ್ತು ಶಾಂತಿಯನ್ನು ಒದಗಿಸುತ್ತಾ, ಈ ಶೋಕ ತುಂಬಿರುವ ಪಥದಲ್ಲಿ 'ತೋಷದುಂಬಿದ ಜೀವನ'ವನ್ನು ತುಂತುಂಬಿಸುತ್ತ ಬರುತ್ತಾನೆ. ಆದರೆ ಇಲ್ಲಿರುವ ಮಾನವನ ಗತಿ–ಪ್ರಗತಿಯಲ್ಲಿ ಆಗಿರುವ ವಿಚಲನೆಯನ್ನು ಕಂಡ ದೇವನೂ ಸಹಿತ ಇಲ್ಲಿಗೆ 'ಇಳಿದು ಬಂದ' ಮೇಲೆ, ಇಲ್ಲಿನ ಸ್ಥಿತಿಯನ್ನು ಕಂಡು ಕ್ಷಣಕಾಲ ವಿವಶವಾಗುತ್ತಾನೆ. ಅವನೂ ಸಹಿತ ಈ ಮೃಣ್ಮಯದ ಗತಿಗೆ ಸಿಲುಕಿ ಪತನಗೊಂಡಂತಾಗಿದ್ದಾನೆ.

ಮಾನವ ಕುಲವು ಅನಭಿಜ್ಞತೆಯಲ್ಲಿಯೇ ಸಿಲುಕಿಕೊಂಡು, ಸದಾ ಪರಿಶ್ರಮಿಸುತ್ತಲೇ, ಪ್ರಗತಿ ಹೊಂದಿದ್ದೇನೆ ಎಂದು ಭಾವಿಸುತ್ತಲೇ, ತನ್ನ ಅನುಭವಗಳನ್ನು ತಿರುಚು ತಿರುಚುತ್ತಲೇ, ಮತ್ತೆ ಜನನ–ಮರಣಗಳ ಸುಳಿಗೆ ಸಿಲುಕಿ ಅಲ್ಲಿಯೇ ಪರಿತಾಪ ಪಡಬೇಕಾಗಿದೆ. ಇಂತಹ ವಿಪರೀತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದರೂ, ಅಲ್ಲಿಯೇ ಪರಿಹಾರದ ಪಥವೂ ಇರುತ್ತದೆ. ಆ ಆಳದಲ್ಲಿಯೇ ಮತ್ತೂ ಖನನದಲ್ಲಿ ತೊಡಗಿಕೊಳ್ಳುವದರಿಂದಾಗಿ, ಅಲ್ಲಿ ಉತ್ಪತ್ತಿಯಾಗುತ್ತಿರುವ ಧೂಳು–ಕತ್ತಲೆಯ ಜೊತೆಗೆ ಮಲಿನತೆಯೇ ತುಂಬಿರುವ ಕೆಸರಿನಲ್ಲಿಯೇ ಸುದೀರ್ಘವಾಗಿ ಸಾಗಬೇಕಾಗಿದೆ.

ಇಂತಹ ವಿಷಣ್ಣತೆಯ ಪರಮಾವಧಿಯಲ್ಲಿಯೇ, ಇಲ್ಲಿಂದ ಮುಕ್ತಿಗೊಳ್ಳುವ ಸಲುವಾಗಿ ಇರುವ ಅಭೀಪ್ಸೆಯಿಂದಾಗಿ, ಆ ಊರ್ಧ್ವದಲ್ಲಿರುವ ಸ್ವರ್ಣ–ಸಲಿಲದಾ

ನಾದಮಯ ಗಾನಕ್ಕಾಗಿ ಆಧಾರವೊಂದನ್ನು ಅರಸಿಕೊಳ್ಳುತ್ತೇನೆ. ಆ ಚಿರಂತನದ, ಆ ನಿತ್ಯತ್ವದ ಅಗ್ನಿಯು ಶಾಶ್ವತವಾಗಿ 'ಇಲ್ಲಿಯೂ' ನೆಲಸಲೆಂದು, ಅದಕ್ಕಾಗಿ ಚಿರನೆಲೆಯನ್ನೊಂದನ್ನು ಅರಸುತ್ತೇನೆ. ಈ ಜಂಜಡದ ಜಡದ ತಮಸ್ಸಿನಲ್ಲಿ ಬಳಲುತ್ತಾ ಬಳಲುತ್ತಾ ಇದ್ದರೂ ನಾನು ಸದಾ ಬೆಳಕಿಗಾಗಿ ಪರಿಶ್ರಮಿಸುತ್ತಿರುವೆ. ಆ ದಿವ್ಯಾಗ್ನಿಯನ್ನು ಈ ಮನುಜನೆದೆಯಲ್ಲಿಯೂ ಸ್ಥಾಪಿಸಲು ಮತ್ತು ಅದು ನಿತ್ಯತ್ವದಲ್ಲಿ ತೇಜವಾಗಿಯೇ ಇರಲು ಅಭೀಪ್ಸೆ ಹೊಂದಿರುವೆ. ಆದರೆ ಇದನ್ನರಿಯದ ಮನುಕುಲವು, ಹಗೆಯ ದ್ವೇಷದೊಳಗೆ ಸಿಲುಕಿಕೊಂಡು, ನರಕವನ್ನೇ ಸೃಷ್ಟಿಸಿಕೊಂಡು ಬಳಲುತ್ತಿವೆ. ಈ ಜಗತ್ತು ಸೃಷ್ಟಿಯಾದಾಗಿನಿಂದಲೂ ಇವುಗಳೇಕೆ ಈ ರೀತಿಯಲ್ಲಿ ಇವೆ? ಇವೂ ಸಹಿತ ನನ್ನ ಕೊಡುಗೆಗಳೇ ಎನಿಸುತ್ತಿದೆ. ಇದಕ್ಕೆ ಕಾರಣವನ್ನರಸಿದಾಗ ಗೊತ್ತಾದದ್ದು, ಮಾನವನ ಮನಸ್ಸು ಅವನದೇ ಆಗಿರುವ ವನ್ಯ–ಜೀವಾತ್ಮದ (ಪಶು ಸಹಜ) ನಕಲಿನಲ್ಲಿಯೇ ಇರಲು ಸದಾ ಯತ್ನಿಸುತ್ತಿರುವದೇ ಆಗಿದೆ. ಮಾನವನು ತನ್ನ ವಾಂಛೆಗಳ ವಿಜಯ ಮಹೋತ್ಸವವಕ್ಕಾಗಿ ಸದಾ ಆಶಿಸುತ್ತ–ಹಪಹಪಿಸುತ್ತ, ಅದಕ್ಕಾಗಿ ತನ್ನ ಅಂತರಂಗದಲ್ಲಿಯೇ ಬೇತಾಳನನ್ನೂ ಆಹ್ವಾನಿಸಿಕೊಂಡು ಬದುಕುತ್ತಿದ್ದಾನೆ. ಅದೂ ಕ್ರೂರ ಬೇತಾಳವನ್ನೇ ಅಹ್ವಾನಿಸಿಕೊಂಡಿದ್ದಾನೆ. ಹೀಗಾಗಿ ದುಃಖಗಳು, ಪಾಪಗಳು, ಕ್ರೂರ ಕರ್ಮಗಳಲ್ಲಿಯೇ ಅನುರಕ್ತವಾಗಿ ಈ ಭವದ ನಿವಾಸಿಯಾಗಿದ್ದಾನೆ.

ಅವತರಣಗೊಂಡ ಈ ಸ್ವರ್ಗದ ದಿವ್ಯ ಜ್ವಾಲೆಯಿಂದ, ಆ ಕ್ರೂರ ಬೇತಾಳ ಮತ್ತು ಧೂಳಿಯೂ ಸಹಿತ ಥರಗುಟ್ಟಿ ಹಿಂದೆ ಸರಿಯುತ್ತಿವೆ. ಅವುಗಳು ಮರೆಯಾದ ಕೂಡಲೇ ಅಲ್ಲಿ ಸರ್ವ ವಿಷಯಗಳಿಗೂ ಆನಂದಪೂರ್ಣವಾದ ಪಾವಿತ್ರ ಪರಮ ತೋಷವು ಪ್ರಾಪ್ತಿಯಾಗುತ್ತದೆ. ಆದರೆ ಮೃಣ್ಮಯದ ಅಂಶದಿಂದಾಗಿ ರೂಪಣೆ–ಗೊಳ್ಳುವ ರಾಗಗಳ ಮತ್ತು ಸುಖಕ್ಕಾಗಿ ಅನಿವಾರ್ಯವಾಗಿರುವ ವೇದನೆಯನ್ನೂ ಹೊಂದಬೇಕಾಗುತ್ತದೆ. ಜೀವನ ನಾಟಕದ ಅಂಕ ಅಂಕಗಳಲ್ಲಿ ಈ ರೀತಿಯ ಗತಿಯಲ್ಲಿಯೇ ಸಹನೆಯನ್ನೂ ಗಳಿಸಿಕೊಳ್ಳಬೇಕಾಗುತ್ತದೆ. ಮನುಕುಲವನ್ನು ಸದಾ ಆವರಿಸಿಕೊಂಡು ತನ್ನಲ್ಲಿಯೇ ಅಂತರ್ಗತಗೊಳಿಸಿಕೊಳ್ಳಲು ಅಂಧಕಾರವು ಸದಾ ದಟ್ಟೈಸಿಕೊಂಡೇ ಇರುತ್ತದೆ, ವ್ಯಾಪ್ತವಾಗಿಯೂ ಇರುತ್ತದೆ. ಆದರೆ ಅಲ್ಲಿ ಪ್ರತ್ಯಕ್ಷಗೊಂಡಿರುವ ಆ 'ದಿವ್ಯ ಜ್ಯೋತಿ'ಗೆ ಇದೀಗ ಇವರೆಲ್ಲರೂ ಆಹ್ವಾನವನ್ನು ನೀಡಿ ಸ್ವಾಗತಿಸಲು ತವಕದಲ್ಲಿದ್ದಾರೆ. ಆದರೆ ಅರೆಯರಿವಿನ ಸ್ಥಿತಿಯಲ್ಲಿ ಸಿಲುಕಿಕೊಂಡು, ಅದಕ್ಕೇ ದಕ್ಕುವ ಅರೆಬರೆಯ ಹೊಳಪಿಗೇ ಬೆರಗಾಗಿ, ಪಥದಲ್ಲಿ

ಮುಗ್ಗರಿಸುವದೇ ಸಾಮಾನ್ಯವಾಗಿರುತ್ತದೆ. ಇಂತಹ ಮುಗ್ಗರಿಸುವಿಕೆಯು ಖಿನ್ನತೆಯನ್ನು ಮತ್ತು ಹತಾಶೆಯನ್ನು ತರುತ್ತದೆ. ಆದರೆ ಆ ಅಮರತ್ವದ ನೆಲೆಯಿಂದ ಆಗಮಿಸಿರುವ ಆ ಪರಮಾತ್ಮನು ತನ್ನದೇ ಏಕತ್ವಗೊಳಿಸಲೆಂದು ಎರಕ ಹೊಯ್ಯುತ್ತಿರುತ್ತಾನೆ. ಈ ಎರಕವು ಸಂಪೂರ್ಣವಾಗಿ ಮಾನವನನ್ನು ದೇವತ್ವದ ಹಂತಕ್ಕೇ ಏರಿಸುವ ಭಾವದಲ್ಲಿಯೇ ಇರುತ್ತದೆ.

ಅಲ್ಪ ತೃಪ್ತಿಯಲ್ಲಿಯೇ ಪರಮ ಸಂತೋಷ ಕಾಣುವ ಮನುಜ ತನ್ನ ಆಶೆಯ ದೀವಟಿಗೆ ಅತ್ಯಂತ ಕ್ಷೀಣವಾಗಿದ್ದರೂ ಸಹಿತ ಅದನ್ನೇ ಬೆಳಗಿಸಲು, ಬೆಳಗಿಸಿದ್ದೇನೆಂದು ಪರಿಭಾವಿಸಿಕೊಂಡು ಬೀಗುತ್ತಾನೆ. ಅದು ಮೊದಮೊದಲಿನಲ್ಲಿ ಮುಂಚೂಣಿಯಲ್ಲಿ ಇದ್ದರೂ ವಿಫಲತೆಯ ಅಂಚನ್ನೇ ತೋರುತ್ತದೆ. ಬ್ರಹ್ಮಾಂಡವನ್ನೇ ಆಧರಿಸಿಕೊಂಡಿರುವ 'ಋತ'ದ ಅಂಶವೊಂದು ಮಾತ್ರ ಮಾನವನ ಸುವ್ಯಾಪ್ತ ಇಚ್ಛೆಯಾಗುತ್ತಿದ್ದಲ್ಲಿ, ಆಗ ಈ ತೀರ್ಥಯಾತ್ರೆಯಲ್ಲಿ ಇದುವು ತಾತ್ಕಾಲಿಕ ತಂಗುದಾಣ(ಧರ್ಮಛತ್ರ)ವಾಗಿ ಇರುತ್ತದೆ. ಮಾನವನ ಸೀಮಿತತನದಿಂದಾಗಿ, ಸತ್ಯದ ಮೂಲವೇ ಋತ ಎನ್ನುವದನ್ನು ಅಲ್ಲಗಳೆಯುತ್ತಾನೆ. ಸರ್ವ ಕಾಂತಿಗಳ–ಜ್ಯೋತಿಗಳ ಪ್ರಕಾಶದ ಮೂಲವೇ ಆ ದಿವ್ಯ–ಪ್ರಕಾಶ ಎನ್ನುವದನ್ನೂ ಕಡೆಗಣಿಸಿಕೊಂಡು ಬಾಳಲೆಳಸುತ್ತಾನೆ. ಇದುವರೆಗೂ ಅನಭಿಜ್ಞವಾಗಿರುವ ದೇವ ಗಣವನ್ನು ಆ ಕ್ರಂದದ ಮೂಲಕ ಆರಾಧಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ರಕ್ಕಸನ ಆಯ್ಕೆಯನ್ನು ಮಾಡಿಕೊಳ್ಳುವ ಸ್ಥಿತಿಗೆ ತಲುಪುತ್ತಾನೆ.

ಈ ರೀತಿಯ ಪ್ರಯತ್ನದಲ್ಲಿ ಲಭ್ಯಗೊಳ್ಳುವದೆಲ್ಲವೂ ಖಚಿತವಾಗಿಯೂ ಮತ್ತೆ ಮತ್ತೆ ಕೋರಿ ಪಡೆಯುವದೇ ಆಗಿರುತ್ತದೆ. ಅವಿರತದ ಪ್ರಯತ್ನಕ್ಕೆ ತಕ್ಕ ಫಲವಿರುತ್ತದೆ. ಇಲ್ಲಿ ಎದುರಾಗುವ ಎಲ್ಲ ಶತ್ರು ಭಾವಗಳನ್ನೂ ತುಂಡರಿಸಿಕೊಂಡು, ಅದಕ್ಕಾಗಿ ಇರುವ ಹೋರಾಟವೂ ಸಹಿತ ಸಮರ ಸ್ವರೂಪದ್ದೇ ಆಗಿರುತ್ತದೆ. ಪದೇ ಪದೇ ಇಂತಹ ಹೋರಾಟಗಳೂ ಇರುತ್ತವೆ. ಬಹುತೇಕವಾಗಿ ನಿಷ್ಫಲದ ಜೀವ–ಜೀವಗಳ ಚಿತ್ತದ ಪಥವೇ ಇಲ್ಲಿ ಮುಖ್ಯವಾಗಿರುತ್ತದೆ. ಈ ಸಂಗ್ರಾಮದಲ್ಲಿ ನನಗೆ ಸಾವಿರಕ್ಕೂ ಮಿಕ್ಕಿ ಗಾಯಗಳಾಗಿವೆ. ಅದರಲ್ಲೂ ದೈತ್ಯರದೇ ರಾಜ ಗಣದ ಮಂಡಳಿಯೇ ಆಕ್ರಮಣದ ಮುಂದಾಳತ್ವ ವಹಿಸಿ ನನಗೆ ಎದುರಾಗಿದೆ. ಇಂತಹ ಯಾವುದೇ ಅಡೆ–ತಡೆಗಳು, ಆಕ್ರಮಣಗಳು ಬಂದರೂ ನನ್ನ ಕಾರ್ಯವು ವಿರಾಮವನ್ನು ಬಯಸುವದಿಲ್ಲ. ಶಾಶ್ವತದ ಇಚ್ಛೆಯು ಈ ರೀತಿಯಲ್ಲಿ ಉಳಿಯ ಪೆಟ್ಟನ್ನಿತ್ತು ನನ್ನ ಚಿತ್ತವನ್ನು ಪ್ರತಿಮೆಯಾಗಿಸುತ್ತಿದೆ.

ನನ್ನ ಈ ಸಹನೆಯನ್ನು ಅಣಕು ಮಾಡುತ್ತಿರುವ ದಾನವರ ಜೊತೆ ಜೊತೆಗೇ ಮಾನವರೂ ಇರುವರು! ಕೇವಲ ಭ್ರಮಾಪೂರ್ಣ ಕಲ್ಪನೆಯ ಭಯಾನಕ ಮೂರ್ತಿಗಳಂತೆ ಅಭಿಲಾಶೆಗಳನ್ನು ಪರಿವರ್ತಿಸುವ ಹುನ್ನಾರಿನಲ್ಲಿದ್ದಾರೆ. ಸದ್ಯ ಇದರ ಉಗ್ರ ಜ್ವಾಲೆಗಳು ಇಡಿ ಗಗನವನ್ನೇ ಆವರಿಸಿಕೊಂಡಿವೆ. ಅತ್ಯುಗ್ರವಾದ ಜ್ವಾಲೆಯು ಗುರುತು ಪತನದ ಸಂಕೇತವಾಗಿ ನೆಲೆಗೊಳ್ಳಲೆಳಸುತ್ತಿದೆ. ನಿರ್ಮಾಣಗೊಳ್ಳುವ ಕಾರ್ಯಗಳೆಲ್ಲವೂ ಮೃತಪ್ರಾಯವಾಗಿರಬೇಕೆಂಬುದೆ ಅವರ ಹಂಬಲವಾಗಿದೆ. ಆದರೆ ಇದನ್ನು ಸಂಪೂರ್ಣವಾಗಿ ತಡೆದು, ನಿಯಂತ್ರಿಸಿ ಇಲ್ಲಿ ಸ್ವರ್ಗೀಯ ನೆಲೆಯನ್ನು ಸ್ಥಾಪಿಸುವ ಸಲುವಾಗಿ ಸೂಕ್ತಿಗಳನ್ನು ರೂಪಿಸಿದ್ದೀಯ. ಆನಂದದ ಹಾಗೂ ಸ್ವರ್ಣಮಯ ಧಾಮವನ್ನು ಸೃಷ್ಟಿ ಮಾಡಿದ್ದೀಯ. ಇದೆಲ್ಲವನ್ನೂ ನಮಗಾಗಿ ನಿರ್ಮಿಸಿರುವೆ, ಆದರೆ ನಾವು ಇದನ್ನು ಗಮನಿಸದೇ ಪರಿತ್ಯಕ್ತರಂತೆ ಸಾಗುತ್ತಿದ್ದೇವೆ. ಚೇತನಾರಹಿತರಾಗಿ ಅದರದೇ ಸಾಗರದಲ್ಲಿ ಸಿಲುಕಿ ಮತ್ತೆ ಜೀವನದ ಗುಮ್ಮಟದ ಒಳಗೆ ಸಿಲುಕಿಕೊಂಡಿದ್ದೇವೆ. ಹೀಗಾಗಿ ನಮ್ಮದೇ ಆದ, ನಮಗಿರುವ ಈ ಬುವಿಯ ಬರಿ ತಮವೇ ತುಂಬಿದ ಕ್ಷೇತ್ರವನ್ನಾಗಿಸಿಕೊಂಡಿದ್ದೇವೆ. ನಮ್ಮದೇ ಕ್ಷೀಣ ಬಯಕೆಗಳ, ಅಲ್ಪ ತೃಪ್ತಿಗಳ ಬೇಗೆಯ ಬಲೆಗೆ ಸಿಲುಕಿ ಸಾಗುತ್ತಿದ್ದೇವೆ. ಇಂತಹ ವಿಷಣ್ಣ ಸ್ಥಿತಿಯಲ್ಲಿ ಆ ಗೂಢ ಬೆಳಕಿನ ಕಿರು ತೊರೆಯನ್ನಾದರೂ ಪಡೆದುಕೊಳ್ಳಲು ಸಾಧ್ಯವಾಗುತ್ತದೆಯೇ? ಅಥವಾ ಈ ರೀತಿಯಲ್ಲಿ ಪರೀಕ್ಷೆಗೊಳಪಡುತ್ತಲೇ ಸಾಗುವದೇ ದೇವನ ಇಚ್ಛೆಯೂ ಆಗಿದೆಯಾ? ಅಥವಾ ದೇವನ ಸಹನೆಯಾಗಿದೆಯಾ?

ಈ ಎಲ್ಲ ಗೊಂದಲಗಳನ್ನೂ ತೊಡೆದು ಹಾಕಲು ಮತ್ತು ಕತ್ತರಿಸಲೆಂದು ಸಿದ್ಧವಾಗಿ ಆಗಮಿಸಬೇಕಿದೆ. ಆ ರೀತಿಯ ವಿಚಲನದ ಕ್ರಮವನ್ನು ಖಚಿತವಾಗಿಯೂ ತಡೆಯಬೇಕಿದೆ. ಆಗ ಮಾತ್ರವೇ ನಮ್ಮ ಹೃದಯಗಳು ಮುಕ್ತತ್ವವನ್ನು ಪಡೆದುಕೊಳ್ಳಬಲ್ಲವು. ಆ ಹೊಣೆಗಾರಿಕೆಯಿಂದ, ಜೊತೆಗೆ ಅವನ ಭೀಮಶಕ್ತಿಯ ವೈಭವವನ್ನು ಆಹ್ವಾನಿಸುತ್ತಾ, ವ್ಯಾಪ್ತವೇ ಸ್ವರೂಪವಾಗಿರುವ ಶುಭ್ರ ಶಾಂತಿಯನ್ನು ನೆಲೆಗೊಳಿಸುವ ಸಲುವಾಗಿ ಕರೆಯನಿಡುವಾ.

ಜನನ–ಮರಣಗಳ ವಶವರ್ತಿಯಾಗಿರುವ ನನ್ನ ಹೃದಯದಲ್ಲಿಯೇ ಈಗಿದೋ ದೇವನ ವಾಸವಿದೆ. ಇದು ನನಗಿರುವ ಅದೃಷ್ಟ ಮತ್ತು ದೋಷಗಳ ಮಧ್ಯೆ, ಮಲ್ಲ ಯುದ್ಧದಲ್ಲಿಯೇ ಪಕ್ವಗೊಳ್ಳಬೇಕಿದೆ. ಸಾಗಬೇಕಿರುವ ಪಥವೂ ಸಹಿತ ಬರಿ ಜವುಳು, ಕೆಸರು ತುಂಬಿ ಹಾಳುಬಿದ್ದ ಪಥಗಳಾಗಿವೆ. ಈ ಪಥದ ಮೂಲಕವೇ ನಾಮರಾಹಿತ್ಯದ

ನಿರ್ಮಲವನ್ನು ಪಡೆದುಕೊಳ್ಳಬೇಕಾಗಿದೆ. ಅದಕ್ಕಾಗಿ ನನ್ನೊಳಗಿನಿಂದಲೇ ಅಂತರಾತ್ಮದ ಧ್ವನಿ ಅಬ್ಬರಿಸಿ, 'ನಡೆ, ನಡೆ, ಯಾರೂ ನಡೆಯದಾ ಪಥವನ್ನು ಅರಸಿ ಮುಂದೆ ಸಾಗು. ಮತ್ತೂ ಆಳದಾಳಕ್ಕೆ ಆಳದಾಳಕ್ಕೆ ಖನನ ಗೈಯುತ್ತಾ ಅಲ್ಲಿರುವ ಆ ಘನದ ತಲಾತಲದ ಹಂತವನ್ನು ತಲುಪು. ಅಲ್ಲಿರುವ ಆ ರೌದ್ರಪೂರ್ಣತೆಯ ವಾಸ್ತುಶಿಲೆಯನ್ನು ನೀನು ಸ್ಪರ್ಶಗೊಳ್ಳುವವರೆಗೆ ಮುಂದೆ ಸಾಗು. ಇಲ್ಲಿ ಯಾವುದೇ ಬೀಗ ಹಾಕಿದ, ಬಂಧನವನ್ನು ರೂಪಿಸುವ ಯಾವ ದ್ವಾರಗಳೂ ಇಲ್ಲಿ ಇಲ್ಲವೇ ಇಲ್ಲ. ಆ ದ್ವಾರಗಳು ಇದ್ದರೂ ಅವು ತಂತಾನೇ ತೆರೆದುಕೊಳ್ಳುವವರೆಗೂ ಮುಂದುವರೆ' ಎಂದು ಹೇಳುತ್ತಿದೆ.

ಆದರೆ ಒಂದು ಮಿಥ್ಯಾಭಿಮಾನವು ಈಗಾಗಲೇ ಬಿತ್ತಲ್ಪಟ್ಟಿದ್ದು, ಅದು ಸರ್ವ ವಸ್ತುಗಳ ಬೇರಿನಾಳ ಆಳದಲ್ಲಿಯೂ ಹುದುಗಿಕೊಂಡಿದೆ. ಇದು ಈಗ ಕಾಣುತ್ತಿದೆ. ಯಾಕೆ ಈ ರೀತಿಯಲ್ಲಿ ದೇವನ ಗೂಢ–ಪ್ರಶ್ನೆ ಇದೆ? ಏಕೆ ಈ ಸುಪ್ತಿ? ಮೇಲಾಗಿ ಇದಕ್ಕೆ ಧೂಸರದ ಸ್ಫಿಂಕ್ಸ ರಕ್ಷೆ ಕೂಡಾ! ಜೊತೆಗೆ ಆ ವ್ಯಾಲಸರ್ಪವೂ ತನ್ನ ಕ್ರೂರ ರೆಕ್ಕೆಗಳನ್ನು ಚಾಚಿ ರಕ್ಷೆಯನ್ನು ಒದಗಿಸುತ್ತಿದೆ? ಈ ಎಲ್ಲ ಮಸುಮಸುಕು ಆವರಣಗಳು ವರ್ಣಮಯವಾಗಿದ್ದರೂ ನಾನೀಗ ಅವುಗಳನ್ನು ತೊರೆಯಲು ಶಕ್ತನಾಗಿದ್ದೇನೆ, ಜೀವ ಜೀವನದ ಅತೃಪ್ತತೆಯ ಉದಧಿಗಳನ್ನೇ ಯಶಸ್ವಿಯಾಗಿ ಈಜಿಕೊಂಡು ಮುನ್ನಡೆದಿದ್ದೇನೆ. ಆದರೂ ಈ ದುರ್ಗಮದ ಮಾರ್ಗದಲ್ಲಿ ಮೋಹದಲ್ಲಿಯೇ ಸಾಗಿ ತಲ್ಲೀನಗೊಂಡೆ, ಹೀಗಾಗಿ ಈ ಅಧೋಲೋಕದಾ ಬೆಡಗುಗಳಲ್ಲಿ ನಾನು ಬಲುಬೇಗ ಲೀನವಾಗುವಂತಾಯಿತು. ಹೀಗಾಗಿ ಈ ಜಡದ ಬುವಿಯ ಭೀತ ಹೃದಯದಲ್ಲಿ ನಾನು ಬಲದಲ್ಲಿ ನಿಂತು, ಅವಳ ಆ ಸ್ಥೂಲ–ತಮದ ಘಂಟಾನಾದವನ್ನು ಆಲಿಸಲು ಶಕ್ತನಾಗಿದ್ದೇನೆ. ಅವಳ ಯಾತನೆಯ ಮೂಲಗಳನ್ನು ಅವುಗಳ ಅಂಶಗಳನ್ನು ಕಾಣಲು ನಾನೀಗ ಸಮರ್ಥನಾಗಿದ್ದೇನೆ. ಸರ್ವಾಂತರಂಗದಲ್ಲಿಯೂ ನರಕ ಸೃಷ್ಟಿಸುತ್ತಿರುವ ಆ ಘೋರ ಆಂತರ್ಯದ ಹೇತುವನ್ನು ನಾನಿಲ್ಲಿ ಕಂಡುಕೊಂಡಿದ್ದೇನೆ. ಇವುಗಳ ಜೊತೆಗೆ ನನ್ನ ಊರ್ಧ್ವದಲ್ಲಿ ಆ ವ್ಯಾಲಸರ್ಪದ ಮರ್ಮರದ ಘೋರ ಪ್ರಲಾಪವನ್ನು ಕೇಳುತ್ತಿದ್ದೇನೆ. ಅದಕ್ಕೆ ತಾಳದಂತೆ ಆ ಭೂತ–ಬೇತಾಳ ನಿಶೆಯ ಧ್ವನಿಗಳೂ ಅಬ್ಬರಿಸುತ್ತಿವೆ, ತಾಪವನ್ನು ನೀಡುತ್ತಿವೆ.

ಇಂತಹ ಸ್ಥಿತಿಯಲ್ಲಿಯೇ ಚಿಂತನದಲ್ಲಿ ಉಗಮಗೊಂಡಿರುವ ಶೂನ್ಯವನ್ನು ನಾನೀಗ ಛಿದ್ರಗೊಳಿಸಿ, ಈ ತಳವಿರದ ಆಳದಲ್ಲಿಯೇ ನನ್ನನ್ನೂ ಇರಿಸಿಕೊಂಡಿರುವೆ.

ಇದರಿಂದಾಗಿ ನನ್ನ ಪಾದಗಳು ಸದಾ ಹತಾಶೆಯ ಮೆಟ್ಟಲನ್ನೇ ಹತ್ತುವಂತಾಗಿದೆ. ಆದರೆ ಆ ನಿಸ್ಸೀಮ ಕವಚದಂತೆ ಸುರಕ್ಷೆಯನ್ನು ಒದಗಿಸುತ್ತಿರುವ ಆ ದೇವ ವೈಭವದ ದಿವ್ಯ ಭವ್ಯ ಜ್ವಾಲೆಗಳನ್ನು ನಾನೀಗ ಇಲ್ಲಿಗೆ ತರುತ್ತೇನೆ. ತನ್ಮೂಲಕ ಈ ಮನುಜ ತಲವನ್ನು ಅಂತರಂಗದಲ್ಲಿಯೂ ಸಹಿತ ನಿತ್ಯತ್ವದಲ್ಲಿ ಬೆಳಗುಗೊಳಿಸುವಂತೆ ಮಾಡುತ್ತೇನೆ.

ನನ್ನನ್ನು ಸುತ್ತುವರೆದಿದ್ದ ಸರ್ವ ಗವಸುಗಳು, ನನ್ನ ಈ ಭೌತಿಕ ಸ್ವರೂಪದಲ್ಲಿ ಯಾರು ನೆಲೆಗೊಳ್ಳಲು ಅವತರಣಗೊಂಡಿದ್ದಾರೆಯೋ, ಅವರಿಂದಾಗಿಯೇ ಕತ್ತರಿಸಿಕೊಂಡು ಕರಗಿ ಹೋಗುತ್ತಿವೆ. ನನ್ನಿಂದ ದೂರ ದೂರ ಸರಿಯುತ್ತಿವೆ. ಆಗ ನಾನು ಆ ಪರಮದೇವನಾ ವಾಣಿಯನ್ನು ಶ್ರುತಿಗೊಳ್ಳುವದರ ಜೊತೆಗೆ ಅವನಿಚ್ಛೆಯನ್ನು ಪಡೆದುಕೊಳ್ಳುವೆ. ಎಂದಿಗೂ ಬಾಧೆಯನ್ನು ನೀಡದಂತಿರುವ ಸುವಿಶಾಲವಾಗಿರುವ ಆ ಭ್ರಕುಟಿಯಲ್ಲಿ ನಾನೀಗ ಕಂಡುಕೊಳ್ಳುವೆ. ಈ ಅತಲಗಳಲೆಲ್ಲವೂ ತುಂತುಂಬಿಕೊಂಡು, ಜೊತೆಗೆ ಆ ಊರ್ಧ್ವದೆಡೆಗೆ ಸೇತುಬಂಧವಾಗುತ್ತಿದೆ. ಆ ಸ್ವರ್ಣ ಧಾರೆಯದು ಅಭಿಷೇಕಕ್ಕಾಗಿ ಸದಾ ಛಂದದಲ್ಲಿ ಧಾರೆಗೊಳ್ಳುತ್ತಿದೆ. ಆ ನೀಲಮಣಿಯ ಶಿಖರದಡಿಯಲ್ಲಿ ಇಂದ್ರಚಾಪವು ಸೃಷ್ಟಿಗೊಳ್ಳುತ್ತದೆ. ಅದರ ಜೊತೆಗೆ ಜ್ಯೋತಿ–ಮಿಂಚುಗಳು ರಚಿತಗೊಂಡು ದಂಡೆ ದಂಡೆಗಳು ಉಗಮಗೊಳ್ಳುತ್ತಿವೆ. ಇಂತಹ ಅತ್ಯಪೂರ್ವ ಸ್ಪಂದನದಿಂದಾಗಿ ಈ ಬುವಿಯ ಹೃದಯದಲ್ಲಿ ದಿವ್ಯಾಗ್ನಿಯು ಪ್ರಜ್ವಲನಗೊಳ್ಳುತ್ತಿದೆ, ಅಕ್ಷಯದ ಸೂರ್ಯನ ತೇಜ ಪುಂಜಗಳು ಉಜ್ವಲನದಲ್ಲಿ ಶೋಭಾಯಮಾನಗೊಳ್ಳುತ್ತಿವೆ. ಸೃಷ್ಟಿ–ಸೀಮೆಗಳು ಅಚ್ಚರಿಯ ಸಂಧಿ ಸಂಧಿಗಳ ಮಾರ್ಗದಿಂದ ಅವತರಣಗೊಳ್ಳುವ ಚಿತ್ತವು ಛಂದದ ಉತ್ಕಂಠ ಬಂಧದಿಂದ ಸ್ಪಂದಿಸುತ್ತದೆ.

ಈಗಿದೋ ಇಲ್ಲಿ ಋತದ ಸಂಗಾತಿಯಾಗಿರುವ ಆನಂದ ಘನದ ವೈರಾಜ್ಯ ಸರಣಿ ಸರಣಿಗಳು, ದಿವ್ಯ ಜ್ವಾಲೆಗಳ ಮಾಲೆಗಳನ್ನು ಸೃಷ್ಟಿಸಿ ಪ್ರತ್ಯಕ್ಷವಾಗುತ್ತಿವೆ. ಈ ತಲಕ್ಕೂ ಅರುಣ ವರ್ಣದಾ ಸೋಪಾನಗಳ ಪಥದ ಲೀಲೆಯನ್ನು ನಿರ್ಮಿಸುತ್ತಿದೆ. ನಂದನ ವನದ ದೇದೀಪ್ಯಮಾನವಾದ ಸಂಕುಲವು ಇದಾಗಿದ್ದು, ಇಲ್ಲಿಯೂ ಅವತಾರಗೊಳ್ಳುತ್ತಿದೆ. ತಮದ ಅಂತಿಮವನ್ನು ಅದರ ತುರೀಯವಾಸ್ಥೆಗೇರಿಸಿ ತೀವ್ರಗೊಳಿಸುತ್ತಿದೆ.

ಇದಕ್ಕೂ ಕೊಂಚ ಮಿಗಿಲಾದಂತೆ ಇರುವ ಜೀವನದ ಕಡೆಗೆ ನವ್ಯ ದ್ವಾರವೊಂದು ತೆರೆದುಕೊಳ್ಳುತ್ತಿದೆ. ಪರಿಪೂರ್ಣವಾಗಿಯೇ ಆಕೃತಿಗೊಂಡು ರಜತ ಕಾಂತಿಯಲ್ಲಿ

ಸೃಜನಗೊಳ್ಳುತ್ತಿವೆ. ಊರ್ಧ್ವದೆಡೆಯಲ್ಲಿ ರಕ್ಷೆಯಾಗಿರುವ ಸ್ವರ್ಣಿಮಯದ ಆಚ್ಛಾದದ ಜೊತೆಗೆ ಮಿಲನಗೊಂಡು ವರ್ಣಮೇಳಗಳು ಈ ತಲದಲ್ಲಿಯೂ ಕಂಗೊಳಿಸುತ್ತವೆ. ಆ ಭಾಸುರದ ಲೋಕವು ಇಲ್ಲಿ ಅನಾವರಣಗೊಂಡು ಬೃಹತ್ ಲೋಕದ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಅವರ ಈ 'ವೈರಂಭಣದ ಪವನ'ದಲ್ಲಿಯೇ ನನ್ನ ಸ್ವಪ್ನಗಳನ್ನೂ ಇರಿಸುತ್ತಲೇ, ಆ ಸ್ವರ್ಣಿಮದ ಜೊತೆಗೆ ನೀಲಮಯದ ಅಂಬರವನ್ನು (ಗಗನವನ್ನು) ನಾನು ಪಡೆದುಕೊಳ್ಳುತ್ತೇನೆ. ಇಂತಹ ಸಾರೂಪ್ಯದಲ್ಲಿಯೇ ಈ ಬುವಿಯ ಮೇಲೆ ಸಂಚನಗೊಳ್ಳಲು ಆಗಮಿಸಿದ ಅ ಪರಮ ಸತ್ಯವನ್ನು, ನಿತ್ಯ ಸ್ಪಂದನದಲ್ಲಿ ಈಗ ನೆಲೆಯಾಗಿಸಿಕೊಂಡು ಸಾಗುವೆ.

ಈಗಿದೋ ನಾನು ನಿನ್ನ ಪೂರ್ಣ ಕೃಪೆಯ ರಕ್ಷೆಯೊಳಗೆ ಸ್ಪಂದಗೊಳ್ಳುತ್ತಿರುವೆ. ನನ್ನ ಇರುವಿಕೆ ಈಗ 'ಸಾಕ್ಷಿ ಚೈತನ್ಯ'ವಾಗಿದೆ. ಇನಿತು ಸಂಚಲನವಿರದ ಶಾಂತಮಯ ಚಿತ್ತಾಧಿವಾಸಿ ನಾನಿರುವೆ. ಮತ್ತಿದೋ ನಿನ್ನ ವಿಶ್ವ ಶಕ್ತಿಯ ವ್ಯಾಪ್ತ ಲೀಲೆಗಳ ದೃಷ್ಟಿಸುತ್ತಲಿರುವೆ. ಸಾಮರ್ಥ್ಯಪೂರ್ಣವಾಗಿರುತ್ತದೆ. ಅದರ ರೆಕ್ಕೆಗಳು ಅನಂತದಲ್ಲಿ ಚಲಿಸುತ್ತಿರಲು, ಆಗ ಕಾಲವನ್ನೂ ಮೀರಿ ಪ್ಲವನದಲ್ಲಿ ಈಗ ಸಾಗುತ್ತಿರುವ ಸಾವಿರದ – ಅಶ್ವವು ನನ್ನ ಯಾನಕ್ಕೆ ಸಹಕರಿಸುತ್ತಿದೆ. ಈ ಬ್ರಹ್ಮಾಂಡ ಮೌನವು ಘನದಲ್ಲಿದ್ದು ಅದ್ಭುತದ ತೇಜತ್ವವು ಚೈತನ್ಯ ಸುರುಳಿಗಳಲ್ಲಿ ಸದಾ ತತ್ಪರವಾಗಿವೆ. ಆ ತಾರೆ ಮತ್ತು ನೀಹಾರಮಾಲೆ ದೀರ್ಘದಾ ಯಾನಗಳಲ್ಲಿ ಅನಂತತೆಯನ್ನರಸಲೆಂದೇ ನಿತ್ಯ ಸಂಚಾರದಲ್ಲಿವೆ. ನನ್ನ ಸತ್ತೆಯೂ ಕೂಡ ಆ ಭೂಮ–ಸರ್ಪದಂತೆ ಕುಂಡಲಿಗಳಾಗಿ ಜೊತೆಗೆ ವಜ್ರಮಣಿ ಖಚಿತ ಕವಚದ ಜೊತೆಗೆ ವಿಷದಂತದ ಕೋರೆಗಳೂ ಇವೆ. ಈ ಅವಚಿತಿಯ ಮಂದತ್ವವು ಆದರೆ ಅದೇ ಆಳದಿಂದಲೇ, ಈಗ ಉದಿತಗೊಳುತ್ತ, ಸುತ್ತಿ ಸುಳಿಯುತಲಿ ಆರೋಹಗೊಳ್ಳಲು ಸ್ಪಂದಿಸುತ್ತಿರುವ ಮಾನವನ ಮನಸು–ಹೃದಯಗಳಿಗೆ ಈಗಿದೋ ಸ್ಪರ್ಶ ಲಭ್ಯವಾಗುತ್ತಿದೆ. ಇದೇ ಚಿನ್ಮಯದ ಚಿತ್ಸಮಾಧಿ ಸಮಯವಾಗಿದ್ದು, ಆ ಶಾಶ್ವತದ ಹಂತವು ಸಹಿತ ಆ ಪರಮ ತೋಷ ಮತ್ತೆ ದಿವ್ಯ ಭವ್ಯ ವೈಭವದ ವಲಯದೊಳಗೆ, ಈ ಸರ್ವಸ್ವವನ್ನೆಲ್ಲ ನಾನೂ ಧರಿಸಿ, ಅದರ ಒಳಗೆ ಒಳಗೊಂಡು, ಇಲ್ಲಿಯವರೆಗೂ ಸ್ಪರ್ಶಗೊಳ್ಳದೇನೆ ಇದ್ದ ನಿನ್ನ ದುರ್ಭೇದ್ಯ ಜ್ಞಾನಪೂರ್ಣದಾ ಇಚ್ಛೆಯೂ ಇದಕ್ಕೆ ಸಹಮತಿಸುತ್ತ ಆತ್ಮೀಯ ಸ್ಪರ್ಶವನ್ನು ನೀಡುತ್ತಿದೆ. (ಪಿಪಿಕೆ)

---

ಆಧಾರ: ಶ್ರೀ ಅರವಿಂದರ ಪ್ರಾರಂಭಿಕ ಕವನಗಳು (ಸಂಪುಟ 2; 602)



**ಜೀವಾತ್ಮನ ಆಂತರಿಕ ಶತ್ರುಗಳ ಸಮೂಹ**

**– ಅನು: ಪುಟ್ಟು ಕುಲಕರ್ಣಿ**

ತ್ಯಾಗದ ಕುರಿತಾಗಿರುವ ಒಂದು ಅತ್ಯಂತ ಅವಧಾರಣೆಯ ಪರಿಗ್ರಹಿಕೆ ಎಂದರೆ, ಯಾತನಾಪೂರ್ಣವಾಗಿರುವ ಸ್ವಯಂ–ಬಲಿದಾನ (ಆತ್ಮಾಹುತಿ), ಕಠೋರವಾಗಿರುವ ಆತ್ಮಹತ್ಯೆ, ಕಠಿಣಾತಿ ಕಠಿಣವಾಗಿರುವ ರೀತಿಯಲ್ಲಿ ಸ್ವಯಂ–ನಿರ್ಮೂಲನೆ ಎಂದೇ ಪರಿಭಾವಿಸಲಾಗಿದೆ. ಇದು ಸ್ವಯಂ–ವಿಕೃತಿಯನ್ನು ಆರೋಪಣೆಗೊಳಿಸಿಕೊಳ್ಳುವ ಹಂತಕ್ಕೆ ಮತ್ತು ಸ್ವಯಂ–ಪೀಡನೆಯನ್ನು ಹೊಂದುವ ಹಂತಕ್ಕೂ ನಡೆಸಲಾಗುತ್ತಿದೆ. ಮಾನವನಿಗೆ, ಅವನ ಈ ಭೌತಿಕವಾಗಿ ದತ್ತವಾಗಿರುವ ಪ್ರಕೃತಿಯ ಸ್ವರೂಪದಿಂದ ಮುಕ್ತನಾಗಲು, ಅಷ್ಟೊಂದು ಸುಲಭ ಸಾಧ್ಯವಲ್ಲದ ಯಾನದ ಅವಧಿಯಲ್ಲಿ, ಕೆಲವೊಮ್ಮೆ ಅನಿವಾರ್ಯವಾಗಿರಬಹುದು. ಒಂದೊಮ್ಮೆ ಅವನ ಸ್ವಭಾವದಲ್ಲಿರುವ ಅಹಂಕಾರವು ಹಿಂಸೆ ಮತ್ತು ಹಠಮಾರಿತನದಿಂದ ತುಂಬಿಕೊಂಡಿದ್ದಲ್ಲಿ, ಆಗ ಅವುಗಳನ್ನು ಅಂತರಂಗದಲ್ಲಿದ್ದ ಹಿಂಸಾಚಾರದ ಚಿಂತನೆಯನ್ನು ಸಮತೋಲನ–ಗೊಳಿಸಿಕೊಳ್ಳುವದರ ಮೂಲಕ ಮತ್ತು ಆಂತರಿಕವಾಗಿಯೇ ಅವುಗಳನ್ನು ಅದುಮಿಕೊಳ್ಳುವ ಮೂಲಕ ನಿಯಂತ್ರಿಸಬೇಕಾಗುತ್ತದೆ. ಆದರೆ ಗೀತೆಯು ಮಾತ್ರ ಯಾವುದೇ ಕಾರಣಕ್ಕೂ ಈ ರೀತಿಯ ಸ್ವಯಂ ಆರೋಪಣೆಗೊಳಿಸಿಕೊಳ್ಳುತ್ತಿರುವ ಇಂತಹ ಹಿಂಸಾತ್ಮಕವಾಗಿರುವ ಕ್ರಿಯೆಗಳನ್ನು ಒಪ್ಪುವದಿಲ್ಲ. ಏಕೆಂದರೆ ಮಾನವನ

ಅಂತರಂಗದಲ್ಲಿ ಸ್ವಯಂ ಆ ಪರಮ ದೇವನೇ ವಿಕಾಸಗೊಳ್ಳುತ್ತಿದ್ದು – ಅದೂ ಕೃಷ್ಣನೇ ಆಗಿದ್ದಾನೆ. ಏಕೆಂದರೆ ಇವನೇ ವಿಶ್ವದೇವನಾಗಿದ್ದಾನೆ. ಹೀಗಾಗಿ ಈ ಪರಮಾತ್ಮನನ್ನು ಯಾವುದೇ ಕಾರಣಕ್ಕೂ ಹಿಂಸೆಗೆ ಎಡೆಮಾಡುವಂತಿಲ್ಲ. ತೊಂದರೆಗೆ ಸಿಕ್ಕಿಸುವಂತಿಲ್ಲ. ಅಂದರೆ ಯಾವ ರೀತಿಯಲ್ಲಿ ಬೃಹದ್ದೇಹಿಗಳು (ರಕ್ಕಸರು) ಈ ಜಗತ್ತನ್ನು ತೊಂದರೆಗೆ ಒಳಪಡಿಸುತ್ತಿದ್ದಾರೆಯೋ, ಹಿಂಸೆಗೆ ಸಿಲುಕಿಸುತ್ತಿದ್ದಾರೆಯೋ, ಆ ರೀತಿಯಲ್ಲಿ ಹಿಂಸೆಯನ್ನು ಅನುಭವಿಸುತ್ತಿದ್ದರೂ, ಆ ಅಂತರಂಗದಲ್ಲಿಯೇ ವೃದ್ಧಿಗೊಳ್ಳುತ್ತ, ಪೋಷಣೆಗೊಳ್ಳುತ್ತ, ದಿವ್ಯತ್ವದಿಂದ ಕೂಡಿರುವ ಪ್ರಕಾಶಪೂರ್ಣತೆಯಲ್ಲಿ ಕಾಂತಿಗೊಳ್ಳುತ್ತ, ಮತ್ತು ಆನಂದದ ಸುವ್ಯಾಪ್ತವಾಗಿರುವ ಅವಕಾಶದಲ್ಲಿ ಅವಕಾಶಗೊಳ್ಳುತ್ತ ಮತ್ತು ದಿವ್ಯತ್ವದಿಂದ ಕೂಡಿರುವ ಸಾಮರ್ಥ್ಯದಿಂದಲೇ ಸ್ಥಿತವಾಗಿರುತ್ತದೆ. ಇದು ಕೇವಲ ಸ್ವ–ತ್ವವಾಗಿರದೇ, ಅಂತರಂಗದಲ್ಲಿ ಸಮೂಹಗೊಂಡಿರುವ ಜೀವಾತ್ಮನನ್ನು ಪ್ರಗತಿಗೊಳ್ಳದ ಹಾಗೆ ಸದಾ ದ್ವೇಷಿಸುತ್ತಿರುವ ವೈರಿಗಳನ್ನು ನಾವೀಗ ಹಿಮ್ಮೆಟ್ಟಿಸಬೇಕಾಗಿದೆ, ಅವುಗಳನ್ನು ಅಂತರಂಗದಿಂದ ಹೊರದಬ್ಬಬೇಕಾಗಿದೆ, ಅವುಗಳನ್ನು ಕತ್ತರಿಸುವ ಮೂಲಕವೇ ನಮ್ಮ ಈ ಜೀವಾತ್ಮವು ಪ್ರಗತಿ ಹೊಂದಿ ಪೂರ್ಣತೆಯನ್ನು ಸಾಧಿಸಿಕೊಳ್ಳಲು ಅಹರ್ನಿಶಿ ಯತ್ನಿಸಬೇಕಾಗಿದೆ; ಬಯಕೆ, ಹಪಹಪಿಕೆ, ಕ್ರೋಧ, ಅಸಮಾನತೆ, ಲೋಭ, ಬಾಹ್ಯದಲ್ಲಿ ಸುಖಕರವಾಗಿರುವದೆಂದು ಭಾವಿಸಲ್ಪಡುತ್ತಿರುವ ವಸ್ತು–ವಿಷಯಗಳ ಮತ್ತು ದುಃಖಗಳ ಹೆಸರಿನಲ್ಲಿ ನಮ್ಮನ್ನು ಸುತ್ತುವರೆದಿರುವ ಇವುಗಳನ್ನು, ನಿರ್ದಾಕ್ಷಿಣ್ಯವಾಗಿ ತರಿದು (ಕತ್ತರಿಸಿ) ಹಾಕಬಹುದು. ದುಷ್ಟ ಪ್ರವೃತ್ತಿಯಿಂದಲೇ ಪುಷ್ಟಿಗೊಂಡಿರುವ ಈ ದುರಾತ್ಮಗಳ ಸಮೂಹವೆಲ್ಲವೂ ನಮ್ಮಾತ್ಮವನ್ನು ತ್ರುಟಿತಗೊಳಿಸುತ್ತ ಮತ್ತು ಕಷ್ಟಕ್ಕೆ ಈಡು ಮಾಡುತ್ತಿವೆ. ಇವೆಲ್ಲವುಗಳನ್ನೂ ನಮ್ಮ ಸ್ವಯಂ ಅಂಶಗಳೆಂದು ಭಾವಿಸುವಂತಿಲ್ಲ, ಏಕೆಂದರೆ ಇವುಗಳೆಲ್ಲವೂ ನಮ್ಮ ವಾಸ್ತವಿಕ ಮತ್ತು ದಿವ್ಯ ಪ್ರಕೃತಿಯನ್ನು ಅತಿಕ್ರಮಣ ಮಾಡಿಕೊಂಡಿರುತ್ತವೆ. ಇವು ಸದಾ ವಿಕೃತಿಯತ್ತಲೇ ಎಳೆಯುತ್ತಿರುತ್ತವೆ ಎಂದೇ ತಿಳಿದುಕೊಳ್ಳಬೇಕು. ಇದನ್ನೇ 'ತ್ಯಾಗ' ಎನ್ನುವ ಕಠೋರ ಸ್ವರೂಪದಲ್ಲಿಯೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಆದೇ ರೀತಿಯಲ್ಲಿ ಆಚರಣೆಗೂ ತೊಡಗಿಕೊಳ್ಳಬೇಕಾಗುತ್ತದೆ. ಇವು ಎಷ್ಟೇ ಕಷ್ಟವಾಗಿದ್ದರೂ, ಸಾಧಕನು ಮಾತ್ರ ಸದಾ ಇದೇ ಚಿಂತನೆಯಲ್ಲಿಯೇ ಪ್ರಗತಿ ಹೊಂದುತ್ತ ತನ್ನ ಗಮ್ಯವನ್ನು ತಲುಪಬೇಕಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/108–09 – ಶ್ರೀ ಅರವಿಂದರು**



## ಆತ್ಮ ವಿಮೋಚನೆಯಲ್ಲ ಆದರೆ ಆತ್ಮ ತೃಪ್ತಿ

ತ್ಯಾಗ (ಬಲಿದಾನ) ಎನ್ನುವದು ವಾಸ್ತವಿಕವಾಗಿ ಆತ್ಮಬಲಿದಾನವೆಂದು ಅದರ ಸಾರವಲ್ಲ. ಆದರೆ ಇಲ್ಲಿರುವದು ಆತ್ಮ–ಸಮರ್ಪಣ; ಅಂದರೆ ಇಲ್ಲಿ ಆತ್ಮವನ್ನು ನಾಶಗೊಳಿಸಕೊಳ್ಳುವ ಪ್ರಮೇಯವೇ ಉದ್ಭವಿಸುವದಿಲ್ಲ. ಹೀಗಾಗಿ ಇದು ಆತ್ಮಪೂರ್ಣತೆಯಾಗಿದೆ; ಇಲ್ಲಿ ಆತ್ಮವನ್ನು ವಿಘಾತಗೊಳಿಸಿಕೊಳ್ಳುವಂತಿಲ್ಲ, ಆತ್ಮಕ್ಕೆ ಪೀಡೆಯನ್ನೂ ಕೊಡುವಂತಿಲ್ಲ, ಏಕೆಂದರೆ ಆತ್ಮವೇ ಸರ್ವಾತ್ಮವೂ ಆಗಿದ್ದು ಬೃಹತ್ತಾಗಿಯೂ ಇರುತ್ತದೆ, ಅಂದರೆ ನಮ್ಮ ಮುಖ್ಯ ಗುರಿ, ಮಾನವನ ಈ ಅಂಗ ಸ್ವರೂಪದಲ್ಲಿ ಸ್ಥಿತವಿರುವ ಈ ಆತ್ಮದ ರೂಪಾಂತರಣವು ಘಟಿಸಬೇಕಾಗಿದೆ. ಮಾನವನ ಶರೀರವನ್ನೇ ದಿವ್ಯತ್ವದಿಂದ 'ಪೂರ್ಣ'ವಾಗಿಸಬೇಕಿದೆ. ಹೀಗಾಗಿ ಇಲ್ಲಿ ಆತ್ಮ ಪೀಡನೆ ಅಥವಾ ಯಾತನೆಯು ಇರದೇ, ಕಡಿಮೆ ಪ್ರಮಾಣದ ಸಂತುಷ್ಟಿಯಲ್ಲಿಯೇ ಅಧಿಕಾಧಿಕವಾಗಿರುವ ಪರಮಾನಂದವನ್ನು ಪಡೆದುಕೊಳ್ಳು–ವದಾಗಿದೆ. ಆ ದಿಸೆಯತ್ತ ಪ್ರಗತಿಗೊಳ್ಳುವದಾಗಿದೆ.

ಇಲ್ಲಿ ಯಾತನಾಮಯತೆಯಿಂದ ಕೂಡಿರುವಂತೆ ಕಾಣುತ್ತಿರುವ ಒಂದೇ ಒಂದು ಸಂಗತಿ, ಅದೂ ಪ್ರಾರಂಭದ ಹಂತದಲ್ಲಿ, ಎಂದರೆ, ಈ ಪ್ರಕೃತಿಯ

ಅಪರಿಪೂರ್ಣವಾಗಿರುವ ಪ್ರಾರಂಭದ ಹಂತದಲ್ಲಿರುವ ಸ್ಥಿತಿಯಾಗಿದೆ; ಇಲ್ಲಿ ಅತಿ ಮುಖ್ಯವಾಗಿ ಬೇಕಾಗಿರುವದು – ಅನುಶಾಸನ ಹಂತದ ಶಿಸ್ತು ಮತ್ತು ಅಪೂರ್ಣತೆಯಿಂದಲೇ ತುಂಬಿರುವ ಹಂತದ ಅಹಂದಿಂದ ಸದಾ ದೂರವಿರಿಸಿಕೊಳ್ಳಬೇಕಾದಾಗ ಅವಶ್ಯವಿರುವ ನಿರಾಕರಣವನ್ನು ಎನ್ನುವದು ಮುಖ್ಯವಾಗಿದೆ. ಈ ರೀತಿಯಲ್ಲಿ ಸಾಗಿದಲ್ಲಿ, ತೀವ್ರಾತಿ ತೀವ್ರವಾಗಿಯೇ ಈ ಮಹತ್ ಆಗಿರುವ ಅಥವಾ ಪರಿಪೂರ್ಣವಾಗಿರುವ ಸ್ಥಿತಿಗೆ ಸಾಗುತ್ತಿರುವಲ್ಲಿ, ಅಪಾರ ಪ್ರಮಾಣದಲ್ಲಿಯೆ ಪರಿಹಾರಗಳೂ ಲಭ್ಯವಾಗಿ, ಸರ್ವಾತಿ ಸರ್ವವೆಲ್ಲವೂ, ಈ ಬ್ರಹ್ಮಾಂಡದ ಏಕತೆಯಲ್ಲಿ ಸ್ಥಿತಗೊಂಡಿರುವದನ್ನು, ಅದೂ ಪಾರಲೌಕಿಕದ ಆತ್ಮವೂ ಸಹಿತ ಸದಾ ಮುಕ್ತತ್ವದಲ್ಲಿಯೇ ಇರುವ ಸ್ಥಿತಿಯೆಡೆಗೆ ಶೀಘ್ರವಾಗಿ ಸ್ಪಂದಗೊಳ್ಳುತ್ತದೆ. ನಮ್ಮ ತ್ಯಾಗವೂ ಸಹಿತ ಯಾವುದೇ ಪ್ರತಿಫಲವಿಲ್ಲದೇ ಮತ್ತು ಆತ್ಮಪೂರ್ವಕವಾದ ಸ್ವೀಕೃತಿಯಿಲ್ಲದೇ ಉಳಿಯುವದಿಲ್ಲ, ಅದು ಸಫಲಪೂರ್ಣವಾದ ಫಲಿತಗಳನ್ನು ಕೊಡದೇ ಉಳಿಯುವದಿಲ್ಲ. ಏಕೆಂದರೆ ಇದೊಂದು ಆಂತರಿಕವಾಗಿರುವ ವಿನಿಮಯವಾಗಿದ್ದು, ಪರಿವರ್ತನೆಯಾಗಿದ್ದು ಅದು ದೇಹಧಾರಣೆ ಮಾಡಿಕೊಂಡಿರುವ ಜೀವಾತ್ಮನಿಗೂ ಮತ್ತು ನಮ್ಮಲ್ಲಿಯೇ ಇರುವ ಪ್ರಜ್ಞಾಪೂರ್ಣ ಪ್ರಕೃತಿಯ ಮತ್ತು ಶಾಶ್ವತವಾಗಿರುವ ಆತ್ಮ(ಶಕ್ತಿ)ದ ಮಧ್ಯದ ವಿನಿಮಯವಾಗಿರುತ್ತದೆ. ಒಂದು ವೇಳೆ ಯಾವುದೇ ಕಠಿಣ ಪರಿಶ್ರಮದಿಂದಲೂ ಪ್ರತಿಫಲವು ಲಭ್ಯವಾಗದೇ ಇದ್ದಲ್ಲಿ, ಅಥವಾ ಅಂತಹ ಬೇಡಿಕೆಯೂ ಸಲ್ಲಿಸಲ್ಪಡದೇ ಇದ್ದಲ್ಲಿಯೂ ಸಹಿತ, ಅಲ್ಲಿ ಲಭ್ಯವಾಗುತ್ತಿರುವ ಜ್ಞಾನವು ಮಾತ್ರ ಘನಗೊಳ್ಳುತ್ತಲೇ ಸಾಗುತ್ತದೆ. ಇದೇ ಒಂದು ಅತ್ಯದ್ಭುತವಾಗಿರುವ ಪ್ರತಿಫಲವಾಗಿದ್ದು, ಇದನ್ನು ಮಾತ್ರ ಯಾರೂ ತಪ್ಪಿಸಲು ಸಾಧ್ಯವಿಲ್ಲ. ಏಕೆಂದರೆ ಸ್ವಯಂ ಜೀವಾತ್ಮವೂ ಸಹಿತ ತನ್ನಂತರಂದಲ್ಲಿಯೇ ಇರುವ ಪರಮಾತ್ಮನನ್ನು ನಿರಾಸೆಗೊಳಿಸಲು ಎಂದಿಗೂ ಇಚ್ಛಿಸುವದಿಲ್ಲ. ಯಾವುದೇ ಬೇಡಿಕೆ, ಮನವಿ ಇಲ್ಲದೇನೇ, ಆ ದಿವ್ಯ ಶಕ್ತಿಯ ಮತ್ತು ಆ ದಿವ್ಯ ಶಕ್ತಿಯ ಅಸ್ತಿತ್ವದ ಅನುಭವವನ್ನು, ಈ ಅನಂತಾನಂತವಾಗಿರುವ ಸಮೃದ್ಧಿಯ ಆಗರವನ್ನು ದೃಷ್ಟಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/109 – ಶ್ರೀ ಅರವಿಂದರು**

# ಕೋಪ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಶ್ರೀ ಅರಬಿಂದೋ ಅವರಿಂದ ಮಾರ್ಗದರ್ಶನ**

ಹಿಂಸೆಯ ಎಲ್ಲ ರೀತಿಯ ಸ್ವರೂಪಗಳಂತೆ, ಕೋಪವು, ಯಾವಾಗಲೂ ದುರ್ಬಲತೆಯ, ನಿರ್ಬಲತೆಯ, ಅಸಮರ್ಥತೆಯ, ಸಂಕೇತವಾಗಿದೆ. ಈ ಭ್ರಮೆಯು, ನಾವು ಅದಕ್ಕೆ ಕೊಡುವ ಅನುಮೋದನೆಯಿಂದ ಅಥವಾ ಅದನ್ನು ಹೊಗಳಿಕೆಯ ವಿಶೇಷಣದಿಂದ ಮುಚ್ಚುವುದರಿಂದ ಬರುತ್ತದೆ; ಬೆಳಕಿಗೆ ಹೋಲಿಸಿದರೆ, ಕ್ರೋಧವು ಕುರುಡುತನ, ಅಜ್ಞಾನ ಹಾಗೂ ಅಸುರೀತನಕ್ಕೆ ಸಮ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜನೇವರಿ 17, 1961**

ಹೌದು, ಕೋಪವು ಒಂದು ಹಾನಿಕಾರಕ ಮತ್ತು ವ್ಯರ್ಥ ಶಕ್ತಿಯಾಗಿದೆ. ಕೋಪವು, ಕೋಪಗೊಂಡ ವ್ಯಕ್ತಿಗೂ ಮತ್ತು ಎದುರಿನ ವ್ಯಕ್ತಿಗೂ (ಕೋಪಕ್ಕೆ ಗುರಿಯಾದ ವ್ಯಕ್ತಿಗೂ) ಹಾನಿಕಾರಕವಾಗಿದೆ. ನೀನು ಹೇಳುವುದು ಸರಿಯಾಗಿದೆ, ಕೋಪದಿಂದ ಮುಕ್ತಿಯನ್ನು ಹೊಂದಲೇಬೇಕು. ಕೋಪವು ತಕ್ಷಣವೇ ಪ್ರತಿಕೂಲ ಶಕ್ತಿಗಳನ್ನು ಆಹ್ವಾನಿಸುತ್ತದೆ; ನೀವು ಆ ಪ್ರತಿಕೂಲ ಶಕ್ತಿಗಳನ್ನು ಕರೆದಿರುವಿರೋ ಎನ್ನುವಂತೆ.

*

ಇದು (ಕೋಪದಿಂದ ಉಂಟಾದ ಹಿಂಸಾತ್ಮಕ ಸ್ಫೋಟ) ನಿಮ್ಮ ರಕ್ಷಣೆಯಿಂದ ನಿಮ್ಮನ್ನು ಕಿತ್ತುಹಾಕಿದ ಒಂದು ಅನಿರೀಕ್ಷಿತ ಆಕ್ರಮಣವಾಗಿದೆ. ಆದರೆ ನಿಮ್ಮೊಂದಿಗೆ ಕೋಪವನ್ನುಂಟುಮಾಡಿಕೊಳ್ಳುವ ಪ್ರವೃತ್ತಿಯನ್ನು ನೀವು ಬಿಡಬೇಕು ಹಾಗೆಯೇ ಇತರರೊಂದಿಗೆ ತಕ್ಷಣವೇ ಕೋಪಮಾಡಿಕೊಳ್ಳುವ ಪ್ರವೃತ್ತಿಯನ್ನೂ ಸಹ ನೀವು ಬಿಡಬೇಕು – ಏಕೆಂದರೆ ಕೋಪವು ವಿವೇಕವನ್ನು ತೊಂದರೆಗೀಡುಮಾಡುತ್ತದೆ ಮತ್ತು ಶಾಂತವಾದ ಸಮತೋಲನವನ್ನು ಉಳಿಸಿಕೊಳ್ಳುವುದು ಕಷ್ಟಕರವಾಗಿಸುತ್ತದೆ. ಈ ಸಂಪೂರ್ಣ ಸಂಗತಿಯನ್ನು ಹೊರಹಾಕಲೇಬೇಕು ಮತ್ತು ಪ್ರಜ್ಞೆಯು ಚೇತರಿಸಿಕೊಳ್ಳಬೇಕು, ಅದು ಸಂಭವಿಸಿಯೇ ಇಲ್ಲ ಎಂಬಂತೆ ಇರಬೇಕು.

*

ಈ ವಿಷಯಗಳು, ಮಾತಿನ ಕಠೋರ ರೂಪಗಳು, ಕೋಪ, ಇತ್ಯಾದಿಗಳು, ಪ್ರಾಣಿಕ–ಭೌತಿಕ ಪ್ರಜ್ಞೆಯಿಂದ ರೂಪುಗೊಂಡ ಸ್ವಭಾವಗಳಾಗಿವೆ ಮತ್ತು ಅವುಗಳು ಅಜಾಗೃತ ಪ್ರಜ್ಞೆಯ ಬೆಂಬಲ ಹೊಂದಿರುವುದರಿಂದ, ಅವುಗಳನ್ನು ಬದಲಾಯಿಸುವುದು ತುಂಬಾ ಕಷ್ಟ. ಇಚ್ಛಾಶಕ್ತಿಯಿಂದ ಅಥವಾ ಮಾನಸಿಕ ಅಥವಾ ಆಧ್ಯಾತ್ಮಿಕ ನಿಯಂತ್ರಣದಿಂದ, ಅವುಗಳನ್ನು ಜಯಿಸಲು ಅಥವಾ ಬದಲಾಯಿಸಲು ಸಾಧ್ಯವಾದರೆ, ಅದೊಂದು ಉತ್ತಮವಾದ ಸಂಗತಿ. ಆದರೆ, ತಕ್ಷಣವೇ ಅದನ್ನು ಮಾಡಲು ನಮಗೆ ಸಾಧ್ಯವಾಗದಿದ್ದರೆ, ನಾವು ಅಸಮಾಧಾನಗೊಳ್ಳಬಾರದು ಅಥವಾ ಅನರ್ಹರು ಎಂದು ಭಾವಿಸಬಾರದು. ಸ್ವಭಾವದ ಈ ಭಾಗವನ್ನು ಬದಲಾಯಿಸುವುದಕ್ಕಿಂತ ದೈವೀಕತೆಯನ್ನು ಅರಿತುಕೊಳ್ಳುವುದು ಅಥವಾ ಚೈತ್ಯ ಪ್ರಜ್ಞೆಗೆ ಪ್ರವೇಶಿಸುವುದು ಸುಲಭ; ಆದರೆ ಒಮ್ಮೆ ಚೈತ್ಯ ಪ್ರಜ್ಞೆಯು ನಿಯಂತ್ರಗೊಳಿಸಲು ಪ್ರಾರಂಭಿಸಿದರೆ ಅಥವಾ ಉನ್ನತ ಪ್ರಜ್ಞೆಯು ಅವರೋಹಣಗೊಂಡರೆ, ಇವುಗಳನ್ನು ತೊಲಗಿಸುವುದು ತುಂಬಾ ಸುಲಭ. ಆದ್ದರಿಂದ ಈ ಪುನರಾವರ್ತನೆ ಅಥವಾ ನಿರಂತರತೆಯಿಂದ ನೀವು ನಿರುತ್ಸಾಹಗೊಳ್ಳಬಾರದು, ಆದರೆ ಯಾವಾಗಲೂ ಆಂತರಿಕ ಸ್ತಬ್ಧತೆಯ ಸ್ಥಿತಿಯಲ್ಲಿರಲು ಪ್ರಯತ್ನಿಸಿ ಮತ್ತು ಅವುಗಳು ಬಂದರೆ, ಅವುಗಳು ಬೆಳಕಿನಾದ್ಯಂತ ಮೋಡದಂತೆ ಹಾದು ಹೋಗಲಿ. ಕಾಲಾನಂತರದಲ್ಲಿ ಈ ವಿಷಯಗಳು ಅಂತಿಮವಾಗಿ ಬಲದಿಂದ ಅಥವಾ ಶಕ್ತಿಯಿಂದ ಎದುರಿಸಲ್ಪಡುತ್ತವೆ.

*

ಇದು [ಕೋಪದ ವಿಸ್ಫೋಟವು] ನಿಜವಾಗಿಯೂ ಪ್ರಕೃತಿಯ ಹಳೆಯ ಅಭ್ಯಾಸದ ಪುನರಾವರ್ತನೆಯಾಗಿದೆ. ಈ ಕೋಪದ ಹೆಚ್ಚಾಗುವಿಕೆಯ ಮತ್ತು ಅದರ ವಿಸ್ಫೋಟದ ಸಂದರ್ಭವು ಎಷ್ಟು ಕ್ಷುಲ್ಲಕವಾಗಿದೆ ಎಂಬುದನ್ನು ನೋಡಿ – ಅದು ಹೆಚ್ಚು ಹೆಚ್ಚು ಕಾರಣರಹಿತವಾಗುತ್ತದೆ (ಆಕಸ್ಮಿಕವಾಗುತ್ತದೆ) ಮತ್ತು ಅಂತಹ ಕ್ರಿಯೆಗಳ ಅಸಂಬದ್ಧತೆಯು ತಾನಾಗಿಯೇ ಬಹಿರಂಗಗೊಳ್ಳುತ್ತದೆ. ಅದು ನಿಮ್ಮೆಡೆಗೆ ಬಂದಾಗ, ಅದನ್ನು ಶಾಂತವಾಗಿ ಗಮನಿಸಿದರೆ, ಅದನ್ನು ತೊಡೆದುಹಾಕುವುದು ನಿಜವಾಗಿಯೂ ಕಷ್ಟದ ಕೆಲಸವಲ್ಲ. ಏಕೆಂದರೆ, ಕೋಪವು ಮೇಲ್ಮೈಯಲ್ಲಿ ಏರುತ್ತಿರುವಾಗಲೂ ಸಹ (ನಿಮ್ಮ ಇರುವಿಕೆಯ ಒಂದು ಭಾಗದಲ್ಲಿ) ಹಿಂದೆ ಸರಿದು ನಿಂತು, (ನಿಮ್ಮಲ್ಲಿಯ ಯಾರೊ ಒಬ್ಬರು ಕೋಪವನ್ನು ಹೊಂದಿರುವಂತೆ) ಬೇರ್ಪಟ್ಟ ಸಮಚಿತ್ತತೆಯಲ್ಲಿ ಅದನ್ನು ಗಮನಿಸುತ್ತ ನಿಲ್ಲುವುದು ಸಾಧ್ಯವಿದೆ. ಇಲ್ಲಿರುವ ತೊಂದರೆ ಏನೆಂದರೆ, ನೀವು ತಳಮಳಗೊಳ್ಳುವಿರಿ, ದುಃಖಿತರಾಗುವಿರಿ,

ಅಸಮಾಧಾನಗೊಳ್ಳುವಿರಿ ಹಾಗಾಗಿ ಅದು ನಿಮ್ಮ ಮನಸ್ಸಿನ ಮೇಲೆ ಹಿಡಿತ ಸಾಧಿಸಲು ಸುಲಭವಾಗುತ್ತದೆ (ಆದರೆ ಅದು ಹಾಗೆ ಮಾಡಬಾರದು).

*

ನೀವು ಅಂತಹ ಅಲೋಚನೆಗಳನ್ನು ಹೊಂದಿದಾಗ, ಅದು ನೀವು ಕೋಪಗೊಂಡ ವ್ಯಕ್ತಿಯ ಮೇಲೆ ಬೀಳುವ ಬಲವನ್ನು ಹುಟ್ಟುಹಾಕುತ್ತದೆ. ಆತ ಈ ಕೋಪದ ಬಲದಿಂದ ರಕ್ಷಿಸಿಕೊಳ್ಳಲು ಸಿದ್ಧನಿರದಿದ್ದರೆ ಅಥವಾ ಅವನು ಸಂವೇದನಾಶೀಲ ವ್ಯಕ್ತಿಯಾಗಿದ್ದರೆ, ಅದು ಅವನ ಮೇಲೆ ಪರಿಣಾಮ ಬೀರಬಹುದು. ಅದಕ್ಕಾಗಿಯೇ ಅಂತಹ ಆಲೋಚನೆಗಳನ್ನು ಸಂಪೂರ್ಣವಾಗಿ ತಪ್ಪಿಸಬೇಕು.

*

**ಹಳೆಯ ಅಭ್ಯಾಸವನ್ನು ಬಿಡುವುದು**

ಸ್ಥಿರವಾದ ಶಾಂತ ಸ್ಥಿತಿಯನ್ನು ಹೊಂದದೇ ಇರಲು ಮತ್ತು ಕೋಪವು ಮರಳಿ ಬರಲು ಕಾರಣ ಏನೆಂದರೆ ನಿಮ್ಮ ಭೌತಿಕ ಮನಸ್ಸನ್ನು ಸಕ್ರಿಯವಾಗಲು ನೀವು ಅನುಮತಿಸುತ್ತಿರುವಿರಿ. ಸಾಧನೆಗೆ ಸಂಬಂಧಿಸಿದಂತೆ, ನಿಮ್ಮಲ್ಲಿ ಈ ದೋಷವಿದೆ ಎಂದು ಅದು ಯೋಚಿಸಲು ಪ್ರಾರಂಭಿಸುತ್ತದೆ ಮತ್ತು ಅದರಿಂದ ಸಾಧನೆಯು ತಕ್ಷಣಕ್ಕೆ ಪರಿಣಾಮಕಾರಿಯಾಗುವುದಿಲ್ಲ ಮತ್ತು ಪರಿಪೂರ್ಣವಾಗುವುದಿಲ್ಲ. ಇದು ಪ್ರಾಣ ಪುರುಷನನ್ನು ದುರ್ಬಲಗೊಳಿಸುತ್ತದೆ ಅಥವಾ ಎದೆಗುಂದಿಸುತ್ತದೆ ಮತ್ತು ಈ ಖಿನ್ನತೆಯಲ್ಲಿ ಕಿರಿಕಿರಿಯಂತಹ ಸ್ಥಿತಿಯನ್ನು ಹುಟ್ಟುಹಾಕುತ್ತದೆ. ಅದೇ ಸಮಯದಲ್ಲಿ ಈ ಮನಸ್ಸು (ಈ ಘಟನೆಗೆ ಸಂಬಂಧಪಟ್ಟಂತೆ) ಸಕ್ರಿಯಗೊಳ್ಳುತ್ತದೆ ಅಥವಾ ತಾನೇ ನಿರ್ಣಯಿಸಲು ಮತ್ತು ಟೀಕಿಸಲು ಪ್ರಾರಂಭಿಸುತ್ತದೆ ಮತ್ತು ಇದು ಕೂಡ ಆತಂಕಕ್ಕೆ ಮತ್ತು ಕಿರಿಕಿರಿಗೆ ಕಾರಣವಾಗುತ್ತದೆ. ಈ ವಿಷಯಗಳು, ನೀವು ಬಿಡಲೆತ್ನಿಸುತ್ತಿರುವ ಹಳೆಯ ಮನಸ್ಥಿತಿಗೆ ಸೇರಿವೆ ಮತ್ತು ಆದ್ದರಿಂದ ಅವುಗಳು ಏಕಾಗ್ರತೆ ಮತ್ತು ಸ್ತಬ್ಧತೆಯ ಮಾರ್ಗದಲ್ಲಿ (ತಡೆಯಾಗಿ) ನಿಲ್ಲುತ್ತದೆ. ಭೌತಿಕ ಮನಸ್ಸು ಸಲಹೆಗಳನ್ನು ನೀಡುತ್ತಿದ್ದಂತೆಯೇ, ಅವುಗಳನ್ನು ತಿರಸ್ಕರಿಸಬೇಕು ಮತ್ತು ಮೂಲದಲ್ಲಿಯೇ ಅವುಗಳನ್ನು ತಡೆಯಬೇಕು. ಆಂತರಿಕ ಮೌನ ಮತ್ತು ಸ್ತಬ್ಧತೆಯ ಆಧಾರದ ಮೇಲೆ ಹೊಸ ಪ್ರಜ್ಞೆಯೊಂದು ಬರುತ್ತಿದೆ. ಅದು ಅಭಿವೃದ್ಧಿ ಹೊಂದಲು ನೀವು ಸದ್ದಿಲ್ಲದೆ ಕಾಯಬೇಕು. ಜನರ ಹಾಗೂ ಸಂಗತಿಗಳ ನಿಜವಾದ ಜ್ಞಾನ, ನಿಜವಾದ ಗ್ರಹಿಕೆಗಳು ಆ ಹೊಸ ಮೌನ ಪ್ರಜ್ಞೆಯಲ್ಲಿ ಬರುತ್ತವೆ. ಜನರ ಮತ್ತು ವಸ್ತುಗಳ ಬಗ್ಗೆ ಮನಸ್ಸಿನ

ದೃಷ್ಟಿಕೋನವು ಅಗತ್ಯವಾಗಿ ಸೀಮಿತ ಮತ್ತು ದೋಷಯುಕ್ತವಾಗಿರಬೇಕು ಅಥವಾ ತಪ್ಪಾಗಿರಬೇಕು – ಅದರ ಮೂಲಕ ನಿರ್ಣಯಿಸುವುದನ್ನು ಮುಂದುವರಿಸುವುದು ಈಗ ಸಮಯ ವ್ಯರ್ಥ ಮಾಡುವ ಸಂಗತಿಯಾಗಿದೆ. ಹೊಸ ಪ್ರಜ್ಞೆಯು ಅಭಿವೃದ್ಧಿ ಹೊಂದಲು ಮತ್ತು ಹೊಸದಾದ ಹಾಗೂ ನಿಜವಾದ ಬೆಳಕಿನಲ್ಲಿ ಅದು ಎಲ್ಲವನ್ನು ತೋರಿಸುವ ಸಲುವಾಗಿ ಕಾಯಿರಿ. ಆಗ, ಈ ಮನಸ್ಸಿನಿಂದ ಉದ್ಭವಿಸುವ ಮತ್ತು ಮನಸ್ಸು ಹಾಗೂ ಪ್ರಾಣವು ಇಷ್ಟಪಡದ ವಿಷಯಗಳ ವಿರುದ್ಧ ನಿರ್ದೇಶಿಸಲ್ಪಟ್ಟ ಹಿಂಸಾತ್ಮಕ ಅಸಹನೆಯಿಂದ ಅದು ಕೋಪಗೊಳ್ಳುವ ಪ್ರವೃತ್ತಿಯನ್ನು ಹೆಚ್ಚಿಸಲು ಯಾವುದೇ ಆಧಾರವಿಲ್ಲ – ಅಥವಾ ಕಾರಣವಿಲ್ಲದೆ ಅದು ಹೆಚ್ಚಾದರೆ ಅದನ್ನು ಸುಲಭವಾಗಿ ತಿರಸ್ಕರಿಸಬಹುದು. ಸಾಧನೆಗಾಗಿ, ಶ್ರೀಮಾತೆಯವರ ಅನುಗ್ರಹ ಮತ್ತು ಅವರ ಪ್ರಭಾವವನ್ನು ಅವಲಂಬಿಸಿ ಮತ್ತು ಎರಡು ಸಂಗತಿಗಳನ್ನು ಮಾತ್ರ ಉಳಿಸಿಕೊಳ್ಳುವುದನ್ನು ನೆನಪಿನಲ್ಲಿಡಿ – ಶಾಂತ ಸ್ಥಿತಿ ಮತ್ತು ಆತ್ಮವಿಶ್ವಾಸ. ವಿಷಯಗಳು ಮತ್ತು ಜನರು, ಅವುಗಳನ್ನು ಶ್ರೀಮಾತೆಯವರಿಗೆ ಬಿಟ್ಟುಬಿಡಿ; ನಿಮ್ಮ ಸ್ವಭಾವದಲ್ಲಿ ನಿಮಗೆ ತೊಂದರೆಗಳಿರುವಂತೆ, ಅವುಗಳೂ ಸಹ ತೊಂದರೆಯನ್ನು ಹೊಂದಿವೆ; ಆದರೆ ಅವರೊಂದಿಗೆ ವ್ಯವಹರಿಸಲು ಅರಿವು, ಸಹಾನುಭೂತಿ, ತಾಳ್ಮೆ ಬೇಕು.

*

ಆಂತರಿಕ ಇಚ್ಛಾಶಕ್ತಿಯು ಕೆಲವೊಮ್ಮೆ ಮೇಲುಗೈ ಸಾಧಿಸುತ್ತದೆ, ಕೆಲವೊಮ್ಮೆ (ತತ್ಕಾಲಕ್ಕೆ) ಅದು ಮೇಲುಗೈ ಸಾಧಿಸುವುದಿಲ್ಲ. ಅದು ಸಹಜವಾದ ಸಂಗತಿ. ಇದು ಭೌತಿಕ ಮನಸ್ಸು ನೋಡದ ಕೆಲವು ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಜ್ಞಾನವು ಬೆಳೆದಂತೆ, ನಾವು ಈ ಕಾಣದ ಪರಿಸ್ಥಿತಿಗಳ ಬಗ್ಗೆ ಅರಿವನ್ನು ಹೊಂದುತ್ತೇವೆ ಮತ್ತು ಏನಾಗುತ್ತದೆ ಎಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/267–70**

**ನಿರಾಕರಣೆ**

ಕೋಪವು (ಮತ್ತು ಇತರೇ ಸಂಗತಿಗಳು) ಒಮ್ಮೆ ಬರುತ್ತಿದ್ದುದರಿಂದ, ಅದು ಅಲ್ಪಾವಧಿಯಲ್ಲಿಯೇ ಸಾಯಲು ಸಾಧ್ಯವಿಲ್ಲವೆಂದು ಅರ್ಥವಲ್ಲ, ಆದ್ದರಿಂದ ಅವನ ನಂಬಲಸಾಧ್ಯತೆಯು ಸಮರ್ಥನೀಯವಲ್ಲ. ಈ ಸಂಗತಿಗಳು ಹೋಗುವ ವಿಧಾನವು ಇದಾಗಿದೆ. ಅವುಗಳು ಜೋರಾಗಿ ಬರುತ್ತವೆ ಮತ್ತು ಅವುಗಳನ್ನು ಹೊರ ಹಾಕಲು

ಬಳಸುವ ಬಲವನ್ನು ವಿರೋಧಿಸುತ್ತವೆ, ಅವುಗಳನ್ನು ನಿರಾಕರಿಸಿದಾಗಲೂ ಮತ್ತು ಪ್ರಜ್ಞೆಯಲ್ಲಿ ಬದಲಾವಣೆ ಇದ್ದರೂ, ಅವುಗಳು ತಮ್ಮ ಬಲವನ್ನು ಕಳೆದುಕೊಳ್ಳುತ್ತವೆ ಮತ್ತು ಅವುಗಳು ಬಂದಾಗ, ಪ್ರಜ್ಞೆಯು ಅವುಗಳನ್ನು ಸದ್ದಿಲ್ಲದೆ ನಿರಾಕರಿಸುತ್ತದೆ.

**ಕೋಪವು ಹೊರಗಿನಿಂದ ಬರುತ್ತದೆ**

ಅಷ್ಟು ಬಲದೊಂದಿಗೆ ಬರುವಂಥ ಕೋಪವು ನಿಮ್ಮೊಳಗಡೆ ಇಲ್ಲ, ಆದರೆ ಅದು ಹೊರಗಿನಿಂದ ಬರುತ್ತದೆ ಎನ್ನುವ ಅಂಶವನ್ನು ತೋರಿಸಲು ಸಾಕು. ಕೋಪವು, ವಿಶ್ವಾತ್ಮಕ ಲಕ್ಷಣದಿಂದ ಮುನ್ನುಗ್ಗುವ ಬಲವಾಗಿದೆ ಮತ್ತು ಇದು ವ್ಯಕ್ತಿಯ ಅಸ್ತಿತ್ವವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸುವ ಮತ್ತು ಆ ವ್ಯಕ್ತಿಯನ್ನು ಈ ಬಾಹ್ಯ ಬಲದ ಇಚ್ಛೆಗನುಸಾರವಾಗಿ (ಆದರೆ, ಒಳಗಿರುವ ಆತ್ಮನ ಇಚ್ಛೆಯಂತೆ ಅಲ್ಲ) ಕೆಲಸ ಮಾಡುವಂತೆ ಮಾಡುವ ಬಲವಾಗಿದೆ. ಈ ಸಂಗತಿಗಳು ಸಾಧನೆಯನ್ನು ಮಾಡುವಾಗ ಬರುತ್ತವೆ. ಏಕೆಂದರೆ ಸಾಧಕನು, ನಿಮ್ನ ಪ್ರಕೃತಿಯಿಂದ ತನ್ನನ್ನು ತಾನು ಮುಕ್ತಗೊಳಿಸಿಕೊಳ್ಳಲು ಮತ್ತು ಶ್ರೀಮಾತೆಯವರೆಡೆಗೆ ಹೊರಳಲು ಮತ್ತು ಅವರ ದಿವ್ಯ ಪ್ರಜ್ಞೆಯಲ್ಲಿ ಹಾಗೂ ಉನ್ನತ ಪ್ರಕೃತಿಯಲ್ಲಿ ಇರಲು ಪ್ರಯತ್ನಿಸುತ್ತಿರುತ್ತಾನೆ. ನಿಮ್ನ ಸ್ವಭಾವದ ಶಕ್ತಿಗಳು ಅದನ್ನು ಬಯಸುವುದಿಲ್ಲ ಮತ್ತು ಆದ್ದರಿಂದ ಅವುಗಳು ತಮ್ಮ ಆಳ್ವಿಕೆಯನ್ನು ಮರುಪಡೆಯಲು ಈ ಉಲ್ಬಣಗಳನ್ನು ಸೃಷ್ಟಿಸುತ್ತವೆ. ಅದು ಬಂದಾಗ, ಶ್ರೀಮಾತೆಯವರನ್ನು ನೆನೆಯುತ್ತ ಅಥವಾ ಅವರನ್ನು ಕರೆಯುತ್ತ ಶಾಂತ ಚಿತ್ತವಾಗಿರುವುದು ಅವಶ್ಯವಾಗಿದೆ ಮತ್ತು ಕೋಪವನ್ನು (ಕೋಪ ಅಥವಾ ಮತ್ತೇನೆ ಇರಲಿ, ಅದು ಬಂದಾಗ, ಮತ್ತೆ ತಿರುಗಿ ಬಂದಾಗಲೂ) ಅದನ್ನು ತಿರಸ್ಕರಿಸಬೇಕು. ಅದನ್ನು ಮಾಡಿದ್ದೆ ಆದರೆ, ಈ ಶಕ್ತಿಗಳು ಆಕ್ರಮಣ ಮಾಡುವ ಶಕ್ತಿಯನ್ನು ಕಳೆದುಕೊಳ್ಳಲು ಪ್ರಾರಂಭಿಸುತ್ತವೆ. ಅವುಗಳು ಬಾಹ್ಯ ಶಕ್ತಿಗಳಾಗಿವೆ ಮತ್ತು ನಮಗೆ ಪರಕೀಯವಾಗಿವೆ ಎಂದು ಸ್ಪಷ್ಟವಾಗಿ ನಾವು ಭಾವಿಸಿದರೆ, ಅದು ಸುಲಭವಾಗುತ್ತದೆ; ಅವುಗಳು ಪ್ರವೇಶಿಸಿದಾಗಲೂ ಸಹ ನೀವದನ್ನು ಅನುಭವಿಸದಿದ್ದರೆ, ಮನಸ್ಸು ಆ ಕಲ್ಪನೆಯನ್ನು ಉಳಿಸಿಕೊಳ್ಳಬೇಕು ಮತ್ತು ಅವುಗಳನ್ನು ಪ್ರಕೃತಿಯ ಒಂದು ಭಾಗವಾಗಿ ಸ್ವೀಕರಿಸಲು ನಿರಾಕರಿಸಬೇಕು. ತೀಕ್ಷ್ಣವಾಗಿರುವುದರ ಕುರಿತಾದ ಶ್ರೀಮಾತೆಯ ವರಕಲ್ಪನೆಯು, ಅದನ್ನು ಪ್ರವೇಶಿಸಲು ಸಹಾಯ ಮಾಡುವ ಸಲುವಾಗಿ ಆಕ್ರಮಣಕಾರಿ ಶಕ್ತಿಯೊಂದಿಗೆ ಬಂದ ಸಲಹೆ ಆಗಿತ್ತು ಎಂಬುದಂತೂ ನಿಶ್ಚಯ. ಇಂತಹ ಸಲಹೆಗಳು ವಂದನೆ (ಪ್ರಣಾಮ) ಸಲ್ಲಿಸುವ ಸಮಯದಲ್ಲಿ ಅನೇಕ

ಸಾಧಕರಿಗೆ (ಮೊದಲಿನಷ್ಟು ಹೆಚ್ಚಲ್ಲ) ಬರುತ್ತವೆ ಮತ್ತು ಇದು ಅವರಿಗೆ ಹೆಚ್ಚಿನ ತೊಂದರೆಯ ಕಾರಣವಾಗಿದೆ. ಇಂತಹ ಸಲಹೆಗಳನ್ನು ತಕ್ಷಣವೇ ನಿರಾಕರಿಸಬೇಕು.

*

ವಾಸ್ತವವಾಗಿ ಈ ಎಲ್ಲಾ ಅಜ್ಞಾನದ ಪ್ರಾಣಿಕ ಚಟುವಟಿಕೆಗಳು ಅಜ್ಞಾನದ ವಿಶ್ವಾತ್ಮಕ ಸ್ವಭಾವದಲ್ಲಿ ಹೊರಗಿನಿಂದ ಹುಟ್ಟಿಕೊಂಡಿವೆ; ಮನುಷ್ಯನು ತನ್ನ ಇರುವಿಕೆಯ ಮೇಲ್ಮೈ ಭಾಗಗಳಲ್ಲಿ, ಮಾನಸಿಕ, ಪ್ರಾಣಿಕ, ಭೌತಿಕದಲ್ಲಿ, ಹೊರಗಿನ ಈ ಅಲೆಗಳಿಗೆ ಕೆಲವು ಪ್ರತಿಕ್ರಿಯೆಗಳ ವ್ಯವಸ್ಥೆಯನ್ನು ರಚಿಸುತ್ತಾನೆ. ಆತ ತನ್ನ ಸ್ವಂತ ಸ್ವಭಾವಗಳನ್ನಾಗಿ (ಕೋಪ, ಆಸೆ, ಲೈಂಗಿಕತೆ ಇತ್ಯಾದಿ) ಪರಿಗಣಿಸುವುದು ಈ ಪ್ರತಿಕ್ರಿಯೆಗಳನ್ನು ಮತ್ತು ಇವುಗಳು ಇಲ್ಲದಿದ್ದರೆ ಆತ ಇರಲು ಸಾಧ್ಯವಿಲ್ಲವೆಂದು ಭಾವಿಸುತ್ತಾನೆ. ಆದರೆ ಅದು ಹಾಗಲ್ಲ; ಅವನು ಬದಲಾಗಬಹುದು. ಅವನೊಳಗೆ ಆಳವಾದ ಮತ್ತೊಂದು ಪ್ರಜ್ಞೆಯಿದೆ, ಅವನ ನಿಜವಾದ ಆಂತರಿಕ ಪುರುಷ, ಅದು ಅವನ ನಿಜವಾದ ಸ್ವಭಾವ, ಆದರೆ ಬಾಹ್ಯ ಸ್ವಭಾವದಿಂದ ಆವರಿಸಲ್ಪಟ್ಟಿದೆ. ಇದು ಸಾಮಾನ್ಯ ಮನುಷ್ಯನಿಗೆ ತಿಳಿದಿರುವುದಿಲ್ಲ, ಆದರೆ ಯೋಗಿಯು ತನ್ನ ಸಾಧನೆಯಲ್ಲಿ ಮುಂದುವರೆದಂತೆ ಅದರ ಬಗ್ಗೆ ಅವನಿಗೆ ಅರಿವು ಮೂಡುತ್ತದೆ. ಸಾಧನೆಯಿಂದ ಈ ಆಂತರಿಕ ಪುರುಷನ ಪ್ರಜ್ಞೆಯು ಹೆಚ್ಚಾಗುತ್ತಿದ್ದಂತೆ ಮೇಲ್ಮೈ ಸ್ವಭಾವ ಮತ್ತು ಅದರ ಪ್ರತಿಕ್ರಿಯೆಗಳನ್ನು ಹೊರಗೆ ತಳ್ಳಲಾಗುತ್ತದೆ ಮತ್ತು ಅದನ್ನು ಸಂಪೂರ್ಣವಾಗಿ ತೊಡೆದುಹಾಕಬಹುದು. ಆದರೆ ಅಜ್ಞಾನದ ವೈಶ್ವಿಕ ಸ್ವಭಾವವು ಹೋಗಲೆಂದು ಬಯಸುವುದಿಲ್ಲ ಮತ್ತು ಹಳೆಯ ಕ್ರಿಯೆಗಳನ್ನು ಸಾಧಕ ಮೇಲೆ ಎಸೆದು ಅವುಗಳನ್ನು ಮತ್ತೆ ಆತನೊಳಗೆ ಬರಲೆಂದು ಪ್ರಯತ್ನಿಸುತ್ತದೆ; ಅಭ್ಯಾಸದ ಕಾರಣದಿಂದಾಗಿ ಬಾಹ್ಯ ಸ್ವಭಾವವು ಹಳೆಯ ಪ್ರತಿಕ್ರಿಯೆಗಳನ್ನು ನೀಡುತ್ತದೆ. ಈ ಸಂಗತಿಗಳು ಹೊರಗಿನಿಂದ ಬಂದವು ಮತ್ತು ನಿಜವಾಗಿಯೂ ತನ್ನ ಭಾಗವಲ್ಲ ಎಂಬ ದೃಢವಾದ ಜ್ಞಾನವನ್ನು ಪಡೆಯಲು ಸಾಧ್ಯವಾದರೆ, ಆಗ ಅಂತಹ (ಮರಳಿ ಬರುವ) ಸಂಗತಿಗಳನ್ನು ತಿರಸ್ಕರಿಸುವುದು ಸಾಧಕನಿಗೆ ಸುಲಭವಾಗುತ್ತದೆ, ಅಥವಾ ಅವುಗಳು ಹಿಡಿತ ಸಾಧಿಸಿದರೆ, ಅವನು ಬೇಗನೆ ಅವುಗಳಿಂದ ಮುಕ್ತಿಯನ್ನು ಸಾಧಿಸಬೇಕು. ಅದಕ್ಕಾಗಿಯೇ, ಈ ವಿಷಯಗಳು ನಿಮ್ಮೊಳಗೆ ಹುಟ್ಟುವುದಿಲ್ಲ, ಅವುಗಳು ಹೊರಗಿನಿಂದ ಬರುತ್ತವೆ ಎಂದು ನಾನು ಪದೇ ಪದೇ ಹೇಳುತ್ತೇನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/270–74**

## ಕೋಪವನ್ನು ವ್ಯಕ್ತಪಡಿಸುವುದು

ಒಂದು ಪ್ರಚೋದನೆಗೆ ಅಥವಾ ಒಂದು ಕ್ರಿಯೆಗೆ ಒಂದು ಭಾವನೆಯನ್ನು ವ್ಯಕ್ತಪಡಿಸುವ ಒಂದು ಕಲ್ಪನೆಯನ್ನು ನೀನು ಯಾವಾಗಲೂ ಹೊಂದಿರುವಿ ಎಂದು ನನ್ನ ಭಾವನೆ. ಈ ಭಾವವನ್ನು ವ್ಯಕ್ತಪಡಿಸುವಿಕೆಯ ಮಾರ್ಗವು ಅತ್ಯಂತ ಉತ್ತಮ ಮಾರ್ಗವಾಗಿದೆ ಮತ್ತು ಪ್ರಚೋದನೆಯಿಂದ ಮುಕ್ತಿ ಹೊಂದಲು ಇದು ಏಕೈಕ ಮಾರ್ಗವಾಗಿದೆ. ಆದರೆ ಅದು ತಪ್ಪಾಗಿ ಅರ್ಥೈಸಿಕೊಂಡ ಕಲ್ಪನೆಯಾಗಿದೆ. ನೀವು ಕೋಪಕ್ಕೆ ನಿಮ್ಮ ಭಾವವನ್ನು ನೀಡಿದರೆ, ಕೋಪದ ಮರುಕಳಿಸುವಿಕೆಯ ಅಭ್ಯಾಸವನ್ನು ನೀವು ದೀರ್ಘಗೊಳಿಸುತ್ತೀರಿ ಅಥವಾ ದೃಢೀಕರಿಸುತ್ತೀರಿ; ಆ ಅಭ್ಯಾಸದಿಂದ ನೀವು ಮುಕ್ತರಾಗುವುದಿಲ್ಲ ಅಥವಾ ಅದರ ಮರುಕಳಿಸುವಿಕೆಯನ್ನು ಕಡಿಮೆಗೊಳಿಸುವುದಿಲ್ಲ. ನಮ್ಮ ಸ್ವಭಾವದಲ್ಲಿನ ಕೋಪದ ಶಕ್ತಿಯನ್ನು ದುರ್ಬಲಗೊಳಿಸಲು ಮತ್ತು ನಂತರ ಅದರಿಂದ ಸಂಪೂರ್ಣ ಮುಕ್ತಿ ಹೊಂದಲು ಇರುವ ಮೊದಲ ಹೆಜ್ಜೆ ಏನೆಂದರೆ ಕಾರ್ಯದಲ್ಲಿ ಅಥವಾ ಮಾತಿನಲ್ಲಿ ಅದಕ್ಕೆ ಭಾವವನ್ನು ವ್ಯಕ್ತಪಡಿಸಲು ನಿರಾಕರಿಸುವುದು. ನಂತರ, ಆಲೋಚನೆಯಿಂದ ಮತ್ತು ಭಾವನೆಯಿಂದ ಅದನ್ನು ಹೊರಹಾಕುವ ಯಶಸ್ಸಿನ ಹೆಚ್ಚಿನ ಸಾಧ್ಯತೆಯೊಂದಿಗೆ ನಾವು ಮುಂದುವರಿಯಬಹುದು. ಮತ್ತು ಇದರಂತೆಯೇ ಎಲ್ಲ ಇತರ ತಪ್ಪು ಕ್ರಿಯೆಗಳೊಂದಿಗೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/272**

## ಪ್ರಚೋದನೆಯನ್ನು ತಿರಸ್ಕರಿಸುವುದು

[ಪ್ರಚೋದನೆಯಿಂದ] ದೂರ ಸರಿಯುವ ಅರ್ಥದಲ್ಲಿ, ಅದನ್ನು ತಿರಸ್ಕರಿಸಲು ನಿಮಗೆ ಕಷ್ಟವಾಗಿದ್ದರೆ, ನೀವು ಮಾಡಬೇಕಾಗಿರುವುದೇನೆಂದರೆ, ಅನುಮತಿಯನ್ನು ನಿರಾಕರಿಸುವುದು. ಉದಾಹರಣೆಗೆ, ಧ್ವನಿಗಳು ಅಥವಾ ಸಲಹೆಗಳಿಗೆ ಸಂಬಂಧಿಸಿದಂತೆ, ಅವುಗಳಿಗೆ ಕಿವಿಗೊಡಬಾರದು, ಅವುಗಳು ನೀವು ಏನನ್ನು ನಂಬಬೇಕೆಂದು ಬಯಸುತ್ತವೆಯೊ ಅದನ್ನು ನಂಬಬಾರದು, ಅವುಗಳು ನೀವು ಏನನ್ನು ಮಾಡಬೇಕೆಂದು ಬಯಸುತ್ತವೆಯೊ ಅದನ್ನು ಮಾಡಬಾರದು.

*

ಕೋಪವು ಪ್ರಾಣಿಕ ಸ್ವಭಾವದಿಂದ ಬರುತ್ತದೆ ಅಥವಾ ಅದನ್ನು ಅಲ್ಲಿಂದ ಹೊರಹಾಕಲ್ಪಟ್ಟರೆ, ಅದು ಅರೆ ಪ್ರಜ್ಞೆಯಿಂದ ಅಥವಾ ಪರಿಸರದ ಸ್ವಭಾವದಿಂದ ಅದರಲ್ಲಿ ಪುನಃ ಹೆಚ್ಚಾಗುತ್ತದೆ.

*

ಈ ನಿರಾಕರಣೆಯು, ಕೋಪ ಮತ್ತು ಲೈಂಗಿಕ ಬಯಕೆಗಳಂತಹ ವಿಷಯಗಳನ್ನು ತೊಡೆದು ಹಾಕಲು ಒಂದು ಮಾರ್ಗವಾಗಿದೆ – ಅವುಗಳನ್ನು ತಿರಸ್ಕರಿಸಿದಾಗ, ಅವುಗಳು ಅರೆ ಪ್ರಜ್ಞೆಯಲ್ಲಿ ಮುಳುಗಿಹೋಗುತ್ತವೆ ಅಥವಾ ಸುತ್ತಮುತ್ತಲಿನ (ಪರಿಸರ) ಪ್ರಜ್ಞೆಗೆ ಹೋಗುತ್ತವೆ, ಅದರ ಮೂಲಕ ನಾವು ವಿಶ್ವ ಶಕ್ತಿಗಳೊಂದಿಗೆ ಸಂಪರ್ಕ ಹೊಂದುತ್ತೇವೆ. ಅವುಗಳು ಅರೆ ಪ್ರಜ್ಞೆಯಿಂದ ಮತ್ತೆ ಮೇಲೆಳಲು ಪ್ರಯತ್ನಿಸಬಹುದು ಅಥವಾ ಹೊರಗಡೆಯಿಂದ ಮತ್ತೆ ಒಳಗಡೆ ಬರಬಹುದು; ಆದರೆ, ಶ್ರೀಮಾತೆಯವರ ಸಹಾಯವನ್ನು ಯಾಚಿಸುತ್ತ ಅವುಗಳನ್ನು ನಿರಾಕರಿಸಿದರೆ ಮತ್ತು ನಿಮ್ಮ ಮೇಲೆ ಹಿಡಿತವನ್ನು ಸಾಧಿಸಲು ಬಿಡದಿದ್ದರೆ, ಅವುಗಳ ಪುನರಾವರ್ತನೆಯ ಬಲವು ಕ್ಷೀಣಿಸುತ್ತದೆ ಮತ್ತು ಮುಂದೆ ಅವುಗಳು ಇನ್ನೆಂದಿಗೂ ಬರುವುದಿಲ್ಲ. ಕೆಲವೊಮ್ಮೆ, ಒಂದು ನಿರ್ಣಾಯಕ ನಿರಾಕರಣೆಯು, ಒಂದೇ ಹೊಡೆತದಲ್ಲಿ, ನಿರ್ಣಾಯಕವಾಗಿ ಅವುಗಳಿಂದ ಮುಕ್ತಿಯನ್ನು ಹೊಂದಬಹುದು.

*

ಕೋಪ, ಬಯಕೆ, ಇತ್ಯಾದಿಗಳಿಂದ ನೀವು ಮುಕ್ತಿಯನ್ನು ಹೊಂದಬೇಕಾಗಿದ್ದರೆ, ಅದು ಅವುಗಳನ್ನು ನಿರಾಕರಿಸುವುದರಿಂದ ಮಾತ್ರ, ಅವುಗಳು ಬಂದಾಗ, ಅವುಗಳಿಂದ ಹಿಂದೆ ಸರಿದು ನಿಲ್ಲಬೇಕು (ನಿಮ್ಮ ಮನಸ್ಸಿನಲ್ಲಿ). ಅವುಗಳತ್ತ ನೋಡಿ “ನಾನಿದನ್ನು ಬಯಸುವುದಿಲ್ಲ” ಎಂದು ಹೇಳಬೇಕು. ನೀವು ಬಯಸದೆ ಇದ್ದಾಗಲೂ ಮತ್ತು ನಿರಾಕರಣೆಯ ಹೊರತಾಗಿಯೂ ಅದು ಬಂದರೆ, ಅದು ನಿಮ್ಮ ಸ್ವಯಂಕ್ರಿಯೆ ಅಲ್ಲಾ ಎನ್ನುವುದನ್ನು ತೋರಿಸುತ್ತದೆ. ಆದರೆ ಅದು ಬಾಹ್ಯ ಪ್ರಕೃತಿಯಿಂದ ನಿಮ್ಮ ಮೇಲೆ ಎಸೆದಂಥ ಸಂಗತಿಯಾಗಿದೆ. ಅವುಗಳು ನಿಮಗೆ ಸೇರಿಲ್ಲ ಎನ್ನುವುದನ್ನು ಕಂಡುಕೊಂಡರೆ ಮತ್ತು ಭಾವಿಸಿದರೆ, ಆಗ ನೀವು ಕೋಪದಿಂದ, ಬಯಕೆಯಿಂದ ಹಾಗೂ ನಿಮ್ಮನ್ನು ಪೀಡಿಸುವ ಇತರೇ ಸಂಗತಿಗಳಿಂದ (ಹಂತಗಳಲ್ಲಿ) ಮುಕ್ತಿಯನ್ನು ಹೊಂದಬಹುದು.

*

**ಚೈತ್ಯ ಪುರುಷ ಮತ್ತು ಸಾತ್ವಿಕ ಕೋಪ**

ಕೋಪವು, ಶಾಂತಿ ಮತ್ತು ಸಾಮರಸ್ಯವನ್ನು ಮರಳಿ ತಂದಿರುವುದು ಅಸ್ವಾಭಾವಿಕ ಸಂಗತಿ ಅಲ್ಲವೇ ಅಲ್ಲ: ಏಕೆಂದರೆ, ಈ ಕೋಪವು ದೇವರಿಗೆ ನಿಷ್ಠೆಯ ಒಂದು ರೂಪವಾಗಿದೆ ಮತ್ತು ಅದು ಮರಳಿ ನಿಮ್ಮನ್ನು ನಿಮ್ಮ ಚೈತ್ಯ ಪ್ರಜ್ಞೆಯ ಸ್ಪರ್ಶದಲ್ಲಿರಿಸುತ್ತದೆ. ಶ್ರೀ ರಾಮಕೃಷ್ಣರು ಕೋಪದ ಬಗ್ಗೆ ಹೇಳಿರುವುದು ಸರಿಯಾಗಿದೆ. ಪ್ರತಿಕೂಲ ಶಕ್ತಿಗಳು ಸೌಮ್ಯತೆಯ ಮತ್ತು ಮಾಧುರ್ಯದ ಮತ್ತು ಪ್ರತಿಭಟನೆಯ ಮತ್ತು ಆತ್ಮ–ಶಕ್ತಿಯ ವಿರುದ್ಧದ ಪುರಾವೆಯಾಗಿವೆ, ಆದರೆ ಸಾತ್ವಿಕ ಕೋಪದ ಪ್ರವಾಹವು ಅವುಗಳನ್ನು ಚದುರಿಸುತ್ತದೆ.

*

**ಪ್ರತೀಕಾರ ಸ್ವಭಾವ ಮತ್ತು ಕ್ರೂರತೆ**

ನಿಜವಾದ ಕಾರಣವಿದ್ದು ಅಥವಾ ಕಾರಣ ಇರದೆ ಇರುವ ಪ್ರತೀಕಾರದ ಸ್ವಭಾವವು ಕೋಪಕ್ಕಿಂತ ಕೆಟ್ಟದಾಗಿದೆ. ಏಕೆಂದರೆ, ಅದು ಅದರ ಕ್ರಿಯೆಯಲ್ಲಿ ಹೆಚ್ಚು ಮೌನವಾಗಿರುತ್ತದೆ ಮತ್ತು ಉದ್ದೇಶಪೂರ್ವಕವಾಗಿರುತ್ತದೆ ಮತ್ತು ಅದರ ಪ್ರಚೋದನೆ ಕಡಿಮೆಯಾಗಿರುತ್ತದೆ. ನಾವು ಸ್ವಭಾವದಲ್ಲಿ ಉದಾರವಾಗಿರಬೇಕು ಮತ್ತು ಎಲ್ಲ ಕೋಪದಿಂದ ಮುಕ್ತರಾಗಿರಬೇಕು.

*

ನೀವು ಕ್ರೂರತೆಯಿಂದ ಮುಕ್ತರಾಗಬೇಕು. ಕ್ರೂರತೆ ಮತ್ತು ಮಿಥ್ಯೆಗಳು ನಮ್ಮನ್ನು ದೈವದಿಂದ ಬೇರ್ಪಡಿಸುವ ಎರಡು ಸಂಗತಿಗಳಾಗಿವೆ.

*

**ಹಿಂಸಾಚಾರ**

ಗೀತೆಯಲ್ಲಿ ಹೇಳಿದಂತೆ, ಗೀತೆಯ ಮೇಲಿನ ಪ್ರಬಂಧಗಳು, ಸಾಮಾನ್ಯ ಕರ್ಮ ಯೋಗವನ್ನು ವಿವರಿಸುತ್ತವೆ. ಅದರ ಪ್ರಕಾರ, ಮನುಷ್ಯ ಮಾಡಿದ ಕರ್ಮವು, ಆಂತರಿಕ ಬದಲಾವಣೆಯೊಂದಿಗೆ ಮಾಡಿದ ಮಾನವ ಜೀವನದ ಸಾಮಾನ್ಯ ಕರ್ಮವಾಗಿದೆ. ಅದರಲ್ಲಿಯೂ ಸಹ, ಬಳಸಬೇಕಾದ ಹಿಂಸಾಚಾರವು ಅಹಂಕಾರದ ಉದ್ದೇಶಗಳಿಂದ ಮಾಡಿದ ವೈಯಕ್ತಿಕ ಹಿಂಸಾಚಾರವಲ್ಲ, ಆದರೆ ಅದು ಸಾಮಾಜಿಕ ಜೀವನದ ಆದೇಶದ ವ್ಯವಸ್ಥೆಯ ಭಾಗವಾಗಿದೆ. ಕೋಪದಲ್ಲಿ ಅಥವಾ ಉದ್ವೇಗದಲ್ಲಿ

ಅಥವಾ ಯಾವುದೇ ಪ್ರಾಣಿಕ ಉದ್ದೇಶದಿಂದ ಮಾಡಿದ ವೈಯಕ್ತಿಕ ಹಿಂಸಾಚಾರವನ್ನು ಆಧ್ಯಾತ್ಮಿಕವಾಗಿ ಸಮರ್ಥಿಸಲು ಯಾವುದಕ್ಕೂ ಸಾಧ್ಯವಿಲ್ಲ. ಮನುಷ್ಯನ ಸಾಮಾನ್ಯ ಜೀವನಕ್ಕಿಂತ ಎತ್ತರಕ್ಕೆ ಏರುವುದು ನಮ್ಮ ಯೋಗದ ಉದ್ದೇಶವಾಗಿದೆ ಮತ್ತು ಅದರಲ್ಲಿ ಹಿಂಸಾಚಾರವನ್ನು ಸಂಪೂರ್ಣವಾಗಿ ತ್ಯಜಿಸಬೇಕು.

*

ಮಾತು ಅಥವಾ ಕ್ರಿಯೆಯಲ್ಲಿನ ಎಲ್ಲಾ ಪ್ರಾಣಿಕ ಹಿಂಸಾಚಾರಗಳು ರಾಜಸಿಕವಾಗಿದೆ ಮತ್ತು ಅವುಗಳು ಯೋಗದ ಅನುಸಾರ ಇಲ್ಲ. ನಾವು ನಮ್ಮ ಯಜಮಾನರಾಗಬೇಕು ಮತ್ತು ನುಡಿ ಹಾಗೂ ನಡೆಯ ಮೇಲೆ ನಿಯಂತ್ರಣ ಹೊಂದಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/272**

## ಇತರರೊಂದಿಗೆ ವ್ಯವಹರಿಸುವುದು

ಇತರರೊಂದಿಗಿನ ನಮ್ಮ ಎಲ್ಲಾ ವ್ಯವಹಾರಗಳಲ್ಲಿ, ನೀವು ನಿಮ್ಮ ದೃಷ್ಟಿಕೋನದಿಂದ ಮಾತ್ರವಲ್ಲದೆ ಇನ್ನೊಬ್ಬರ ದೃಷ್ಟಿಕೋನದಿಂದಲೂ ಸಹ ನೋಡಬೇಕು. ಅಲ್ಲಿ, ಯಾವುದೇ ಕೋಪ, ತೀವ್ರವಾದ ಖಂಡನೆ ಅಥವಾ ಭೀತಿ ಇರಬಾರದು, ಏಕೆಂದರೆ ಈ ವಿಷಯಗಳು ಕೋಪವನ್ನು ಹೆಚ್ಚಿಸುತ್ತವೆ ಮತ್ತು ಮತ್ತೊಂದೆಡೆಯಿಂದ ಪ್ರತ್ಯುತ್ತರ ನೀಡುತ್ತವೆ. ನಾನಿದನ್ನು ಬರೆಯುತ್ತಿರುವುದೇಕೆಂದರೆ, ನೀವು ನಿಮಗಿಂತ ಉನ್ನತಕ್ಕೇರಲು ಪ್ರಯತ್ನಿಸುತ್ತಿರುವಿರಿ ಮತ್ತು ನಿಮ್ಮ ಪ್ರಾಣದ ಮೇಲೆ ಪ್ರಭಾವ ಬೀರುವಿರಿ. ಮತ್ತು ನಾವದನ್ನು ಮಾಡಲು ಬಯಸಿದಾಗ, ಈ ವಿಷಯಗಳಲ್ಲಿ ನಾವು ನಮ್ಮೊಂದಿಗೆ ಹೆಚ್ಚು ಕಟ್ಟುನಿಟ್ಟಾಗಿರಬಾರದು. ನಾವು ನಮ್ಮ ಸ್ವಂತ ತಪ್ಪುಗಳಿಗೆ ಕಠೋರವಾಗಿರುವುದು ಮತ್ತು ಇನ್ನೊಬ್ಬರ ತಪ್ಪುಗಳಿಗೆ ಉದಾರತೆ ತೋರುವುದು ಸಹ ಉತ್ತಮವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/280**

## ಕೋಪ ಮತ್ತು ಚೈತ್ಯ

ಇಚ್ಛಾಶಕ್ತಿಯು ಸಾಕಷ್ಟು ಪ್ರಬಲವಾಗಿದ್ದರೆ, ಕೋಪವನ್ನು ನಿಯಂತ್ರಿಸಬಹುದು – ಆದರೆ ಸಾಮಾನ್ಯವಾಗಿ, ಚೈತ್ಯ ಪುರುಷನು ಸಂಪೂರ್ಣವಾಗಿ ಜಾಗೃತವಾದಾಗ

ಮತ್ತು ಪ್ರಾಣವನ್ನು ನಿಯಂತ್ರಿಸಿದಾಗ ಮಾತ್ರ ಕೋಪಗೊಳ್ಳುವ ಪ್ರವೃತ್ತಿಯು ಸಂಪೂರ್ಣವಾಗಿ ಮರೆಯಾಗುವುದು.

*

ಪುರುಷನ ಎಲ್ಲ ಕ್ರಿಯೆಗಳನ್ನು ಆಳುವವನು ಚೈತ್ಯನಿದ್ದಾಗ, ಮತ್ತು ಉನ್ನತ ಪ್ರಜ್ಞೆಯ ಸಮಚಿತ್ತತೆಯು ನಿಮ್ನ ಪ್ರಾಣವನ್ನು ಪೂರ್ತಿಯಾಗಿ ಸ್ವಾಧೀನಪಡಿಸಿಕೊಂಡಾಗ ಕೋಪವು ಸಂಪೂರ್ಣವಾಗಿ ಮರೆಯಾಗುವುದು. ಅಲ್ಲಿಯವರೆಗೆ ನಾವೊಂದು ನಿಯಂತ್ರಣವನ್ನು ಸಾಧಿಸಬಹುದು, ಕ್ಷೀಣಗೊಳಿಸಬಹುದು ಮತ್ತು ಅದನ್ನು ಯಾವುದೇ ಬಾಹ್ಯ ಪರಿಣಾಮವಿಲ್ಲದಂಥ ಒಂದು ಸ್ಪರ್ಶಕ್ಕೆ ಅಥವಾ ಸ್ವಯಂ ಅಭಿವ್ಯಕ್ತಿ ಇರದೆ ಸಾಗುವಂಥ ಒಂದು ತರಂಗಕ್ಕೆ ಕುಗ್ಗಿಸಬಹುದು.

*

ಕೋಪ ಅಥವಾ ಇನ್ನಾವುದೇ ಸಂಗತಿಯು ಹೆಚ್ಚಾದಾಗ, ಯಾವಾಗಲೂ ಸಂಭವಿಸಬೇಕಾದ ಸರಿಯಾದ ಸಂಗತಿಯಾವುದೆಂದರೆ ಆಂತರಿಕ ನಿರ್ಲಿಪ್ತತೆ. ಚೈತ್ಯನ ಉತ್ತರವು, ಕೋಪವು ಸರಿಯಲ್ಲ ಅಥವಾ ಸಹಾಯಕವಾಗುವುದಿಲ್ಲ ಎಂದು ಹೇಳುವಂಥ ಅಭ್ಯಾಸವಾಗಬೇಕು, ನಂತರ ಪುರುಷನು ಈ ಬಾಹ್ಯ ಸಂಗತಿಗಳಿಂದ ಹಿಂದೆ ಸರಿಯಬೇಕು ಮತ್ತು ತನ್ನ ಅಂತರಾತ್ಮನಲ್ಲಿ ಅದರ ನಿಲುವನ್ನು ತೆಗೆದುಕೊಳ್ಳಬೇಕು, ಈ ಎಲ್ಲ ಸಂಗತಿಗಳಿಂದ ಹಾಗೂ ಜನರಿಂದ ಬೇರ್ಪಡಬೇಕು. ಒಬ್ಬ ಸಾಧಕನು ಪಡೆದುಕೊಳ್ಳಬೇಕಾದ ಮೊದಲ ಸಂಗತಿ ಏನೆಂದರೆ, ನಿರ್ಲಿಪ್ತತೆ – ಅವನು ಈ ಬಾಹ್ಯ ವಿಷಯಗಳಲ್ಲಿ ಜೀವಿಸುವುದನ್ನು ಬಿಟ್ಟುಬಿಡಬೇಕು ಮತ್ತು ಅಂತರಂಗದಲ್ಲಿ ಬದುಕಬೇಕು. ಅದನ್ನು ಹೆಚ್ಚೆಚ್ಚು ಮಾಡಿದಂತೆ ಬಿಡುಗಡೆ ಮತ್ತು ಶಾಂತತೆಯು ಬೇಗನೆ ಲಭಿಸುತ್ತವೆ. ನಂತರ, ನಾವು ಈ ಆಂತರಿಕ ಪುರುಷನಲ್ಲಿ ಸುರಕ್ಷಿತವಾದಾಗ, ಸರಿಯಾಗಿ ಮಾಡಬೇಕಾದ ಕೆಲಸ, ಮನುಷ್ಯ ಹಾಗೂ ವಿಷಯಗಳೊಂದಿಗೆ ಮಾಡಬೇಕಾದ ಸರಿಯಾದ ವ್ಯವಹಾರದ ರೀತಿ ಬರಲು ಪ್ರಾರಂಭವಾಗುತ್ತದೆ.

*

ಕೋಪ ಮತ್ತು ಭಿನ್ನಾಭಿಪ್ರಾಯಗಳು ಮಾನವನ ಪ್ರಾಣಿಕ ಸ್ವಭಾವದಲ್ಲಿವೆ, ಹಾಗಾಗಿ ಅವುಗಳು ಸುಲಭವಾಗಿ ಹೋಗುವುದಿಲ್ಲ; ಆದರೆ, ಬದಲಾವಣೆಯಾಗಬೇಕು ಎನ್ನುವ

ಇಚ್ಛೆಯನ್ನು ಮತ್ತು ಈ ವಿಷಯಗಳು ಹೋಗಲೇಬೇಕು ಎನ್ನುವಂಥ ಸ್ಪಷ್ಟವಾದ ಜ್ಞಾನವನ್ನು ಹೊಂದುವುದು ಮುಖ್ಯವಾದ ಸಂಗತಿಯಾಗಿದೆ. ಆ ಇಚ್ಛೆ ಮತ್ತು ಜ್ಞಾನ ಅಲ್ಲಿದ್ದರೆ, ಕೊನೆಯಲ್ಲಿ ಅವುಗಳು (ಕೋಪ ಹಾಗೂ ಭಿನ್ನಾಭಿಪ್ರಾಯಗಳು) ಹೋಗುತ್ತವೆ. ಇಲ್ಲಿಯೂ ಸಹ, ಅದಕ್ಕೆ ಮುಖ್ಯವಾದ ಸಹಾಯವೇನೆಂದರೆ, ಚೈತ್ಯ ಪುರುಷನು ನಮ್ಮೊಳಗಡೆ ಬೆಳೆಯುವುದಾಗಿದೆ – ಅದು ಎಲ್ಲರೆಡೆಗೆ ದಯೆಯನ್ನು, ತಾಳ್ಮೆಯನ್ನು, ದಾನಶೀಲತೆಯನ್ನು ತರುತ್ತದೆ ಮತ್ತು ಎಲ್ಲವನ್ನೂ ನಮ್ಮ ಸ್ವಯಂ ಅಹಂಕಾರದ ಮತ್ತು ಅದರ ನೋವು ಅಥವಾ ಆನಂದ, ಇಷ್ಟಗಳ ಹಾಗೂ ಇಷ್ಟಪಡದಿರುವಿಕೆಗಳ ದೃಷ್ಟಿಕೋನದಿಂದ ಎಂದಿಗೂ ಪರಿಗಣಿಸುವುದಿಲ್ಲ. ಎರಡನೆಯ ಸಹಾಯವೆಂದರೆ, ಬಾಹ್ಯ ವಿಷಯಗಳು ತೊಂದರೆ ಮಾಡದಂಥ ಆಂತರಿಕ ಶಾಂತಿಯ ಬೆಳವಣಿಗೆ ಶಾಂತಿಯೊಂದಿಗೆ, ಎಲ್ಲವೂ ನಾನೆ, ಎಲ್ಲ ಜೀವಿಗಳೂ ಶ್ರೀಮಾತೆಯವರ ಮಕ್ಕಳು, ಮತ್ತು ಶ್ರೀಮಾತೆಯವರು ನನ್ನಲ್ಲಿ ಹಾಗೂ ಎಲ್ಲರಲ್ಲೂ ನೆಲೆಸುತ್ತಾರೆ ಎನ್ನುವಂಥ ಪ್ರಶಾಂತ ವಿಶಾಲತೆಯು ಬರುತ್ತದೆ. ನಿಮ್ಮ ಸಾಧನೆಯು ಇದರೆಡೆಗೆ ಸಾಗುವಂಥ ಸಂಗತಿಯು ಇದಾಗಿದೆ, ಏಕೆಂದರೆ ಇವುಗಳು ಚೈತ್ಯನ ಹಾಗೂ ಆಧ್ಯಾತ್ಮಿಕ ಪ್ರಜ್ಞೆಯ ಬೆಳವಣಿಗೆಯಿಂದ ಬರುವಂಥ ಸಂಗತಿಗಳಾಗಿವೆ. ನಂತರ, ಬಾಹ್ಯ ವಿಷಯಗಳಿಂದ ತೊಂದರೆಗೊಳಗಾದ ಈ ಪ್ರತಿಕ್ರಿಯೆಗಳು ಮುಂದೆ ಎಂದಿಗೂ ಬರುವುದಿಲ್ಲ.

*

ಶಾಂತತೆಯು ಮೇಲಿನಿಂದ ಕೆಳಗಡೆ ಬಂದಾಗ ಅಥವಾ ಚೈತ್ಯನಿಂದ ಬಂದಾಗ, ಪ್ರಾಣವು ಶಾಂತಿ ಅಥವಾ ದಯೆಯಿಂದ ಮತ್ತು ಸದ್ಭಾವನೆಯಿಂದ ತುಂಬಿಹೋಗುತ್ತದೆ. ಆದ್ದರಿಂದ, ಮೊದಲಿಗೆ ಆಂತರಿಕ ಚೈತ್ಯ ಶಾಂತತೆಯು ಮತ್ತು ನಂತರ ಮೇಲಿನಿಂದ ಶಾಂತಿಯು ಇಡೀ ಪುರುಷನನ್ನು ಆವರಿಸಬೇಕು. ಆದರೆ, ಆಂತರಿಕ ಶಾಂತತೆಯಿಂದ ಮತ್ತು ಉನ್ನತ ಶಾಂತಿಯಿಂದ ಆವರಿಸಲ್ಪಡದೆ ಅವುಗಳಿಂದ ಸಂಪೂರ್ಣವಾಗಿ ಮುಕ್ತರಾಗುವುದು ಕಷ್ಟದ ಸಂಗತಿಯಾಗಿದೆ. ಸಾಧನೆಗಾಗಿ, ನೀವು ಶ್ರೀಮಾತೆಯವರ ಮೇಲೆ ಅವಲಂಬಿತರಾಗಿರುವುದು ಅತ್ಯುತ್ತಮ ಮನೋಭಾವವಾಗಿದೆ. ಏಕೆಂದರೆ, ನಿಮ್ಮಲ್ಲಿ ಸಾಧನೆಯನ್ನು ಮಾಡುತ್ತಿರುವುದು ಶ್ರೀಮಾತೆಯವರ ಶಕ್ತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/274–76 – ಶ್ರೀ ಅರವಿಂದರು**

# ಲಾಲಸೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ಪ್ರಕೃತಿಯಲ್ಲಿ ಲೈಂಗಿಕತೆಯ ಪಾತ್ರ

ಅದು (ಲೈಂಗಿಕ ಪ್ರಚೋದನೆ) ಎಲ್ಲರಿಗೂ ಸಂಪೂರ್ಣವಾಗಿ ಸಹಜ ಮತ್ತು ಎಲ್ಲಾ ಜನರು ಅದನ್ನು ಹೊಂದಿರುವರು. ಪೀಳಿಗೆಯು ಮುಂದುವರಿಯಲೆಂದು, ಪ್ರಕೃತಿಯು ಸೃಷ್ಟಿಯ ಉದ್ದೇಶಕ್ಕಾಗಿ ಅದನ್ನು ತನ್ನ ಕ್ರಿಯಾಶೀಲತೆಯ ಒಂದು ಭಾಗವಾಗಿ ಮಾಡಿರುವಳು. ಇದೇ ಉದ್ದೇಶಕ್ಕಾಗಿಯೇ ಪ್ರಾಣಿಗಳಲ್ಲಿ ಅದನ್ನು ಉಪಯೋಗಿಸಲಾಗುವದು; ಆದರೆ ಜನರು ಪ್ರಕೃತಿಯಿಂದ ದೂರ ಸರಿದಿರುವರು ಮತ್ತು ಅದನ್ನು ಮುಖ್ಯವಾಗಿ ಭೋಗಕ್ಕಾಗಿ ಉಪಯೋಗಿಸುವರು. – ಆದುದರಿಂದ ಅದು ಅವರನ್ನು ಹಿಡಿತದಲ್ಲಿ ಇಟ್ಟುಕೊಂಡಿದೆ ಮತ್ತು ಸದಾಕಾಲ ಅವರನ್ನು ಹೆದರಿಸುತ್ತಿರುವದು.

*

ನಿಜಕ್ಕೂ, ಪುನಃ ಪುನಃ ಸೃಷ್ಟಿಸುವ ತನ್ನ ಗುರಿಯನ್ನು ಪ್ರೋತ್ಸಾಹಿಸಲು ಪ್ರಕೃತಿಯು ಅದನ್ನು (ಲೈಂಗಿಕ ನಲಿವು) ನೀಡಿದಳು. ಅದಕ್ಕೆ ನಿದರ್ಶನವೇನೆಂದರೆ ಸೂಕ್ತ ಕಾಲದಲ್ಲಿ ಮಾತ್ರ ಪ್ರಾಣಿಯು ಆ ಕ್ರಿಯೆಯಲ್ಲಿ ತೊಡಗುವದು. ಸೃಷ್ಟಿಯ ಕಾರ್ಯವು ಮುಗಿಯುತ್ತಿದ್ದಂತೆ ಅದನ್ನು ನಿಲ್ಲಿಸಿಬಿಡುವದು. ಮನಸ್ಸನ್ನು ಹೊಂದಿರುವ ಮಾನವನು ಪ್ರಕೃತಿಯ ಅವಶ್ಯಕತೆಯಿಲ್ಲದಿದ್ದಾಗಲೂ ಅದರಲ್ಲಿ ತೊಡಗಬಹುದೆಂಬುದನ್ನು ಅರಿತಿದ್ದಾನೆ. – ಆದರೆ ಅದು ಪ್ರಕೃತಿಯ ಮೂಲ ಉದ್ದೇಶವನ್ನು ಮನಸ್ಸು ವಿಕೃತಗೊಳಿಸಿರುವದಕ್ಕೆ ಸಾಕ್ಷಿ ಮಾತ್ರ. ಆದರೆ ಮಾನವನಿಗೆ ಒಂದು ಚಿಕ್ಕ ಮತ್ತು ವಿನಾಶಕಾರಿಯಾದ ಇಂದ್ರಿಯ ಸಂತಸವನ್ನು ನೀಡಲೆಂದು ಪ್ರಕೃತಿಯು ಅದನ್ನು ಸೃಷ್ಟಿಸಿದೆ ಎಂದು ಪ್ರಮಾಣೀಕರಿಸುವದಿಲ್ಲ.

*

ಸೃಷ್ಟಿಯನ್ನು ಮುನ್ನಡೆಸಲು ಮೂಲಭೂತ ಭೌತಿಕ ಶಕ್ತಿಯನ್ನು ಪ್ರಕೃತಿಯು ಉಪಯೋಗಿಸಿಕೊಳ್ಳುವದೇ ಪ್ರಾಪಂಚಿಕ ಲೈಂಗಿಕ ಚಲನೆ. ಐಹಿಕ ಉದ್ರೇಕನ–ದಿಂದೊಡಗೂಡಿದೆ ಕವಿಗಳು ನುಡಿಯುವ ಇದರ ರೋಮಾಂಚನ. ಆದರೆ ಈ ಅಸಂತೋಷಕರ ಪ್ರಕ್ರಿಯೆಗೆ ಭಾವನೆಗಳು ಅನುಮತಿಸಲೆಂದೇ ಪ್ರಕೃತಿಯು ಈ

ಪ್ರಲೋಭನೆಯನ್ನು ಜನರ ಮುಂದೆ ಇರಿಸುವಳು. ಮತ್ತು ಇನ್ನಿತರರಿಗೆ ಏನೇ ಅನ್ನಿಸಿದರೂ, ಈ ಕ್ರಿಯೆಯ ನಂತರ ಅನೇಕರಿಗೆ ಜಿಗುಪ್ಸೆಯಿಂದ ಮನಸ್ಸು ಹಿಮ್ಮೆಟ್ಟುವ ಅನುಭವವು ಉಂಟಾಗುವದು. ಜೊತೆಗೆ ಜೊತೆಗಾರನಿಂದರೂ ಜಿಗುಪ್ಸೆಯಿಂದ ವಿಕರ್ಷಣೆಯನ್ನೂ ಸಹ ಎದುರಿಸಬೇಕಾಗುವದು. ಆದರೆ ಜಿಗುಪ್ಸೆಯು ಕಡಿಮೆಯಾದ ಮೇಲೆ ಅದರ ಪ್ರಲೋಭನೆಯಿಂದ ಮತ್ತೆ ಅದೇ ಕ್ರಿಯೆಯಲ್ಲಿ ತೊಡಗಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/485**

**ಸಂಯಮ**

ತನಗೆ ಸಿಗಬೇಕಾದ ಸಂಪೂರ್ಣ ಕ್ರಿಯಾಶೀಲತೆ ಮತ್ತು ಸಂತಸವನ್ನು ಪಡೆಯುವ ಮೊದಲು, ಯಾವುದೇ ಶಕ್ತಿಯ ಗುಣ ಅಥವಾ ಪ್ರವೃತ್ತಿಯು ಇನ್ನೂ ಶೈಶವಾವಸ್ಥೆಯಲ್ಲಿ ಇರುವಾಗ, ಸಂಯಮವು ಅಕಾಲಿಕವಾಗಬಹುದು. ಒಂದು ಶಿಶುವು ಜನಿಸುತ್ತಿದ್ದಂತೆ ಅದು ತನ್ನ ಯೌವನ, ಬೆಳವಣಿಗೆ, ಸಂತಸ ಜೀವನ ಅಂತಿಮ ಕ್ಷಯ ಮತ್ತು ಮರಣವನ್ನು ಹೊಂದಲೇಬೇಕು; ಒಮ್ಮೆ ಪ್ರಕೃತಿಯು ತನ್ನ ಸೃಷ್ಟಿಗೆ ಪ್ರೇರೇಪಣೆ ನೀಡಿತೆಂದರೆ ಅದು ಇಲ್ಲವಾಗುವ ವೇಳೆಗೆ ವೇಗವು ಸಹಜವಾಗಿ ತನ್ನಂತೆ ತಾನೇ ಮುಕ್ತಾಯಗೊಳ್ಳಬೇಕು. ಬೆಳವಣಿಗೆ ಅಥವಾ ವೇಗವನ್ನು ಅಕಾಲಿಕವಾಗಿ ಒತ್ತಾಯಿಸಿ ತಡೆದರೆ ಅದು ನಿಗ್ರಹ, ಅದು ಕೆಲಕಾಲ ಮಾತ್ರ ಪರಿಣಾಮಕಾರಿಯಾಗಿರಬಹುದು ಆದರೆ ನಿರಂತರವಾಗಿ ಅಲ್ಲ. ತಮ್ಮ ಸ್ವಭಾವದ ಮೂಲಕ ಎಲ್ಲಾ ವಸ್ತುಗಳ ಆಡಳಿತವು ನೆರವೇರುವದು ಎಂದು ಬೋಧಿಸುವದು ಗೀತೆ. ಹಾಗೂ ತಮ್ಮ ಸ್ವಭಾವಕ್ಕೆ ಅವು ಪುನಃ ಹಿಂದಿರುಗುವವು ಎಂದು ಸಹ ಗೀತೆಯು ಹೇಳುವದು. ಹೀಗಾಗಿ ನಿಗ್ರಹವು ಫಲರಹಿತ. ಹಾಗೆ ಮಾಡಿದಾಗ ಏನಾಗುವದೆಂದರೆ ಅಕಾಲಿಕವಾಗಿ ಸಾಯಿಸಿದ ವಸ್ತುವು (ಒತ್ತಾಯ ಪೂರ್ವಕವಾಗಿ) ನಿಜಕ್ಕೂ ಸಾಯುವದಿಲ್ಲ, ಆದರೆ ಕೆಲಕಾಲ ತನ್ನನ್ನು ಕಳಿಸಿದ ಪ್ರಕೃತಿಯೊಳಗೆ ಕಾಣದಾಗುವದು, ಮತ್ತು ಅಗಾಧ ಶಕ್ತಿಯನ್ನು ಕೂಡಿಸಿಕೊಂಡು ಅಸಾಧಾರಣ ದೌರ್ಜನ್ಯದೊಂದಿಗೆ ತನಗೆ ಸಿಗದೆ ಇದ್ದ ಸಂತಸವನ್ನು ಪಡೆಯಲು ರಭಸದಿಂದ ನುಗ್ಗುವದು. ನಾವು ಯೋಗ ಪಥವನ್ನು ಪ್ರಾರಂಭಿಸಿದಾಗ ನಮ್ಮ ದುಷ್ಟ ಸಂಸ್ಕಾರಗಳು ಅಥವಾ ಸಂಪರ್ಕಗಳಿಂದ ಹೊರಬರಲು ಮಾಡುವ

ಪ್ರಯತ್ನಗಳಲ್ಲಿ ನಾವು ಇದನ್ನು ಕಾಣುವೆವು. ನಮ್ಮ ಸ್ವಭಾವದಲ್ಲಿ ಕೋಪವು ಒಂದು ಶಕ್ತಿಭರಿತ ಅಂಶವಾಗಿದ್ದರೆ, ಒತ್ತಾಯ ಪೂರ್ವಕವಾಗಿ ನಾವು ಕೆಲಕಾಲ ಅದನ್ನು ತಡೆಯಬಹುದು ಮತ್ತು ಅದನ್ನು ಸ್ವ–ಹಿಡಿತ ಎಂದು ಕರೆಯಬಹುದು, ಆದರೆ ಅಂತಿಮವಾಗಿ ಅಸಂತೃಪ್ತ ಪ್ರಕೃತಿಯು ನಮ್ಮನ್ನು ಮೀರಿ ಮುನ್ನಡೆಯುವದು ಮತ್ತು ಅನಿರೀಕ್ಷಿತ ಕ್ಷಣದಲ್ಲಿ ಭಾವೋದ್ರೇಕವು ನಮ್ಮ ಮೇಲೆ ಆಕ್ರಮಣ ಮಾಡುವದು.

*

**ಬದಲಿ ನೇಮಕಾತಿ**

ನಮ್ಮನ್ನು ಗುಲಾಮನನ್ನಾಗಿ ಮಾಡಿಕೊಳ್ಳಲು ಬಯಸುವ ಭಾವೋದ್ರೇಕವನ್ನು ಪರಿಣಾಮಕಾರಿಯಾಗಿ ಹಿಡಿತದಲ್ಲಿಟ್ಟುಕೊಳ್ಳಲು ಇರುವದು ಎರಡು ಹಾದಿಗಳು ಮಾತ್ರ. ಮೊದಲನೆಯದು ಬದಲಾದ ಚಿಂತನೆಯ ಮೂಲಕ (ವಿರುದ್ಧ ಗುಣದ ಚಿಂತನೆ) ಅಂದರೆ ಕೋಪವನ್ನು ಕ್ಷಮೆ, ಪ್ರೇಮ ಅಥವಾ ಸಹನೆಯಿಂದ, ಲೈಂಗಿಕತೆಯನ್ನು ಪರಿಶುದ್ಧತೆಯ ಬಗ್ಗೆ ಧ್ಯಾನ ಮಾಡುವದರ ಮೂಲಕ, ಗರ್ವವನ್ನು ನಮ್ರತೆ ಮತ್ತು ನಮ್ಮ ದೋಷಗಳು ಅಥವಾ ಅಮುಖ್ಯತೆಯ ಬಗ್ಗೆ ಚಿಂತಿಸುವದರಿಂದ ಇದು ರಾಜ ಯೋಗದ ವಿಧಾನ. ಆದರೆ ಇದು ಬಹಳ ಕಷ್ಟಕರವಾದ, ನಿಧಾನವಾದ ಮತ್ತು ಅನಿಶ್ಚಿತ ವಿಧಾನ. ಏಕೆಂದರೆ ಪುರಾತನ ಸಂಪ್ರದಾಯಗಳು ಮತ್ತು ಯೋಗದ ಆಧುನಿಕ ಅನುಭವದ ಪ್ರಕಾರ ಬಹಳ ವರ್ಷಗಳ ಕಾಲ ಅತ್ಯುನ್ನತ ಸ್ವ–ನಿಯಂತ್ರಣವನ್ನು ಹೊಂದಿದ್ದವರು ಇದ್ದಕ್ಕಿದ್ದಂತೆ ತಾವು ಸತ್ತುಹೋಗಿದೆಯೆಂದು ಭಾವಿಸಿದ್ದ ದುರ್ಗುಣವು ಮೇಲೆದ್ದಿರುವದನ್ನು ಕಂಡು ಆಶ್ಚರ್ಯ ಪಟ್ಟಿರುವರು. ಆದರೂ ಈ ಬದಲಿ ನೇಮಕಾತಿಯು, ನಿಧಾನವಾದುದಾಗಿದ್ದರೂ, ಪ್ರಕೃತಿಯ ಒಂದು ಅತಿ ಸಾಮಾನ್ಯ ವಿಧಾನವಾಗಿದೆ. ಬಹುಪಾಲು ಈ ವಿಧಾನವನ್ನು ಅನೇಕ ಸಲ ಅಜಾಗರೂಕರಾಗಿ ಅಥವಾ ಅರ್ಧ ಜಾಗರೂಕತೆಯಿಂದ ಉಪಯೋಗಿಸ–ಲಾಗುವದು. ಇದರಿಂದ ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಸಾಗುತ್ತಿದ್ದಂತೆ, ಅಥವಾ ಒಂದೇ ಜನ್ಮದಲ್ಲೇ ಮಾನವನ ಗುಣ ವಿಶೇಷಗಳು ಅಭಿವೃದ್ಧಿ ಹೊಂದುವವು. ಅದು ಬೀಜದಲ್ಲಿರುವ ವಸ್ತುಗಳನ್ನು ನಾಶಪಡಿಸುವದಿಲ್ಲ ಮತ್ತು ಯೋಗದಿಂದ ಸುಟ್ಟುಹೋಗದಿರುವ ಬೀಜವು ಯಾವಾಗ ಬೇಕಾದರೂ ಮತ್ತೆ ಸಸಿಯಾಗಿ ನಂತರ ಮರವಾಗಿ ಬೆಳೆಯಬಹುದು.

*

## ಭೋಗ

ಭಾವೋದ್ರೇಕದಿಂದ ವೇಗವಾಗಿ ದೂರ ಸರಿಯಲು ಅದಕ್ಕೆ ಭೋಗ ಅಥವಾ ಆನಂದಾನುಭವವನ್ನು ನೀಡುವದೇ ಎರಡನೆಯ ವಿಧಾನ. ಸಂತಸಾನುಭವದಿಂದ ಅತಿಯಾಗಿ ತೃಪ್ತಿ ಹೊಂದಿದಾಗ ಅದು ದುರ್ಬಲವಾಗುವದು ಮತ್ತು ಕೆಲಕಾಲ ಇನ್ನು ಬೇಡ ಎನ್ನುವ ಮನೋಭಾವವನ್ನು ಸಹ ಹುಟ್ಟಿಸುವದು. ನಿಗ್ರಹಕ್ಕೆ ಆ ಕ್ಷಣವನ್ನು ಯೋಗಿಯು ಹಿಡಿದರೆ, ಅಥವಾ ಪ್ರತಿಯೊಂದು ಅವಕಾಶ ಸಿಕ್ಕಿದಾಗಲೂ ಯೋಗಿಯು ನಿಗ್ರಹವನ್ನು ಪುನರಾವರ್ತಿಸಿದರೆ ವೃತ್ತಿಯ ಸಾಮರ್ಥ್ಯವು ಕಡಿಮೆಯಾಗಿ ಅಂತಿಮ ಸಂಯಮದ ಉಪಯೋಗಕ್ಕೆ ಬಹಳ ನೆರವಾಗುವದು. ಆನಂದಾನುಭವ ಮತ್ತು ಪ್ರತಿಕ್ರಿಯೆಯ ಈ ವಿಧಾನವೂ ಸಹ ಪ್ರಕೃತಿಗೆ ಅತ್ಯಂತ ಪ್ರಿಯವಾದುದು ಮತ್ತು ಅನೇಕ ಸಾರಿ ಈ ವಿಧಾನವನ್ನು ಬಳಸಲಾಗುವದು. ಆದರೆ ಅದು ತನ್ನಲ್ಲಿ ತಾನು ಯಾವಾಗಲೂ ಪೂರ್ಣತ್ವವನ್ನು ಪಡೆದಿಲ್ಲ ಮತ್ತು ಅದನ್ನು ಶಾಶ್ವತವಾದ ಶಕ್ತಿಗಳು ಮತ್ತು ಗುಣಗಳಿಗೆ ಅನ್ವಯಿಸಿದಾಗ, ಅದು ವಿರುದ್ಧ ಪ್ರವೃತ್ತಿಗಳ ಅನಿಶ್ಚಿತ ಸ್ಥಿತಿಯನ್ನು ದೃಢಪಡಿಸಲು ಪ್ರಯತ್ನಿಸುವದು. ಇದು ಪ್ರಕೃತಿಯ ಕ್ರಿಯಾಶೀಲತೆಗೆ ಅತ್ಯಧಿಕವಾಗಿ ಉಪಯೋಗಕರ ಆದರೆ ಸ್ವ–ನಿಯಂತ್ರಣದ ದೃಷ್ಟಿಕೋನದಿಂದ ಉಪಯೋಗರಹಿತ ಮತ್ತು ಅಪೂರ್ಣ. ಸಂಯಮದೊಂದಿಗೆ ಈ ವಿಧಾನವನ್ನು ಅನುಸರಿಸಿದರೆ ಮಾತ್ರ ಅದು ಪರಿಣಾಮಕಾರಿಯಾಗುವದು.

*

## ವೈರಾಗ್ಯ ಮತ್ತು ಉದಾಸೀನತೆ

ಯೋಗಿಯು ವೃತ್ತಿ ಪ್ರಕೃತಿಯ ಕ್ರೀಡೆ, ತನಗೆ ಅದರೊಂದಿಗೆ ಯಾವ ಸಂಬಂಧವೂ ಇಲ್ಲವೆಂದು ಭಾವಿಸುವನು. ತಾನು ಅದನ್ನು ನೋಡುತ್ತಿರುವವನು ಅಷ್ಟೇ ಎಂದು ತಿಳಿಯುವನು. ಕೋಪ, ವಿಷಯಾಸಕ್ತಿ, ಗರ್ವಗಳು ತನ್ನವಲ್ಲ ಅದು ವಿಶ್ವಮಾತೆಗೆ ಸೇರಿದವು. ತನ್ನದೇ ಆದ ಉದ್ದೇಶಗಳಿಗೆ ಆಕೆಯು ಅವನ್ನು ಉಪಯೋಗಿಸುವಳು ಮತ್ತು ಶಾಂತಗೊಳಿಸುವಳು ಎನ್ನುವನು ಯೋಗಿ. ಆದರೇನು, ಈ ವೃತ್ತಿಯು ಬಲಿಷ್ಟವಾಗಿದ್ದು, ಅದನ್ನು ಉಪಯೋಗಿಸದೆ ಇದ್ದರೆ, ಈ ಮನೋಭಾವವನ್ನು ಪ್ರಾಮಾಣಿಕವಾಗಿ ಉಳಿಸಿಕೊಳ್ಳಲಾಗುವದಿಲ್ಲ ಮತ್ತು ಬೌದ್ಧಿಕವಾಗಿ ಆಧರಿಸಲಾಗುವದಿಲ್ಲ ಇದು ಸದ್ಗುಣದ ಸೋಗು, ಸುಳ್ಳು ಆಯಾಮ ಅಥವಾ ಮಿಥ್ಯಾಚಾರ ಎಂದು ಪ್ರಾಮಾಣಿಕವಾಗಿ ಭಾವಿಸಲೇ ಬೇಕಾಗುವದು.

ಪುನರಾವರ್ತಿತವಾದ ಸಂತಸಾನುಭವ ಮತ್ತು ದಬ್ಬಾಳಿಕೆಯಿಂದ ಸ್ವಲ್ಪಮಟ್ಟಿಗೆ ಆಯಾಸವಾದಾಗ ಪ್ರಕೃತಿಯು ಪುರುಷ ಅಥವಾ ಆತ್ಮದ ಅನುಜ್ಞೆಯ ಮೇರೆಗೆ ತನ್ನ ಸೃಷ್ಟಿಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸುವಳು. ಆಕೆಯು ಮೊದಲಿಗೆ ಅದನ್ನು ವೈರಾಗ್ಯದ ಮೂಲಕ ಹಿಡಿತದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುವಳು ಅದು ಬೇಸರದ ಅತ್ಯಂತ ಒರಟು ರೂಪವಾಗಿದೆ. ಆದರೆ ಅದು ಎಷ್ಟು ಭಾವೋದ್ರೇಕದಿಂದ ಒಡಗೂಡಿದೆ ಎಂದರೆ ಅದು ಶಾಶ್ವತವಾಗಿ ಇರಲು ಸಾಧ್ಯವಿಲ್ಲ; ಆದರೂ ತನ್ನ ಕಾರಣದ ಮಹತ್ವವನ್ನು ಅತ್ಯಂತ ಆಳವಾಗಿ ಬೇರೂರಿಸಿ ಹೊರಹೊಮ್ಮಿಸಲು ತನ್ನ ಗುರುತನ್ನು ಅಲ್ಲಿ ಪ್ರತಿಷ್ಠಾಪಿಸುವದು. ಆದರೆ ಆ ಆಕಾಂಕ್ಷೆಯು ತೀವ್ರಾಸಕ್ತಿಯ ತಾತ್ಕಾಲಿಕ ಆಡಳಿತ ಮತ್ತು ಹಿಂದಿರುಗುವಿಕೆಯಲ್ಲಿಯೂ ಜೀವಂತವಾಗಿರುವದು. ನಂತರದಲ್ಲಿ ಅದರ ಹಿಂದಿರುಗುವಿಕೆಯನ್ನು ಆತುರದಿಂದ ವೀಕ್ಷಿಸಲಾಗುವದು ಆದರೆ ಯಾವುದೇ ತೀಕ್ಷ್ಣವಾದ ಅಸಹನೆಯು ಇರುವದಿಲ್ಲ. ಅಂತಿಮವಾಗಿ, ಅತ್ಯುನ್ನತ ಉದಾಸೀನತೆಯನ್ನು ಗಳಿಸಲಾಗುವದು ಮತ್ತು ಪ್ರಕೃತಿಯ ಸಾಮಾನ್ಯ ಪ್ರಕ್ರಿಯೆಯ ಮೂಲಕ ಈ ಮನೋಭಾವನೆಯು ಹೊರಹೋಗುತ್ತಿರುವದನ್ನು ಸಂಯಮದ ನೈಜ ಆತ್ಮದೊಂದಿಗೆ ವೀಕ್ಷಿಸಲಾಗುವದು. ಈ ಸಂಯಮವು ತಾನು ಸಾಕ್ಷಿ ಆತ್ಮ ಮಾತ್ರ ಎಂಬ ಜ್ಞಾನವನ್ನು ಹೊಂದಿರುವದಲ್ಲದೆ ಅದು ಇಲ್ಲವಾಗಲು ಆ ಪರಿಸ್ಥಿತಿಯ ಸಂಪರ್ಕವನ್ನು ತ್ಯಜಿಸುವದು ಮಾತ್ರವೇ ತಾನು ಮಾಡಬೇಕಾದ ಕೆಲಸ ಎಂಬುದರ ಅರಿವಾಗುವದು. ಅತ್ಯುನ್ನತ ಹಂತವು ಲಯದ ರೂಪದಲ್ಲಿಯ ಮುಕ್ತಿಯ ಕಡೆಗೆ ಕರೆದುಕೊಂಡುಹೋಗುವದು ಅಥವಾ ಮತ್ತೊಂದು ತರದ ಸ್ವಾತಂತ್ರ್ಯದ ಕಡೆಗೂ ಕರೆದುಕೊಂಡುಹೋಗಬಹುದು. ಹಾಗಾದಾಗ ಅದು ಭಗವಂತನ ಲೀಲೆಯೆಂದು ಜೀವವು ಅರಿತು ಆತನು ಆ ಮನೋಭಾವವನ್ನು ತನ್ನ ಉದ್ದೇಶಗಳಿಗೆ ಉಪಯೋಗಿಸಲಿ ಅಥವಾ ಬೇಡದಿದ್ದರೆ ಎಸೆಯಲಿ ಎಂಬ ನಿರ್ಧಾರವನ್ನು ತಳೆಯುವದು. ಇದು ತನ್ನನ್ನು ಭಗವಂತನಿಗೆ ಸಂಪೂರ್ಣವಾಗಿ ಒಪ್ಪಿಸುವ ಕರ್ಮಯೋಗಿಯ ಮನೋಭಾವನೆ ಮತ್ತು ಆತನು ಭಗವಂತನಿಗಾಗಿಯೇ ಕೆಲಸ ಮಾಡುವನು. ಆಗ ಆತನು ತನ್ನಲ್ಲಿ ಕೆಲಸ ಮಾಡುತ್ತಿರುವದು ಭಗವಂತನ ಶಕ್ತಿ ಎಂದು ಅರಿತಿರುವನು. ಆ ಶರಣಾಗತಿಯ ಮನೋಧರ್ಮದ ಪರಿಣಾಮವೇನೆಂದರೆ ಎಲ್ಲರ ಒಡೆಯನು ಆಗ ಮುಂದೆ ಬಂದು ಗೀತೆಯಲ್ಲಿ ನೀಡಿರುವ ಆಶ್ವಾಸನೆಯ ಪ್ರಕಾರ ತನ್ನ ಸೇವಕ ಮತ್ತು ಪ್ರಿಯತಮನನ್ನು ಎಲ್ಲಾ ಪಾಪ ಮತ್ತು ದುಷ್ಟ ಶಕ್ತಿಗಳಿಂದ ಪಾರುಮಾಡುವನು. ಆಗ ವೃತ್ತಿಯು ದೇಹ ಯಂತ್ರದಲ್ಲಿ ಮಾತ್ರ ಕೆಲಸ ಮಾಡುತ್ತಿರುವದು. ಜೀವವನ್ನು ಅದು

ಬಾಧಿಸುವದಿಲ್ಲ ಮತ್ತು ಭಗವಂತನು ತನ್ನ ಕಾರ್ಯಗಳಿಗಾಗಿ ಅದನ್ನು ಆಹ್ವಾನಿಸಿದಾಗ ಮಾತ್ರ ಕ್ರಿಯಾಶೀಲವಾಗುವದು. ಇದೇ ನಿರ್ಲಿಪ್ತತೆ, ಲೀಲೆಯೊಳಗಿನ ಸಂಪೂರ್ಣ ಸ್ವಾತಂತ್ರ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 13/33–35**

## ಲೈಂಗಿಕ ಪ್ರಚೋದನೆಯ ಪರಿವರ್ತನೆ

ಪರಿವರ್ತನೆಯು (ಲೈಂಗಿಕ ಚಲನೆಯ) ಬೇರೆ ಮತ್ತು ಸಾಮಾನ್ಯ ಮಾನವ ಸ್ವಭಾವದಲ್ಲಿ ಈಗಿನ ರೂಪಗಳ ಅಂಗೀಕಾರವೇ ಬೇರೆ. ಲೈಂಗಿಕ–ಕ್ರಿಯೆಯಲ್ಲಿ ತೊಡಗಲು ಕೊಡುವ ಕಾರಣವು ಅನಿವಾರ್ಯ ಅಥವಾ ಅತ್ಯಗತ್ಯವೆಂದೇನೂ ಅಲ್ಲ. ಶಿಸ್ತುಬದ್ಧ ಯೌಗಿಕ ಜೀವನವನ್ನು ಪಾಲಿಸುವವರು ಬಹಳ ಕಡಿಮೆ ಜನ ಮತ್ತು ಪೀಳಿಗೆಯನ್ನು ಮುಂದುವರೆಸುವ ಅಸಂಖ್ಯಾತ ಜನರು ಸದಾಕಾಲ ಇರುವರು. ನಿಜಕ್ಕೂ, ಯೋಗಿಗೆ ಮಾನವ ಸ್ವಭಾವದ ಬಗ್ಗೆ ಯಾವುದೇ ತಿರಸ್ಕಾರವಾಗಲೀ ಅಥವಾ ವಿರೋಧವಾಗಲೀ ಇಲ್ಲ; ಒಂದು ಶಾಂತ ಮನೋಭಾವ ಮತ್ತು ಸ್ಪಷ್ಟತೆಯೊಂದಿಗೆ ಅದರ ಪ್ರತಿಯೊಂದು ಕ್ರಿಯೆಗೆ ನೀಡಿರುವ ಸ್ಥಾನವನ್ನು ಆತನು ಅರ್ಥ ಮಾಡಿಕೊಳ್ಳುವನು. ಜೊತೆಗೆ, ಒಂದು ಉನ್ನತ ಚೇತನದ ನಿರ್ದೇಶನಕ್ಕೆ ಅನುಗುಣವಾಗಿ ಅಪೇಕ್ಷೆಯಿಲ್ಲದೆ, ಸ್ವ–ನಿಯಂತ್ರಣದೊಂದಿಗೆ ಯಾವುದಾದರೂ ಕಾರ್ಯವನ್ನು ಮಾಡಬೇಕಾಗಿದ್ದರೆ, ಅದು ಉತ್ತಮವಾದ ಹಾದಿ. ಈ ಹಾದಿಯನ್ನು ವಸ್ತುಗಳಲ್ಲಿಯ ದೈವೀ ಸಂಕಲ್ಪವನ್ನು ಪೂರೈಸಲು ಕೆಲವೊಮ್ಮೆ ಅದನ್ನು ಅನುಸರಿಸಬೇಕಾಗುವದು. ಬೇರೆ ಸಮಯದಲ್ಲಿ ಯೋಗಿಯು ಈ ಕಾರ್ಯವನ್ನು ಮಾಡುವದಿಲ್ಲ. ಉದಾಹರಣೆಗೆ ಯುದ್ಧ ಮತ್ತು ಅದರೊಂದಿಗಿನ ನಾಶ ಪಡಿಸುವಿಕೆ. ಇಂತಹ ನಿಯಮವು ಸಾಮಾನ್ಯ ಮಾನವ ಸ್ವಭಾವದಲ್ಲಿ ಮುಳುಗಲು ಒಂದು ನೆಪವಾಗಿ ಬದಲಾಗಿಬಿಡುವ ಸಂಭವವು ಹೆಚ್ಚಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/485–86**

## ಲೈಂಗಿಕತೆ ಮತ್ತು ಆನಂದ

ಆನಂದದ ಶಕ್ತಿಯನ್ನು ಕೆಳಮಟ್ಟಕ್ಕೆ ಇಳಿಸುವದು ಅಥವಾ ತಿರುಚುವಿಕೆಯಾಗಿದೆ ಲೈಂಗಿಕತೆ.

*

ಲೈಂಗಿಕ ಕೇಂದ್ರ ಮತ್ತು ಅದರ ಪ್ರತಿಕ್ರಿಯೆಗಳನ್ನು ಪರಿವರ್ತನೆ ಮಾಡಬಹುದು ಎಂಬುದೇನೋ ಸತ್ಯ. ಪ್ರಾಣಿಕವಾದ ಲೈಂಗಿಕ ಪ್ರತಿಕ್ರಿಯೆಯ ಜಾಗದಲ್ಲಿ ಮೇಲಿನಿಂದ ಒಂದು ಆನಂದವು ಬಂದು ನೆಲೆಸಬಹುದು. ಈ ಆನಂದದ ನಿಮ್ನ ಅವಸ್ಥೆಯೇ ಈ ಲೈಂಗಿಕ ಪ್ರಚೋದನೆ. ಆದರೆ ಭೌತಿಕ ಚೇತನವು ಭೌತಿಕ ಪ್ರಾಣವೂ ಒಳಗೊಂಡಂತೆ ಬದಲಾಗುವ ಮುನ್ನ ಈ ಆನಂದದ ಅಂಗೀಕಾರವು ಅಪಾಯಕಾರಿ; ಏಕೆಂದರೆ ಇತರ ಮತ್ತು ನಿಮ್ನ ವಸ್ತುಗಳು ಅವಕಾಶವನ್ನು ಉಪಯೋಗಿಸಿಕೊಂಡು ಅದರೊಳಗೆ ಮಿಶ್ರಿತವಾಗಲೂ ಬಹುದು ಈ ನಿಮ್ನ ವಸ್ತುಗಳು ಮೇಲಿನದರ ಅನುಮತಿಯನ್ನು ಪಡೆದಿವೆ. ಆದುದರಿಂದ ಇವು ಸಾಧನೆಯ ಒಂದು ಭಾಗ ಎನಿಸಲೂ ಬಹುದು ಅಥವಾ ನಿಮ್ನ ಅಂಶಗಳು ನೈಜ ಅನುಭವವನ್ನು ಜಯಿಸಿ ಹಿಂದಕ್ಕೆ ನೂಕಿಬಿಡಬಹುದು. ಈ ಪ್ರಕ್ರಿಯೆಯು ಇಡೀ ಸತ್ತೆಯನ್ನು ಅಲ್ಲೋಲ ಕಲ್ಲೋಲ ಮಾಡಿ ಕಪ್ಪು ಹಾದಿಯಲ್ಲಿ ಮುನ್ನಡೆಸಲೂ ಬಹುದು. ಕೊನೆಗೆ, ಆನಂದವು ಇಲ್ಲವಾಗಿ ನಿಮ್ನ ಪ್ರತಿಕ್ರಿಯೆಗಳು ಲೈಂಗಿಕ–ಕೇಂದ್ರದ ಹತೋಟಿಯನ್ನು ಪಡೆಯಲೂ ಬಹುದು.

*

ಪ್ರಾಣಿಕ ಮತ್ತು ಭೌತಿಕದ ಮೇಲಿನ ಲೈಂಗಿಕ ಪ್ರಚೋದನೆಯ ಆಕ್ರಮಣದಿಂದ ಸಾಧಕನು ಸಂಪೂರ್ಣವಾಗಿ ದೂರ ಸರಿಯಬೇಕು – ಏಕೆಂದರೆ ಆತನು ಲೈಂಗಿಕ ಪ್ರಚೋದನೆಯನ್ನು ಜಯಿಸದಿದ್ದರೆ, ದಿವ್ಯ ಚೇತನ ಮತ್ತು ದಿವ್ಯ ಆನಂದವು ದೇಹದಲ್ಲಿ ನೆಲೆಸಲು ಸಾಧ್ಯವಾಗುವದಿಲ್ಲ.

*

ಎಲ್ಲಾ ತೀವ್ರವಾದ ಸಂತಸಾನುಭವಗಳು ಆನಂದದ ಮೂಲಕ್ಕೆ ಹಿಂದಿರುಗುವವು – ಕಾವ್ಯ, ಸಂಗೀತಗಳ ಸಂತಸ, ಎಲ್ಲಾ ವಿಧದ ವಸ್ತುಗಳ ಉತ್ಪಾದನೆ, ಕಾಳಗ, ಜಯ, ಸಾಹಸಗಳೂ ಸಹ ತೀವ್ರವಾದ ಸಂತಸಾನುಭವಗಳೇ, ಈ ಭಾವದಲ್ಲಿ ಎಲ್ಲವೂ ಬ್ರಹ್ಮಾನಂದದ ಸಹೋದರರೇ (ಲೈಂಗಿಕ ಸಂತಸ ಮತ್ತು ಬ್ರಹ್ಮಾನಂದಗಳು ಸಹೋದರರು) ಎಂಬ ಹೇಳಿಕೆಯಲ್ಲಿನ ಸತ್ಯವೂ ಸಹ ಇದೆ ಆಗಿದೆ.

ಆದರೆ ವಾಕ್ಯಾಂಗವು ಸಮಗ್ರವಾಗಿ ಅಸಮರ್ಪಕವಾಗಿದೆ. ಬ್ರಹ್ಮಾನಂದದಿಂದ ಜನಿಸಿರುವ ಭೌತಿಕ ಆನಂದವು ಸಹ ಇದೆ. ಅದು ಇನ್ನೂ ಹೆಚ್ಚು ಉನ್ನತ ಶ್ರೇಣಿ ಮತ್ತು ತೀವ್ರವಾದುದಾಗಿದೆ ಎಂದು ನಾವು ಹೇಳಬಹುದು. ಜೊತೆಗೆ ಲೈಂಗಿಕತೆಯನ್ನು

ಅದಕ್ಕೆ ಹೋಲಿಸುವುದು ಅಸಾಧ್ಯವೆಂದೇ ಹೇಳಬಹುದು. ಕಾಮೋದ್ರೇಕವು ಅದರ ಒಂದು ಒರಟಾದ ಮತ್ತು ಕೆಳಮಟ್ಟದ ಉದ್ವೇಗ ಮಾತ್ರವಾಗಿದೆ.

*

**ಲೈಂಗಿಕ–ಅಪೇಕ್ಷೆ ಮತ್ತು ಪ್ರೇಮ**

ಪ್ರೇಮದ ಪರಿಶುದ್ಧತೆಯನ್ನು ಕಾಪಾಡುವದು ಅಸಾಧ್ಯವೆಂದಲ್ಲ. ಆದರೆ ಈ ಎರಡು ವಿಷಯಗಳು (ಪ್ರೇಮ ಮತ್ತು ಲೈಂಗಿಕ ಅಪೇಕ್ಷೆ) ಎಷ್ಟು ಸಮೀಪದಲ್ಲಿವೆ ಮತ್ತು ಪ್ರಾಣಿಗಳ ಪ್ರಾರಂಭಗಳಲ್ಲಿ ಎಷ್ಟು ಒಂದಕ್ಕೊಂದು ಹೆಣೆದುಕೊಂಡಿವೆ–ಯೆಂದರೆ ಅವುಗಳನ್ನು ಸಂಪೂರ್ಣವಾಗಿ ಬೇರ್ಪಡಿಸುವದು ಅಸಾಧ್ಯವಾಗಿದೆ. ಪರಿಶುದ್ಧ ಚೈತ್ಯದ ಪ್ರೇಮದಲ್ಲಿ, ಕಾತುರ ಅಪೇಕ್ಷೆಯು ಲೇಶಮಾತ್ರವೂ ಇರುವದಿಲ್ಲ. ಆದರೆ ಸಾಮಾನ್ಯವಾಗಿ ಪ್ರಾಣಿಕ ಮಮತೆಯು ಚೈತ್ಯದೊಂದಿಗೆ ಬಲವಾಗಿ ಬೆಸೆಯುವದು ಆದರೂ ಅದು ಲೈಂಗಿಕವಾಗಿರುವದಿಲ್ಲ. ಆದರೆ ಪ್ರಾಣಿಕ ಮಮತೆ ಮತ್ತು ಪ್ರಾಣಿಕವಾದ ಭೌತ ಕಾಮೋದ್ರೇಕಗಳೆರಡೂ ಸಂಪೂರ್ಣವಾಗಿ ಒಂದಕ್ಕೊಂದು ಎಷ್ಟು ಹತ್ತಿರವಾಗಿವೆಯೆಂದರೆ ಯಾವುದೇ ಕ್ಷಣದಲ್ಲಿ ಒಂದು ಇನ್ನೊಂದನ್ನು ಜಾಗೃತಗೊಳಿಸಬಹುದು. ವ್ಯಕ್ತಿಗತವಾಗಿ ಲೈಂಗಿಕ–ಶಕ್ತಿಯು ಅಧಿಕವಾಗಿದ್ದಾಗ ಇದು ಅತ್ಯಧಿಕವಾಗಿ ಬಲಶಾಲಿಯಾಗುವದು (ಪ್ರಾಣಿಕವಾಗಿ ಶಕ್ತಿಭರಿತರಾಗಿರುವ ಜನರಲ್ಲಿ ಹೀಗಾಗುವ ಸಂಭವವು ಹೆಚ್ಚು) ಈ ಕಷ್ಟಗಳಿಗೆ ನೀಡಬಹುದಾದ ನೈಜ ಪರಿಹಾರಗಳು ಯಾವುವೆಂದರೆ ಮೊದಲನೆಯದಾಗಿ ಚೈತ್ಯದ ಶಕ್ತಿಯನ್ನು ಯಾವಾಗಲೂ ವೃದ್ಧಿಗೊಳಿಸುವದು, ಲೈಂಗಿಕ ಪ್ರಚೋದನೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಅದನ್ನು ಓಜಸ್ಸಾಗಿ ಪರಿವರ್ತನೆ ಮಾಡುವದು, ದಿವ್ಯದ ಕಡೆ ಪ್ರೇಮವನ್ನು ತಿರುಗಿಸುವದು ಮುಂತಾದವು. ಲೈಂಗಿಕವಾಗಿ ಉಪಯೋಗಿಸದಿರುವ ರೇತಸ್ಸಿನ ಶಕ್ತಿಯನ್ನು ಓಜಸ್ಸಾಗಿ ಪರಿವರ್ತಿಸಬಹುದು.

ಪ್ರಾಣಿಕದ ಮೇಲೆ ಚೈತ್ಯವು ತನ್ನ ಪ್ರಭಾವವನ್ನು ಬೀರಿದಾಗ, ಮೊಟ್ಟಮೊದಲಿಗೆ, ಚೈತ್ಯದ ಚಲನೆಯೊಂದಿಗೆ ಒಂದು ತಪ್ಪಾದ ಪ್ರಾಣಿಕ ಚಲನೆಯು ಸ್ವಲ್ಪವೂ ಮಿಶ್ರಣವಾಗದಂತೆ ನೋಡಿಕೊಳ್ಳಬೇಕು. ಕೀಳು ಮಟ್ಟದಲ್ಲಿರುವ ವಿಕೃತ ಕಾಮಾಸಕ್ತಿಯು ಪ್ರೇಮವು ತನ್ನ ಆಡಳಿತವನ್ನು ದೃಢಪಡಿಸದಂತೆ ಮಾಡುವದು.

ಆದುದರಿಂದ ಹೃದಯದಲ್ಲಿ ಚೈತ್ಯ ಪ್ರೇಮದ ಚಲನೆಯು ಉಂಟಾದಾಗ, ವಿಷಯಾಸಕ್ತಿ ಅಥವಾ ಪ್ರಾಣಿಕ ಅಪೇಕ್ಷೆಯು ಒಳಗೆ ಪ್ರವೇಶಿಸದಂತೆ ತಡೆಯಬೇಕು

– ಯಾವ ರೀತಿಯಲ್ಲೆಂದರೆ, ಸಾಮರ್ಥ್ಯವು ಔನ್ನತ್ಯದಿಂದ ಕೆಳಗೆ ಬಂದಾಗ, ವೈಯಕ್ತಿಕ ಮಹತ್ವಾಕಾಂಕ್ಷೆ ಮತ್ತು ಗರ್ವವನ್ನು ಅದರಿಂದ ದೂರ ಸರಿಸುವ ರೀತಿಯಲ್ಲಿ; ಏಕೆಂದರೆ ವಿಕೃತಿಯು ಅಲ್ಪ ಸ್ವಲ್ಪ ಮಿಶ್ರವಾದರೂ, ಚೈತ್ಯ ಅಥವಾ ಆಧ್ಯಾತ್ಮಿಕ ಕ್ರಿಯೆಯ ಹಾದಿ ತಪ್ಪಿಸುವದು ಮತ್ತು ನೈಜ ಪರಿಪೂರ್ಣತೆಯು ಉಂಟಾಗಲು ಅವಕಾಶ ನೀಡುವದಿಲ್ಲ.

ಮಹಿಳೆಯರಲ್ಲಿ ಭೌತಿಕ ವ್ಯಭಿಚಾರರಾಹಿತ್ಯತೆಯ ಮನೋಭಾವವು ಅಪರೂಪವಾದುದೇನೂ ಅಲ್ಲ. ಅದು ಸರ್ವೇ ಸಾಮಾನ್ಯ ಮತ್ತು ಅತ್ಯುನ್ನತ ಸ್ತ್ರೀತ್ವದ ಪ್ರತೀಕವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/488–492**

## ಲೈಂಗಿಕ ಕೇಂದ್ರದ ಪರಿವರ್ತನೆ

ಭೌತಿಕ ಸಿದ್ಧಿಗೆ ಲೈಂಗಿಕ ಕೇಂದ್ರ ಮತ್ತು ಅದರ ಶಕ್ತಿಯ ಪರಿವರ್ತನೆಯು ಅವಶ್ಯಕ; ಏಕೆಂದರೆ ಪ್ರಕೃತಿಯ ಎಲ್ಲಾ ಮಾನಸಿಕ, ಭಾವನಾತ್ಮಕ ಮತ್ತು ಭೌತಿಕ ಶಕ್ತಿಗಳಿಗೆ ದೇಹದಲ್ಲಿ ಆಧಾರವಾಗಿರುವದು ಇದೇ ಶಕ್ತಿ. ಅದನ್ನು ಒಂದು ಗಾಢತೆ, ನಿಕಟ ಬೆಳಕಿನ ಚಲನೆ, ಸೃಷ್ಟಿಶೀಲ ಸಾಮರ್ಥ್ಯ, ಪರಿಶುದ್ಧ ದಿವ್ಯ ಆನಂದವಾಗಿ ಮಾರ್ಪಡಿಸಬೇಕಾಗಿದೆ. ಅದು ಸುಪ್ರಮಾನಸ ಬೆಳಕು, ಸಾಮರ್ಥ್ಯ ಮತ್ತು ಮಹದಾನಂದವನ್ನು ಆ ಕೇಂದ್ರದೊಳಗಡೆಗೆ ತರುವದೇ ಆಗಿದೆ. ಏಕೆಂದರೆ ಆ ಕೇಂದ್ರವನ್ನು ಅವುಗಳು ಮಾತ್ರವೇ ಬದಲಾಯಿಸಬಲ್ಲವು. ನಂತರದ ಕ್ರಿಯಾಶೀಲತೆಯನ್ನು ದಿವ್ಯ ಮಾತೆಯ ಸುಪ್ರಮಾನಸ ಸತ್ಯ, ಸೃಷ್ಟಿಶೀಲ ದರ್ಶನ ಮತ್ತು ಸಂಕಲ್ಪಗಳು ಮಾತ್ರವೇ ನಿರ್ಣಯಿಸಬಲ್ಲವು. ಆದರೆ ಅದು ಚೇತನಾಭರಿತ ಸತ್ಯದ ಕ್ರಿಯಾಶೀಲತೆಯಾಗಿರುವದು; ಲೈಂಗಿಕ ಅಪೇಕ್ಷೆ ಮತ್ತು ಸಂತಸಾನುಭವಗಳನ್ನು ಒಳಗೊಂಡಿರುವ ಅಂಧಕಾರ ಮತ್ತು ಅಜ್ಞಾನಕ್ಕೆ ಸೇರಿದುದಾಗಿರುವದಿಲ್ಲ. ಅದು ಕಾಪಾಡುವ ಶಕ್ತಿಯಾಗಿರುವದು. ಪ್ರಾಣಶಕ್ತಿಗಳ ಅಪೇಕ್ಷೆರಹಿತ ಸ್ವತಂತ್ರ ಉಷ್ಣತೆ–ಯಾಗಿರುವದು. ಅವುಗಳ ಉಪಯೋಗಿಸಿ ಎಸೆದ ಕಸವಾಗಿರುವದಿಲ್ಲ. ಪ್ರಾಣಿಕ ಮತ್ತು ದೇಹದ ಅಪೇಕ್ಷೆಗಳನ್ನು ಅತ್ಯಧಿಕವಾಗಿ ತೃಪ್ತಗೊಳಿಸುವದು ಸುಪ್ರಮಾನಸ ಜೀವನ ಎಂಬ ಕಲ್ಪನೆಯಿಂದ ದೂರ ಸರಿಯಿರಿ; ಏಕೆಂದರೆ ಅದು ಮಾನವ ಸ್ವಭಾವವನ್ನು ಹೊಂದಿರುವ ಪ್ರಾಣಿಕ ವೈಭವೀಕರಣವಾಗುವದು. ಸತ್ಯದ

ಅವರೋಹಣಕ್ಕೆ ಇದಕ್ಕಿಂತಲೂ ದೊಡ್ಡದಾದ ಅಡ್ಡಿಯೇ ಇಲ್ಲ ಎಂದು ಹೇಳಬಹುದು. ತನಗೆ ಪ್ರಿಯವಾದ ಚಿಂತನೆಗಳು ಮತ್ತು ಕಲ್ಪನೆಗಳನ್ನು ದೃಢಪಡಿಸುವಿಕೆಯಾಗಿರಬೇಕು. ಸುಪ್ರಮಾನಸ ಸ್ತರ ಎಂದು ಬಯಸುವದು ಮನಸ್ಸು. ಅದು ತನ್ನ ಅಪೇಕ್ಷೆಗಳ ವೈಭವೀಕರಣವಾಗಿರಬೇಕು ಎನ್ನುವದು ಪ್ರಾಣಿಕ. ಭೌತ ದೇಹವು ತನ್ನದೇ ಆದ ಅನುಕೂಲಗಳು, ಸಂತಸಾನುಭವಗಳು ಮತ್ತು ಅಭ್ಯಾಸಗಳು ನಿರಂತರವಾಗಿ ಮುಂದುವರೆಯಬೇಕು ಎನ್ನುವದು. ಹಾಗಿರುವದಾದರೆ, ಅದು ಉತ್ಪ್ರೇಕ್ಷಿತ ಮತ್ತು ಅತ್ಯಧಿಕವಾಗಿ ವರ್ಧಿಸಿರುವ ಪ್ರಾಣಿ ಮತ್ತು ಮಾನವ ಸ್ವಭಾವಗಳನ್ನು ತೃಪ್ತಿಪಡಿಸುವ ವಿಧಾನ ಮಾತ್ರವಾಗುವದು. ಮಾನವತೆಯಿಂದ ದಿವ್ಯತ್ವವಾಗಿ ಪರಿವರ್ತನೆಯಾಗುವದಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/501**

### ಪ್ರಭುತ್ವವನ್ನು ಸಾಧಿಸುವ ವಿಧಾನ

ಭೌತಿಕ ವರ್ಜನೆ ಮಾತ್ರದಿಂದ ಪ್ರಭುತ್ವವನ್ನು ಸಾಧಿಸಲಾಗುವದಿಲ್ಲ. – ನಿರ್ಲಿಪ್ತತೆ ಮತ್ತು ನಿರಾಕರಣೆಗಳೆರಡು ಜೊತೆಗೂಡುವದರಿಂದ ಈ ಪ್ರಕ್ರಿಯೆಯು ಮುಂದುವರಿಯುವದು. ಲೈಂಗಿಕ ಪ್ರಚೋದನೆಯ ಹಿಂಬದಿಗೆ ಸರಿಯುವದು ಚೇತನಾ. ಅದಕ್ಕೆ ಈ ಪ್ರಚೋದನೆಯು ತನ್ನದಲ್ಲವೆನಿಸುವದು; ಪ್ರಕೃತಿ–ಶಕ್ತಿಯು ಇದನ್ನು ತನ್ನ ಮೇಲೆ ಹೊರಿಸಿರುವದು ಎಂಬ ಭಾವನೆಯು ಉಂಟಾಗಿ ಅಂಗೀಕರಿಸಲು ಮತ್ತು ಜೊತೆಗೂಡಲು ನಿರಾಕರಿಸುವದು – ಪ್ರತಿಯೊಂದು ಸಲದ ನಿರಾಕರಣೆಯು ಅದನ್ನು ಹೆಚ್ಚು ಹೆಚ್ಚು ದೂರ ತಳ್ಳುವದು. ಮನಸ್ಸು ಅದರ ಪ್ರಭಾವಕ್ಕೆ ಒಳಪಡುವದಿಲ್ಲ. ಕೆಲಕಾಲದ ನಂತರ ಪ್ರಮುಖ ಪಾತ್ರ ವಹಿಸುವ ಪ್ರಾಣಿಕ ಸತ್ತೆಯು ಇದೇ ರೀತಿ ದೂರ ಸರಿಯುವದು, ಅಂತಿಮವಾಗಿ ಭೌತಿಕ ಚೇತನವು ಅದನ್ನು ಆಧರಿಸುವದಿಲ್ಲ. ಕೊನೆಗೆ ಸ್ವಪ್ನದಲ್ಲಿಯೂ ನಿಮ್ಮ ಚೇತನವು ಇದನ್ನು ಮೇಲೇರಿಸಲಾಗದ ಸ್ಥಿತಿಯನ್ನು ತಲುಪುವವರೆಗೂ ಈ ಪ್ರಕ್ರಿಯೆಯು ಮುಂದುವರೆಯುವದು ಮತ್ತು ಈ ಕೆಳಗಿನ ಜ್ವಾಲೆಯನ್ನು ಉದ್ದೀಪನಗೊಳಿಸಲು ಬಾಹ್ಯ ಪ್ರಕೃತಿ–ಶಕ್ತಿಯಿಂದ ಯಾವುದೇ ಚಲನೆಯು ಉಂಟಾಗುವದಿಲ್ಲ. ಲೈಂಗಿಕ ಪ್ರವೃತ್ತಿಯು ಬಿಡದೆ ಅಂಟಿಕೊಂಡಾಗ ಈ ವಿಧಾನವನ್ನು ಅನುಸರಿಸಬೇಕು, ಆದರೆ ಕೆಲವರು ಪ್ರಕೃತಿಯಿಂದ ಒಮ್ಮೆಲೆ ನಿರ್ಧಾರಕವಾಗಿ ಈ ಕ್ರಿಯೆಯನ್ನು ಹೊರ ನೂಕಲೂ ಬಹುದು. ಆದರೆ ಅದು ಬಹಳ ಅಪರೂಪ.

*

ಸಾಧನೆಯಲ್ಲಿ ಲೈಂಗಿಕ ಪ್ರಚೋದನೆಯನ್ನು ಸಂಪೂರ್ಣವಾಗಿ ಇಲ್ಲವಾಗಿಸುವದು ಅತ್ಯಂತ ಕಷ್ಟಕರವಾದ ಕೆಲಸಗಳಲ್ಲಿ ಒಂದು ಎಂದೇ ಹೇಳಬಹುದು. ಆದರೆ ಹೆಚ್ಚು ಸಮಯ ಬೇಕಾಗಬಹುದು. ಸಾಧಕನು ಅದಕ್ಕೆ ಸಿದ್ಧವಾಗಿರಬೇಕು. ಆದರೆ ಅದರ ಸಂಪೂರ್ಣ ಇಲ್ಲವಾಗಿಸುವಿಕೆಯನ್ನು ಸಾಧಿಸಲಾಗಿದೆ ಮತ್ತು ಅದರ ಪ್ರಾಯೋಗಿಕ ಮುಕ್ತತೆಯು ಕೆಲವೊಮ್ಮೆ ನಿಮ್ನ ಚೇತನದ ಸ್ವಪ್ನ ಚಲನೆಗಳಲ್ಲಿ ಮಾತ್ರ ಸಂಭವಿಸುವದು ಸಹಜವೆನಿಸುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/503–04**

## ನಿರ್ಲಿಪ್ತತೆಯ ಮೂಲಕ ಪ್ರಭುತ್ವ

ಲೈಂಗಿಕ ಪ್ರಚೋದನೆಯು, ಆಕರ್ಷಕವೆಂದು ಭಾವಿಸಬೇಡಿ ಮತ್ತು ಪಾಪಕರ ಹಾಗು ಭೀಕರವೆಂದೂ ತಿಳಿಯಬೇಡಿ. ಆದರೆ ಅದು ನಿಮ್ನ ಸ್ವಭಾವದ ಒಂದು ತಪ್ಪಾದ ನಡೆಯೆಂದು ಮಾತ್ರ ತಿಳಿಯಿರಿ. ಅದನ್ನು ಸಂಪೂರ್ಣವಾಗಿ ನಿರಾಕರಿಸಿ; ಅದರೊಂದಿಗೆ ಹೋರಾಡುವದರ ಮೂಲಕ ಅಲ್ಲ, ಆದರೆ ಅದರಿಂದ ಹಿಂದಕ್ಕೆ ಸರಿಯುವದರ ಮೂಲಕ, ನಿಮ್ಮನ್ನು ಅದರಿಂದ ದೂರ ಸರಿಸುವದರ ಮೂಲಕ ಮತ್ತು ಅದಕ್ಕೆ ಅಂಗೀಕಾರವನ್ನು ನೀಡದಿರುವದರ ಮೂಲಕ; ಅದರ ಕಡೆ ಅದು ನಿಮ್ಮದಲ್ಲಿ – ಆದರೆ ಪ್ರಕೃತಿಯು ಅದನ್ನು ನಿಮ್ಮ ಮೇಲೆ ಹೊರಗಿನಿಂದ ಹೊರಿಸಿದೆ ಎಂಬಂತೆ ವೀಕ್ಷಿಸಿ. ಆ ಹೊರಿಸುವಿಕೆಯನ್ನು ಸಂಪೂರ್ಣವಾಗಿ ನಿರಾಕರಿಸಿ. ನಿಮ್ಮ ಪ್ರಾಣಿಕದಲ್ಲಿ ಯಾವುದಾದರೂ ಭಾಗವು ಅಂಗೀಕರಿಸಿದರೆ, ಅದನ್ನು ತಡೆಯಿರಿ ಮತ್ತು ನಿಮ್ಮ ನಿರಾಕರಣೆಗೆ ನೆರವಾಗಲು ದಿವ್ಯ ಶಕ್ತಿಯನ್ನು ಆಹ್ವಾನಿಸಿ; ಇದನ್ನು ನಿಮಗೆ ಶಾಂತವಾಗಿ, ಮೌನದಿಂದ ದೃಢವಾದ ನಿಶ್ಚಯದೊಂದಿಗೆ ಮಾಡಲು ಸಾಧ್ಯವಾದರೆ, ಕೊನೆಯಲ್ಲಿ ಬಾಹ್ಯ ಪ್ರಕೃತಿಯ ಅಭ್ಯಾಸದ ಮೇಲೆ ನಿಮ್ಮ ಆಂತರಿಕ ಸಂಕಲ್ಪವು ಮೇಲಗೈ ಸಾಧಿಸುವದು.

*

ಲೈಂಗಿಕ ಚಲನೆಯ ಬಗ್ಗೆ ಜಾಗರೂಕರಾಗಿರುವದು ಮೊದಲನೇ ಹೆಜ್ಜೆ; ಆದರೆ ಅದು ಮಾತ್ರವೇ ಸಾಕಾಗುವದಿಲ್ಲ. ನಿರಾಕರಣೆಯ ಒಂದು ಸ್ವಯಂಚಾಲಿತ ಶಕ್ತಿಯು ಮುಂದೆ ಬರಬೇಕು. ಅದು ಅಪೇಕ್ಷೆ ಮತ್ತು ಭಾವೋದ್ರೇಗಳು ಉಂಟಾಗುತ್ತಿದ್ದಂತೆ ಅವು ಯಾವ ಜಾಗವನ್ನು ಸ್ಪರ್ಶಿಸುವವೋ ಅಲ್ಲಿಂದ ಅಥವಾ ಅವು ಉದ್ಭವಿಸಿದ ಪ್ರಾಣಿಕದಿಂದ ಅಥವಾ ಮನಸ್ಸಿನಿಂದ ಹೊರಹೋಗುವಂತೆ ಮಾಡಬೇಕು. ಇದು

ಬಲವಾದ ನಿರಾಕರಣೆಯ ಸಂಕಲ್ಪ ಶಕ್ತಿಯು ಚೇತನದ ಮೇಲೆ ಕ್ರಿಯಾಶೀಲವಾಗಿ ಅದೇ ಅಭ್ಯಾಸವಾದಾಗ ಸಾಧ್ಯವಾಗುವದು ಅಥವಾ ನಿರ್ಲಿಪ್ತ ಆಂತರಿಕ ಸತ್ತೆಯು ತನ್ನಲ್ಲೇ ಒಂದು ಸ್ವಯಂಚಾಲಿತ ಚಲನಶೀಲ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸಿಕೊಂಡಾಗ ಸಾಧ್ಯವಾಗುವದು. ಸ್ವತಃ ಅದರಿಂದ ಸ್ಪರ್ಶಿತವಾಗದಿರುವದು ಮಾತ್ರವಲ್ಲ. ಆದರೆ ಒಂದು ಪರಿಶುದ್ಧಗೊಳಿಸುವ ಕ್ರಿಯಾಶೀಲ ಶಕ್ತಿಯ ಮೂಲಕ ಅಥವಾ ಅಂತಿಮವಾಗಿ, ಚೈತ್ಯದ ಪರಿಪೂರ್ಣ ಹೊರಹೊಮ್ಮುವಿಕೆಯು, ಮನಸ್ಸು, ಪ್ರಾಣಿಕ ಮತ್ತು ದೇಹಗಳನ್ನು ತನ್ನ ಆಳ್ವಿಕೆಗೆ ಒಳಪಡಿಸುವದರಿಂದ ಇವುಗಳನ್ನು ತಿರಸ್ಕರಿಸುವದು. ಕೊನೆಯದು ಅತ್ಯಂತ ಶೀಘ್ರಗತಿಯ ಮತ್ತು ಸುಲಭವಾದ ಹಾದಿ. ಅಲ್ಲಿಯವರೆಗೂ ಈ ಘಟನೆಗಳು ಸಂಭವಿಸುವವು. ಆದರೆ ನಿನ್ನಲ್ಲಿ ಪಾಪ ಅಥವಾ ತಪ್ಪು ಎಂಬ ಹಳೆಯ ಕಲ್ಪನೆಗಳು ಈಗಲೂ ಇರಬಹುದು ಅವುಗಳು ನಿನ್ನನ್ನು ನೋಯಿಸುತ್ತಿರಬಹುದು. ಇದನ್ನು ನೀನು ಪ್ರಕೃತಿಯ ಹೊಂದಾಣಿಕೆ ಎಂದು ಭಾವಿಸಬೇಕು ಮತ್ತು ಇದರಲ್ಲಿ ನೀನು ಈಗ ಅಂಗೀಕರಿಸದಿರುವ ಹಲವಾರು ಹಳೆಯ ಚಲನೆಗಳು ಅಭ್ಯಾಸ ಬಲದಿಂದ ಹಿಂದಿರುಗುವವು ಮತ್ತು ಸತ್ತೆಯ ಯಾವುದಾದರು ಭಾಗವು ರೂಢಿಯಾಗಿರುವ ಪ್ರತಿಕ್ರಿಯೆಯನ್ನೇ ನೀಡಬಹುದು. ಆದರೆ ಸತ್ತೆಯ ಭಾಗವು ಅದನ್ನು ನಿರಾಕರಿಸುವಂತೆ ಮಾಡಿದರೆ ಆಗ ಪ್ರತಿಕ್ರಿಯೆಗಳು ಕಡಿಮೆಯಾಗುವವು. ಈ ಹಿಂದಿರುಗುವಿಕೆಗಳಿಂದ ನೀನಾಗಲೀ ಅಥವಾ ನಿನ್ನ ಮನಸ್ಸಾಗಲೀ ಬೇಸರವನ್ನು ಹೊಂದದಿರುವಂತೆ ಕಾಪಾಡಿಕೊಳ್ಳಬೇಕು. ಏಕೆಂದರೆ ವಿರೋಧಿಸುವ ಸಾಮರ್ಥ್ಯವನ್ನು ಅದು ಕ್ಷೀಣಗೊಳಿಸುವದು. ಈ ವಿಷಯಗಳಿಂದ ನೀನು ಶಾಂತವಾಗಿ ದೂರ ಸರಿಯಬೇಕು. ಆಗ ನಿರ್ಲಿಪ್ತ ಆಂತರಿಕ ಸತ್ತೆಯು ಇನ್ನೂ ಹೆಚ್ಚು ಚಲನಶೀಲವಾಗುವದಲ್ಲದೆ ಅದನ್ನು ಪ್ರಾಣಿಕ ಸ್ವಭಾವದಿಂದ ಹೊರಗಿಡುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/508–09**

ಲೈಂಗಿಕ ಸಮಸ್ಯೆಗಳಿಗೆ ಅತಿ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವದರಿಂದ ಮತ್ತು ಅತಿ ಹೆಚ್ಚಾದ ಒತ್ತಡ ಮನೋಭಾವದಿಂದ ಕೆಲವು ವೇಳೆ ಒದ್ದಾಟಗಳು ಹೆಚ್ಚಾಗುವವು. ಶಾಂತವಾಗಿ ಅದರ ಸಂಪರ್ಕದಿಂದ ಹೊರಬಂದು ನಿರಂತರವಾಗಿ ತಿರಸ್ಕರಿಸುವದಲ್ಲದೆ, ಪುನರಾವರ್ತನೆಯಿಂದ ವಿಚಲಿತರಾಗದಿರುವದೇ ಸಮರ್ಪಕವಾದ ಹಾದಿ. – ಇದೇ ಅತ್ಯುತ್ತಮವಾದ ಉಪಾಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/510**

ಮತ್ತೊಂದು ಅಂಶವನ್ನು ಗಮನಿಸಿದಾಗ, ಸಮರ್ಪಕವಾದ ನಡೆ ಯಾವುದೆಂದರೆ, ಲೈಂಗಿಕ ದೌರ್ಬಲ್ಯದ ಬಗ್ಗೆ ಚಿಂತೆ ಮಾಡದಿರುವದು ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ಆತಂಕಕ್ಕೆ ಒಳಗಾಗಿ ಕುಗ್ಗಬಾರದು ಮತ್ತು ಅದರೊಂದಿಗೆ ನಿರಂತರವಾಗಿ ಹೋರಾಡಲು ಪ್ರಯತ್ನಿಸಬಾರದು. ಜೊತೆಗೆ ಸಂಪೂರ್ಣವಾಗಿ ಉಪೇಕ್ಷಿಸಿ ಅದು ಬೆಳೆಯಲು ಅವಕಾಶ ನೀಡಬಾರದು. ಪೂರ್ತಿಯಾಗಿ ಅದರಿಂದ ಹೊರಬರುವದಂತೂ ಬಹಳ ಕಷ್ಟದ ಕೆಲಸ; ನಾವು ಶಾಂತವಾಗಿ ಅದರ ಪ್ರಾಮುಖ್ಯತೆಯನ್ನು ಮತ್ತು ಕಷ್ಟವನ್ನು ಗುರುತಿಸಬೇಕು ಹಾಗು ಮೌನವಾಗಿ ದೃಢತೆಯೊಂದಿಗೆ ಅದನ್ನು ನಿಯಂತ್ರಿಸಬೇಕು. ಅದರ ಗುಣ ವಿಶೇಷದ ಅಲ್ಪ ಸ್ವಲ್ಪ ಭಾಗ ಅಥವಾ ಪ್ರತಿಕ್ರಿಯೆಗಳು ಉಳಿದಿದ್ದರೆ ಅದರಿಂದ ಆತಂಕಪಡಬಾರದು – ಅದು ಸಾಧನೆಗೆ ತೊಂದರೆ ನೀಡದಂತೆ ಅಥವಾ ಉನ್ನತ ಭಾವನಾತ್ಮಕ ಮತ್ತು ಮನಸ್ಸಿನ ಸತ್ತೆಗಳ ನಿಯಂತ್ರಿಸುವ ಸಂಕಲ್ಪವನ್ನು ಅದು ಅಡ್ಡಿಪಡಿಸದಿರುವಂತೆ ನೋಡಿಕೊಳ್ಳಬೇಕು ಅಷ್ಟೇ.

*

ಈ (ಲೈಂಗಿಕ) ಚಲನೆಗೆ ಹೆಚ್ಚು ಗಮನ ನೀಡದಿರುವದೇ ಅತ್ಯುತ್ತಮವಾದ ಕೆಲಸವನ್ನೆಬಹುದು ಆದರೆ ಮನಸ್ಸು ಮತ್ತು ಉನ್ನತ ಪ್ರಾಣಿಕದಿಂದ ಅದಕ್ಕೆ ನೆರವು ಮತ್ತು ಅಂಗೀಕಾರವನ್ನು ನೀಡದೆ ಅದು ನಿರ್ಗಮಿಸುವಂತೆ ಮಾಡಬೇಕು.

ಲೈಂಗಿಕತೆಯನ್ನು ತಡೆಯಲು ಅತ್ಯಧಿಕವಾಗಿ ಚಿಂತಿಸಬಾರದು. ಅದರಿಂದ ಅದು ಉಲ್ಬಣಿಸಬಹುದು. ನೀವು ಸಕಾರಾತ್ಮಕ ಅನುಭವಕ್ಕೆ ಹೆಚ್ಚಾಗಿ ತೆರೆದು–ಕೊಳ್ಳಬೇಕು. ನಿಮ್ಮ ಪ್ರಾಣಿಕದೊಂದಿಗೆ ಹೋರಾಡುವದರಲ್ಲಿ ಹೆಚ್ಚು ಸಮಯವನ್ನು ಕಳೆದರೆ ಅದರಿಂದ ಫಲ ಸಿಗುವದು ಮತ್ತಷ್ಟು ನಿಧಾನವಾಗುವದು. ನಿರ್ಲಿಪ್ತತೆಯೇ ಮೊದಲ ಹೆಜ್ಜೆ. ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದಾಗಲೂ ಅದರ ಸೂಚನೆಗಳಿಂದ ನೀವು ದೂರ ಸರಿದರೆ ನಿಮ್ಮ ಸಾಧನೆಗೆ ತಡೆಯೊಡ್ಡುವ ತಮಸ್ಸು, ಜಡತೆ .... ಮುಂತಾದವುಗಳಷ್ಟು ಅವು ನಿಮ್ಮನ್ನು ಬಾಧಿಸದು. ನಂತರದಲ್ಲಿ ಅವುಗಳ ಅಂತಿಮ ನಿರ್ಗಮನವಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/510–11 – ಶ್ರೀ ಅರವಿಂದರು**

# ಲೋಭ

**– ಅನು: ನಾಗಜ್ಯೋತಿ ಮಾನ್ವಿ**

ದುರಾಸೆ, ದುರಾಸೆ, ಯಾವಾಗಲೂ ದುರಾಸೆ... ಇದು ಭೌತಿಕ ಪ್ರಕೃತಿಯ ಪ್ರತಿಕ್ರಿಯೆಯಾಗಿದೆ.

ಯಾವುದೇ ರೀತಿಯಲ್ಲಾದರೂ ದೈವದ ಪ್ರಕಟಣೆಯ ಇಚ್ಛೆ ಇದ್ದಲ್ಲಿ, ಇದು ಒಮ್ಮೆ ಲೋಭದ ಉದ್ದೇಶವಾಗಿಬಿಡುತ್ತದೆ. ಸ್ವಾಧೀನ ಪಡಿಸಿಕೊಳ್ಳಬೇಕೆಂಬವಸರ, ದರೋಡೆ, ಶೋಷಣೇ, ಬಲಾತ್ಕರಿಸುವಿಕೆ, ಕಬಳಿಸುವಿಕೆಯ ಪ್ರಯತ್ನ ಮತ್ತು ದೈವತ್ವವನ್ನು ಅದುಮಿ ಹಾಕುವದು. ದೈವದ ಸ್ಪರ್ಶಕ್ಕೆ ಜಡದ ಸ್ವೀಕಾರವು ಹೀಗೆಯೇ ಇರುತ್ತದೆ.

ಓ ನನ್ನ ಪ್ರಭುವೇ, ನೀನು ಉದ್ಧಾರಕನಾಗಿ ಬರುವೆ ಆದರೆ ಇವು "ನಿನ್ನನ್ನೇ" ವಂಚಿಸುತ್ತವೆ! ನೀನು ಬರುವದು ಐಕ್ಯತೆಗಾಗಿ, ರೂಪಾಂತರಕ್ಕಾಗಿ, ಸಾಕ್ಷಾತ್ಕಾರಕ್ಕಾಗಿ ಮತ್ತು ಅವುಗಳು ಕೇವಲ ಸ್ವಾರ್ಥವನ್ನು ಹೆಚ್ಚಿಸಿಕೊಳ್ಳುತ್ತ, ಎಲ್ಲವನ್ನೂ ಹೀರಿಕೊಳ್ಳುವದರ ಸಲುವಾಗಿ ಇರುವದರಿಂದ, ಸ್ವಾರ್ಥವನ್ನು ಹೆಚ್ಚು ಮಾಡುವದರ ಕುರಿತಾಗಿಯೇ ವಿಚಾರ ಮಾಡುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/128–29**

ದುರಾಸೆಯಿಂದಿರಬೇಡ – ನಿನಗೆ ಏನು ಕೊಡಲಾಗಿದೆಯೋ ಅದರ ಬಗ್ಗೆ ಗೋಳಾಡದೇ, ಸಂತೃಪ್ತನಾಗಿರು ಮತ್ತು ಕೃತಜ್ಞನಾಗಿರು. ಏಕೆಂದರರೆ ನಿನಗೆ ಇದಕ್ಕಿಂತ ಹೆಚ್ಚಾಗಿ ಕೊಡಲಾಗುವದಿಲ್ಲ.

ಕೆಲವು ಜನರು ನಿಜವಾಗಿಯೂ ದುರಾಸೆಯಿಂದಲೇ ಕೂಡಿದ್ದಾರೆ. ಅವರೆಂದಿಗೂ ತೃಪ್ತಿಯನ್ನು ಕಾಣುವದಿಲ್ಲ. ನೀನು ಎಷ್ಟೇ ಕೊಟ್ಟರೂ ಇನ್ನೂ ಇನ್ನೂ ಹೆಚ್ಚಾಗಿ ಬಯಸುತ್ತಾರೆ. ದೈವವು ನಮ್ಮೊಂದಿಗೆ ಮಗ್ನವಾಗಿ ಬೇರೇನೂ ಮಾಡದಿದ್ದರೂ ಅದು ಅವರಿಗೆ ಸಹಜವೆಂದೇ ಎನಿಸುತ್ತದೆ.

ಪ್ರತಿಯೊಬ್ಬರಿಗೂ ಅವರ ನಿಜವಾದ ಅವಶ್ಯಕತೆಗನುಗುಣವಾಗಿ ಕೊಡಲ್ಪಟ್ಟಿರುತ್ತದೆ. ವಾಸ್ತವವಾಗಿ ಸ್ವೀಕಾರ ಮಾಡುವವನ ಸಾಮರ್ಥ್ಯ ಮತ್ತು ಅದನ್ನು ಉಪಯೋಗಿಸಿಕೊಳ್ಳುವ ಹಂತದ ಮೇಲೆ ಕೊಡಲಾಗಿರುತ್ತದೆ.

ಒಂದು ವೇಳೆ ಅವನು ಹೆಚ್ಚು ಕೇಳಿದರೆ, ನಾನು ಕೊಡಲು ವಿರಳವಾಗಿಯೇ ನಿರಾಕರಿಸುತ್ತೇನೆ. ಆದರೆ ಆಗಾಗ ಅವನು ಸ್ವೀಕಾರ ಮಾಡುವದಕ್ಕಿಂತಲೂ ನಾನು ಹೆಚ್ಚಾಗಿಯೇ ಕೊಡುತ್ತೇನೆ ಮತ್ತು ಆಗ ಅದು ಅವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಕೆಲವೊಮ್ಮೆ ದುರಂತಕ್ಕೂ ಈಡಾಗಬಹುದು.

ದೈವವು ಬೇರೆಯವರಿಗೆ ಕೊಟ್ಟಿರುವದನ್ನು, ತಾನು ಮಾತ್ರ ತೆಗೆದುಕೊಳ್ಳಬೇಕೆಂದು ಬಯಸುವವನೇ ಕಳ್ಳನಾಗುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 20(ನೂತನ)/320**

**ದುರಾಶೆ (ಆಹಾರಕ್ಕಾಗಿ)**

ಭೌತಿಕ ಪ್ರಜ್ಞೆಗೆ ಸಂಬಂಧಿಸಿದ ಯಾವುದೇ ದುರಾಶೆಯಾಗಲಿ, ಪ್ರಕೃತಿಯ ಯಾವುದೇ ಅವಶ್ಯಕತೆಗಳು ಮತ್ತು ಅನುಕೂಲಗಳು ಎಂದು ಕರೆಯಲ್ಪಡುವ ಇವುಗಳು, ಯಾವಾಗಲೂ ಸಾಧನೆಗೆ ಅತಿ ಗಂಭೀರವಾದ ಅಡೆತಡೆಗಳಾಗಿರುತ್ತವೆ.

ದುರಾಶೆಯ ಮೂಲಕವೇ ತೃಪ್ತಿಪಡುವ ಪ್ರತಿಯೊಂದು ಸಣ್ಣ ಅಂಶವೂ ಸದಾ ಗುರಿಯಿಂದ ದೂರವೇ ಕರೆದೊಯ್ಯುತ್ತವೆ.

ನೀವು ಆಶೆಪಟ್ಟಾಗ, ಯಾವ ವಸ್ತುವನ್ನು ನೀವು ಆಶೆಪಡುತ್ತೀರೋ ಅದು ನಿಮ್ಮನ್ನು ಆಳುತ್ತದೆ, ಅದು ನಿಮ್ಮ ಮನಸ್ಸು ಮತ್ತು ಪ್ರಾಣವನ್ನು ತನ್ನಾಧೀನದಲ್ಲಿ ತೆಗೆದುಕೊಳ್ಳುತ್ತದೆ ಮತ್ತು ನೀವು ಅದಕ್ಕೆ ದಾಸರಗುತ್ತೀರಿ. ನಿಮಗೆ ಆಹಾರದ ಮೇಲೆ ದುರಾಶೆಯಿದ್ದಲ್ಲಿ ಆಗ ನೀವು ಆಹಾರದ ಮೇಲೆ ಪ್ರಭುತ್ವ ಹೊಂದಲು ಸಾಧ್ಯವೇ ಆಗುವದಿಲ್ಲ. ಆಹಾರವೇ ನಮ್ಮ ಮೇಲೆ ಪ್ರಭುತ್ವ ಸ್ಥಾಪಿಸಿರುತ್ತದೆ.

ಒಬ್ಬ ಸಾಧಕನು ತನ್ನ ದೇಹದ ಅವಶ್ಯಕತೆಯನ್ನು ತೃಪ್ತಿಪಡಿಸಲು ಮಾತ್ರ ಆಹಾರ ತೆಗೆದುಕೊಳ್ಳಬೇಕೇ ವಿನಾ ತನ್ನ ದುರಾಸೆಯ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಅಲ್ಲ.

*

ದೈವದೊಂದಿಗೆ ಐಕ್ಯತೆಗಿಂತಲೂ ನಿಮ್ಮ ನಾಲಿಗೆಯ ಸುಖವೇ ಹೆಚ್ಚು ಎನಿಸಿದರೆ, ಇದು ನಿಮ್ಮ ಪಾಡು ಮತ್ತು ಅದಕ್ಕೆ ನಾನಂತೂ ಏನೂ ಹೇಳುವದಿಲ್ಲ. ಅದೂ ಅಲ್ಲದೇ ಇಂತಹ ಸ್ಥಿತಿಗೆ ನಾನು ಒಪ್ಪಿಗೆಯನ್ನೂ ಕೊಡುವದಿಲ್ಲ. ಆದರೆ ಕೆಳಸ್ಥರದ

ಪ್ರಕೃತಿಯಿಂದ ಮೇಲೆರುವ ಇಚ್ಛೆ ಇರಬಹುದು ಅಥವಾ ಭೌತಿಕದ ಹೊಂಡದಲ್ಲಿ ಮುಳುಗಿಕೊಂಡಿರಬೇಕಾದ ಸಂದರ್ಭವಿರಬಹುದು, ಅದೇನೆ ಇದ್ದರೂ ಪ್ರತಿಯೊಬ್ಬರೂ ತಮ್ಮ ತಮ್ಮ ಆಯ್ಕೆಯನ್ನು ಮಾಡಲು ಸ್ವತಂತ್ರರಿದ್ದಾರೆ. ಉನ್ನತ ಮಾರ್ಗವನ್ನು ಆಯ್ಕೆ ಮಾಡುವವರಿಗೆ ನನ್ನ ಸಹಾಯವಂತೂ ಯಾವಾಗಲೂ ಇರುತ್ತದೆ.

*

ಆಹಾರದ ಮೇಲಿನ ದುರಾಸೆ ಮತ್ತು ಮೋಹದಿಂದ ನಾಳಿಗೆ ಆಸೆಯಿಂದ ಮುಕ್ತರಾಗುವದು ಒಂದು ಅತ್ಯಾವಶ್ಯಕವಾಗಿರುವ ಮನೋಧರ್ಮವಾಗಿದೆ ವಿನಾ ಆಹಾರವನ್ನು ಕಡಿಮೆ ಮಾಡುವದಾಗಲೀ ಅಥವಾ ಹಸಿವಿನಿಂದ ಇರುವದಾಗಲೀ ಅಲ್ಲ. ದೇಹವನ್ನು ನಿರ್ವಹಿಸಲು ಮತ್ತು ಅದರ ಸಾಮರ್ಥ್ಯ ಮತ್ತು ಆರೋಗ್ಯಕ್ಕಾಗಿ ಅವಶ್ಯಕವಾಗಿರುವ ಆಹಾರವನ್ನು ತೆಗೆದುಕೊಳ್ಳಬೇಕೇ ವಿನಾ ಆಹಾರದ ಮೇಲಿನ ಮೋಹ ಮತ್ತು ದುರಾಶೆಯಿಂದಲ್ಲ.

*

ಎಂದಿಗೂ ಆಹಾರವನ್ನು ಪೋಲು ಮಾಡದಿರುವದು ನೂರುಪಟ್ಟು ಪರಿಣಾಮಕಾರಿಯಾಗಿದೆ. ಕೇವಲ ತೋರಿಕೆಗಾಗಿ ಒಂದು ಬಾರಿ ಕಡಿಮೆ ಊಟ ಮಾಡಿ, ತದನಂತರದಲ್ಲಿ ಮೊದಲಿನಕಿಂತ ಹೆಚ್ಚಿನ ಪ್ರಮಾಣದಲ್ಲಿ ತಿನ್ನುವದು ಸಲ್ಲ.

ಆಹಾರದ ದುಂದು ವೆಚ್ಚದ ವಿರುದ್ಧ ಒಂದು ಬಲವಾದ, ಉತ್ಕಟವಾದ, ಪ್ರಾಮಾಣಿಕತೆಯ ಅವಶ್ಯಕತೆ ಇರುತ್ತದೆ. ಇದಕ್ಕಾಗಿ ನನ್ನ ಹೃದಯಪೂರ್ವಕ ಒಪ್ಪಿಗೆಯೂ ಇದೆ.

ಆಶ್ರಮ ವಾಸಿಗಳು ಎಂದಿಗೂ ಪಚನ ಸಾಮರ್ಥ್ಯಕ್ಕಿಂತ ಹೆಚ್ಚು ತಿನ್ನದೇ, ಮತ್ತು ಎಂದಿಗೂ ತಾವು ಉಣ್ಣುವದಕ್ಕಿಂತ ಹೆಚ್ಚಾಗಿ ಕೇಳದಿರುವ ಮೂಲಕ ತಮ್ಮ ಸದ್ಭಾವ ಮತ್ತು ಸಹಕಾರವನ್ನು ತೋರಿಸಲಿ.

*

***ಸಾಮಾನ್ಯ ಭೌತಿಕ ಅಂಶದ ಮೇಲೆ ಇರುವ ಒಂದು ಹೀನವಾಗಿರುವ ಅವಲಂಬನೆಯನ್ನು ಹೇಗೆ ಕಡಿಮೆ ಮಾಡಿಕೊಳ್ಳಬೇಕು ಮತ್ತು ಹೆಚ್ಚು ಹೆಚ್ಚು ವಿಶ್ವಾತ್ಮಕ ಪ್ರಾಣಿಕ ಶಕ್ತಿಗೆ ನಮ್ಮನ್ನು ನಾವು ಹೇಗೆ ತೆರೆದಿಟ್ಟುಕೊಳ್ಳಬೇಕು ಎನ್ನುವ ಸರಳ ವಿಧಾನದ ಸಲಹೆಯನ್ನು ದಯವಿಟ್ಟು ಹೇಳಿ.***

ಭೌತಿಕ ಪಶುತ್ವ ಮತ್ತು ಪ್ರಾಣಿಕ ದುರಾಸೆಯಿಂದ ಹೊರಬರುವದು ಅಷ್ಟು ಸುಲಭವಲ್ಲ. ಕೇವಲ ಛಲದಿಂದ ಕೂಡಿದ ಸತತ ಪ್ರಯತ್ನವು ಮಾತ್ರ ಯಶಸ್ಸನ್ನು ಕೊಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/251–52 – ಶ್ರೀಮಾತೆ**

## ಮೋಹ

### ಇನ್ನೊಬ್ಬರ ಮೇಲೆ ಮೋಹ

ಮಾನವ ಸಂಬಂಧದ ಮೇಲೆ ಆಧಾರಿತವಾದುದೆಲ್ಲವೂ ಅಸ್ಥಿರ ಮತ್ತು ಕ್ಷಣಿಕವಾಗಿದ್ದು, ಕಲಬೆರಕೆಯಿಂದ ಕೂಡಿದ್ದು ಸದಾ ಅತೃಪ್ತಿಯಿಂದಲೇ ಕೂಡಿರುತ್ತದೆ; ಯಾವುದು ದೈವತ್ವದಲ್ಲಿ ಮತ್ತು ದೈವತ್ವದ ಮೂಲಕವೇ ಸ್ಥಾಪಿತವಾಗಿರುತ್ತದೆಯೋ, ಅದು ಮಾತ್ರ ಉಳಿಯುತ್ತದೆ ಮತ್ತು ಸಂತೃಪ್ತಿಯನ್ನೂ ನೀಡುತ್ತದೆ.

*

ಆಶೆ ಮತ್ತು ಮೋಹದಿಂದ ಮುಕ್ತನಾದ ಗೆಳೆತನವು ಒಂದು ಆದರ್ಶ ಪರಿಹಾರವಾಗಿದೆ. ಆದರೆ ಅದನ್ನು ನಿಭಾಯಿಸಲು ತನ್ನ ಮೇಲೆ ಪರಿಪೂರ್ಣವಾದ ಪ್ರಭುತ್ವ ಮತ್ತು ಪ್ರಾಣ ಹಾಗು ದೇಹದ ಮೇಲೆ ದೃಢವಾದ ಶಿಸ್ತಿನ ಅವಶ್ಯಕತೆ ಇರುತ್ತದೆ. ನಾವು ಈ ಸ್ಥಿತಿಯನ್ನು ಪಡೆಯದಿದ್ದಾಗ, ಸೈತಾನನನ್ನು ಕೆರಳಿಸದೇ ಇರುವದು ಮತ್ತು ಎಲ್ಲಾ ಸಂಬಂಧಗಳನ್ನೂ ಕಡಿತಗೊಳಿಸಿಕೊಳ್ಳುವದೇ ವಿವೇಕವಾಗಿದೆ.

*

ಒಂದು ಸಮಯವಿತ್ತು, ಆಗ ನೀವು ಭಾವೋದ್ರೇಕರಾಗಿದ್ದಿರಿ ಮತ್ತು ನಿಮ್ಮ ವಾತ್ಸಲ್ಯವು ತಕ್ಷಣ ಮನೋವಿಕಾರದಲ್ಲಿ ಅವನತಿ ಹೊಂದಿ ಮತ್ತು ಅದು ಅಸಮತೋಲದಿಂದ ತುಂಬಿಕೊಂಡಿತ್ತು.

*

ಆದರೆ ನೀನುಈಗ ಹೆಚ್ಚು ಸಮಚಿತ್ತದಿಂದ ಇರುವೆ, ಮತ್ತು ನಿಸ್ಸಂಶಯವಾಗಿ ಹೆಚ್ಚು ನಿಶ್ಚಲವಾಗಿ ಅಂದರೆ ಅಚಂಚಲನಾಗಿರುವೆ. ಒಂದು ದಿನ ನಿರ್ಮೋಹಿತನಾಗಿರುವೆ,

ಆದರೆ ಯಾವುದೇ ಬಯಕೆ ಮತ್ತು ಅಹಂಕಾರವಿಲ್ಲ ಪ್ರಕಾಶಮಾನವಾದ ಮತ್ತು ಮಧುರ ಅನುಕಂಪದಲ್ಲಿರುವೆ.

*

ಆಕರ್ಷಣೇಯು ಯಾವ ರೀತಿಯದಾಗಿದೆ ಎನ್ನುವದರ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ನಿನ್ನ ನಿಷ್ಕಪಟತೆ ಮತ್ತು ಪ್ರಾಮಾಣಿಕತೆಯನ್ನು ನಾನು ಬಹಳ ಪ್ರಶಂಸೆ ಮಾಡುತ್ತೇನೆ. ಮಾನವನ ಯಾವುದೇ ಅನ್ಯೋನ್ಯ ಸಂಬಂಧದಲ್ಲಿ ಪ್ರಾಣಿಕ ಕಲಬೆರಕೆಯಿಂದ ಮುಕ್ತನಾಗುವದು ಬಹಳ ಕಷ್ಟವೆನ್ನುವದು ನಿಜವಾಗಿದೆ. ಆದರೆ ಆ ಸಂಬಂಧಗಳನ್ನು ಕತ್ತರಿಸುವದು ಪರಿಹಾರವಲ್ಲ, ಆದರೆ ನಾವು ಸತತವಾಗಿ ಜಾಗೃತವಾಗಿದ್ದು (ನಮ್ಮನ್ನು ನಾವು ರಕ್ಷಿಸಿಕೊಳ್ಳುತ್ತಾ) ಮತ್ತು ಯಾವುದೇ ಪ್ರಾಣಿಕ ಆಕರ್ಷಣೆಗಳು ನಮ್ಮ ಕ್ರಿಯೆಯನ್ನು ಆಳಬಾರದು.

*

ಎಲ್ಲಾ ಮಾನವ ಮೋಹಗಳಿಂದ ನಿಮ್ಮನ್ನು ನೀವು ಮುಕ್ತವಾಗಿರಿಸಿಕೊಳ್ಳಿ ಆಗ ನೀವು ಸಂತೋಷವಾಗಿರಲು ಸಾಧ್ಯವಾಗುತ್ತದೆ.

*

ಮೋಹದ ಅಪಾಯಕಾರಿ ಮಿತ್ರರು ಎಂದರೆ ಅದು ನೆನಪೇ ಆಗಿರುತ್ತದೆ.

*

ಪ್ರಸ್ತುತ ಸಮಯದಲ್ಲಿ ನಿನ್ನನ್ನು ನೀನು ನಿಶ್ಚಲವಾಗಿಟ್ಟುಕೊಳ್ಳುವದೇ ಶ್ರೇಷ್ಠ ಮತ್ತು ನಿನ್ನ ಅಂತರಂಗದ ಬೆಳವಣಿಗೆಯ ಮೇಲೆ ಕೇಂದ್ರೀಕರಿಸು, ನಂತರ, ಮೋಹದ ಎಲ್ಲ ಲೇಪದಿಂದಲೂ ಮುಕ್ತನಾಗಿದ್ದೇನೆ ಎಂದೆನಿಸದಾಗ, ಯಾವುದೇ ಕಷ್ಟವಿರಲಾರದೇ ಮತ್ತು ಸಹಜವಾಗಿ ನಿನ್ನ ಪತ್ರ ವ್ಯವಹಾರವನ್ನು ಮರು ಪ್ರಾರಂಭಿಸಬಹುದು; ಆಗ ಅದು ಉಪಯುಕ್ತ ಮತ್ತು ಲಾಭದಾಯಕವೂ ಆಗಿರುತ್ತದೆ. ಆದರೆ ನೀನು ಬೇರೆಯವರಿಗೆ ಏನನ್ನು ಕೊಡಬೇಕೆಂದು ಬಯಸುತ್ತೀಯೋ, ಅದು ನಿನ್ನಲ್ಲೇ ಸಾಕ್ಷಾತ್ಕಾರ ಮಾಡಿಕೊಳ್ಳುವದೇ ನಿಯಮವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/283–85 – ಶ್ರೀಮಾತೆ**

# ಮಹತ್ವಾಕಾಂಕ್ಷೆ, ಗರ್ವ ಮತ್ತು ಸ್ವಾಭಿಮಾನ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ಸ್ವಾಭಿಮಾನ: ಅಸತ್ಯದ ಸಾಮಾನ್ಯ ರೂಪಗಳಲ್ಲಿ ಇದೂ ಒಂದು.

*

ಅದು ತೋರಿಕೆಗೆ ಕಾಣುವದಕ್ಕಿಂತಲೂ ಉತ್ತಮವಾಗಿದೆ.

ಶ್ರೇಷ್ಠತೆಯೆಡೆಗೆ ಪಯಣಿಸುವ ಮಾರ್ಗದಲ್ಲಿ ಸ್ವಾಭಿಮಾನವು ಒಂದು ದೊಡ್ಡ ಅಡಚಣೆಯಾಗಿದೆ.

*

ಒಂದು ಕಾಲದಲ್ಲಿ ಸ್ವಾಭಿಮಾನವು ಬಹು ಸಹಾಯಕವಾದ ಅಂಶವಾಗಿತ್ತು. ನೀವು ಯಾವುದೋ ಒಂದು ಕೀಳು ಕಾರ್ಯವನ್ನು ಮಾಡುವ ಧಾವಂತದಲ್ಲಿದ್ದಾಗ ಈ ಸ್ವಾಭಿಮಾನವು ಮುಂದೆ ಬಂದು ಈ ಕಾರ್ಯವು ನಿಮ್ಮ ಘನತೆಗೆ ತಕ್ಕುದಲ್ಲ ಎಂದು ತಿಳಿಸುತ್ತ ನಿಮ್ಮನ್ನು ಅದರಿಂದ ದೂರದಲ್ಲಿರುವಂತೆ ನೋಡಿಕೊಂಡಿತ್ತು. ಆದರೆ, ಅದೇ ಸ್ವಾಭಿಮಾನವು ಈಗ ನಿಮ್ಮ ಮಾರ್ಗದಲ್ಲಿ ಬಹು ದೊಡ್ಡ ಅಡಚಣೆಯಾಗಿ ನಿಂತಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/259–60**

ಹೆದರಿಕೆ ಎಂಬುದು ಸ್ವಾಭಿಮಾನದ ಒಂದು ಗುಣ ಲಕ್ಷಣವಾಗಿದೆ. ನೀವು ಯಾವುದೋ ಒಂದು ಸಾಧನೆಯನ್ನು ಮಾಡ ಹೊರಟಿರುವಾಗ ನೀವು ಆ ಕಾರ್ಯದ ಮೇಲಿರುವ ನಿಮ್ಮ ಪ್ರಾಮಾಣಿಕತೆಗಿಂತಲೂ, ಇತರರು ನಿಮ್ಮ ಕುರಿತು ಯಾವ ಅಭಿಪ್ರಾಯವನ್ನು ಪಡುತ್ತಿದ್ದಾರೆ ಎಂಬುದರ ಮೇಲೆಯೇ ಅವಲಂಬನೆ–ಯಾಗಿರುತ್ತೀರಿ. ಇದು ನಿಮ್ಮ ಸಾಧನೆಯ ಮಾರ್ಗದಲ್ಲಿ ಅಡಚಣೆಯನ್ನುಂಟು ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/280**

ರೋಗ: ಮನಸ್ಸಿನಲ್ಲಿರುವ ಅಹಮಿಕೆ ಮತ್ತು ಕೀಳರಿಮೆಯ ಭಾವನೆಯು ಬರುಬರುತ್ತ ಪ್ರಬಲವಾದ ಸ್ವಾಭಿಮಾನವಾಗಿ ಬದಲಾಗುತ್ತದೆ. ಆ ಹಂತದಲ್ಲಿ ಅದು

ನಿಮ್ಮ ಮುಂದಿರುವ ಸಂಗತಿಗಳ ಬಗ್ಗೆ ನಿಮಗಿರುವ ಆಲೋಚನೆ ಮತ್ತು ಪ್ರತಿಕ್ರಿಯೆಗಳನ್ನು ವಿರೂಪಗೊಳಿಸುತ್ತವೆ.

ಪರಿಹಾರ: ನಿಮ್ಮ ಎಲ್ಲಾ ಭಾವನೆಗಳನ್ನು 'ಪ್ರಿಯ ಮಾತೆ'ಗೆ ಅರ್ಪಿಸಿ ಅವರಲ್ಲಿ ಶರಣಾಗತಿಯನ್ನು ಹೊಂದಿರಿ.

ನಿಮ್ಮ ಮೇಲೆ ನನ್ನ ಪ್ರೀತಿಯ ಆಶೀರ್ವಾದವಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/54**

ಹೆಮ್ಮೆ: ಇದು ನಿಮ್ಮ ಪ್ರಗತಿಯ ಪಥದಲ್ಲಿ ದೊಡ್ಡ ಅಡಚಣೆಯಾಗಿ ಪರಿಣಮಿಸುತ್ತದೆ.

ಅಹಮಿಕೆ ಮತ್ತು ಹೆಮ್ಮೆಯಿಂದ ಬರಬಹುದಾದ ಸೋಲು ಮತ್ತು ಅವಮಾನಗಳಿಂದ ಆತ್ಮಕ್ಕೆ ಯಾವ ಧಕ್ಕೆಯೂ ಇರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/259**

ಆ ದಿವ್ಯತೆಗೆ ಕೃತಜ್ಞತೆಯನ್ನು ಸಲ್ಲಿಸುವ ಸುಲಭ ಮಾರ್ಗವೆಂದರೆ, ನಮ್ಮಲ್ಲಿರುವ ಎಲ್ಲಾ ಅಹಮಿಕೆ ಭಾವನೆಗಳನ್ನು ಕಿತ್ತೆಸೆದು, ಪರಿವರ್ತನೆಯ ಮಾರ್ಗದೆಡೆ ನಡೆಯಲು ಪ್ರಯತ್ನಿಸುವುದು. ಇತರರು ಪರಿವರ್ತನೆಯ ಹಾದಿಯಲ್ಲಿ ನಡೆಯುತ್ತಿಲ್ಲವೆಂಬ ಕಾರಣಕ್ಕೆ ನಾವೂ ಅದನ್ನು ನಿರಾಕರಿಸುವುದು ಅಹಮಿಕೆಯನ್ನು ಇನ್ನಷ್ಟು ಬಲಗೊಳಿಸುತ್ತದೆ. ಆದರೆ, ಇದರಿಂದ ನಿಮ್ಮೊಳಗೆ ದುಷ್ಟತನದ ಭದ್ರಕೋಟೆಯು ನಿರ್ಮಾಣವಾಗುತ್ತಾ ಸಾಗುತ್ತದೆ. ಹಾಗಾಗಿಯೇ ಇತರರು ಪರಿವರ್ತನೆಯಲ್ಲಿ ತೊಡಗಲೀ ತೊಡಗದೇ ಇರಲಿ ತಾವು ಮಾತ್ರ ಪರಿವರ್ತನೆಯಾಗಬೇಕೆಂದು ಹೊರಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

'ಪರಿವರ್ತನೆಯೊಂದೇ ನಮ್ಮಲ್ಲಿರುವ ಅಹಮಿಕೆಯನ್ನು ನಿರ್ಮೂಲಿಸಿ, ಶಾಂತಿ–ಆನಂದವನ್ನು ತುಂಬುವ ಏಕೈಕ ಮಾರ್ಗವಾಗಿದೆ.' ಎಂಬ ಸತ್ಯವನ್ನು ಅರಿತ ಸಾಧಕರು ಪರಿವರ್ತನೆಗೆ ಬೇಕಿರುವ ಅಗತ್ಯವಾದ ಪ್ರಯತ್ನಗಳನ್ನು ಮಾಡುತ್ತಾರೆ. ಇದರಿಂದ ಅವರಲ್ಲಿ ಧೃಡ ವಿಶ್ವಾಸವು ಜಾಗೃತಗೊಳ್ಳುತ್ತದೆ.

ನಮ್ಮೆಲ್ಲರಲ್ಲೂ, "ಅಹಮಿಕೆಯನ್ನು ನಿರ್ಮೂಲನೆ ಮಾಡಿದರೆ ಮಾತ್ರ ಶಾಂತಿಯು ಬಂದು ನಮ್ಮೊಳಗೆ ನೆಲೆಸಿ ಆಳುತ್ತದೆ" ಎಂಬ ಸತ್ಯದ ಅನಾವರಣವಾಗಬೇಕಿದೆ.

ಆ ದಿವ್ಯತೆಯ ಸಹಾಯವು ಕೇವಲ ಪ್ರಾಮಾಣಿಕವಾದ ಅಭೀಪ್ಸೆಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/428**

## ಅಹಂ ಮತ್ತು ಅಹಮಿಕೆ

ಇನ್ನೊಂದೆಡೆ, ಅಹಮಿಕೆ ಎಂದರೇನು ಎಂಬುದು ಎಲ್ಲರಿಗೂ ತಿಳಿದಿದೆ. ನೀವು ಎಲ್ಲರನ್ನೂ ನಿಮ್ಮೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸಿದಾಗ, ಇತರರು ನಿಮ್ಮ ಕಡೆಗೆ ಗಮನ ಕೊಡದೇ ಕಡೆಗಣಿಸಿದಾಗ ನಿಮ್ಮೊಳಗೆ ಜಾಗೃತವಾಗುವ ಭಾವನೆಯೇ ಅಹಮಿಕೆಯಾಗಿದೆ; ನಿಮ್ಮನ್ನು ನೀವು ಈ ವಿಶ್ವದ ಕೇಂದ್ರವೆಂದರಿತು ಸರ್ವವೂ ನಿಮ್ಮೆಡೆಗೆ ಆಕರ್ಶಿತವಾಗಬೇಕೆಂದು ಬಯಸುವ ಭಾವನೆಯೇ ಅಹಮಿಕೆಯಾಗಿದೆ. ಆದರೆ, ನಾವು ಬೇರೊಬ್ಬರಲ್ಲಿರುವ ಅಹಮಿಕೆಯನ್ನು ನೋಡುವಾಗ ಅಂಧರಂತಿರಬೇಕು. ಇದುವೇ ಉತ್ತಮ. ಎಲ್ಲರಲ್ಲೂ ಈ ಅಹಮಿಕೆಯ ಭಾವವು ಜಾಗೃತವಾಗಿಯೇ ಇರುತ್ತದೆ. ಕೆಲವೊಬ್ಬರಲ್ಲಿ ಅದು ಕಡಿಮೆ ಪ್ರಮಾಣದಲ್ಲಿದ್ದರೆ, ಇನ್ನೊಬ್ಬರಲ್ಲಿ ಅದು ಹೆಚ್ಚಿನ ಪ್ರಮಾಣದಲ್ಲಿರಬಹುದು. ಆದರೆ, ಒಂದು ನಿರ್ಧಿಷ್ಟ ಮಟ್ಟದ ಅಹಮಿಕೆಯು ಸ್ವೀಕಾರಾರ್ಹವಾಗಿರುತ್ತದೆ. ಅದಕ್ಕೂ ಹೆಚ್ಚಿನ ಅಹಮಿಕೆಯು ಒಳ್ಳೆಯದಲ್ಲ. ಏಕೆಂದರೆ, ಹೆಚ್ಚಿನ ಅಹಮಿಕೆಯನ್ನು ಹೊಂದಿರುವ ವ್ಯಕ್ತಿಯು ಇನ್ನೊಬ್ಬರಿಂದ ಘಾಸಿಗೊಳಗಾಗುವ ಸಂಭವವಿರುತ್ತದೆ. ಏಕೆಂದರೆ, ವಿಶ್ವದಲ್ಲಿ ಎಲ್ಲರಲ್ಲೂ ಈ ಅಹಮಿಕೆಯ ಭಾವನೆಯು ಇದ್ದೇ ಇರುತ್ತದೆ. ಪ್ರತಿಯೋರ್ವರೂ ಇನ್ನೊಬ್ಬರಲ್ಲಿರುವ ಈ ಅಹಮಿಕೆಯನ್ನು ಎದುರಿಸಲು ಇಷ್ಟ ಪಡುವದಿಲ್ಲ.

ಈ ಅಹಮಿಕೆಯನ್ನು ಬಹು ಲಘುವಾಗಿ ನೋಡಬೇಕು. ಏಕೆಂದರೆ, ಇದು ಸಮಾಜದ ನೈತಿಕತೆಯ ಭಾಗವಾಗಿದೆ. ಹೌದು, ಪ್ರತಿಯೋರ್ವರು ಅಲ್ಪ ಪ್ರಮಾಣದ ಅಹಮಿಕೆಯನ್ನು ಹೊಂದಿದ್ದರೆ, ಅದು ಅಷ್ಟಾಗಿ ಎದ್ದು ಕಾಣುವದಿಲ್ಲ. ಇನ್ನೊಂದೆಡೆ, ಯಾರೂ ಸಹ ಈ ಅಹಮಿಕೆಯ ಕುರಿತು ಮುಕ್ತವಾಗಿ ಮಾತನಾಡುವದಿಲ್ಲ. ಏಕೆಂದರೆ, ಇನ್ನೊಬ್ಬರಲ್ಲಿರುವ ಅಹಮಿಕೆಯ ಪ್ರಮಾಣವನ್ನು ಗುರುತಿಸುವುದು ಕಷ್ಟವಾಗಿರುತ್ತದೆ. ಹಾಗೂ ನಮ್ಮೊಳಗೆ ಅಹಮಿಕೆಯು ಇರುವವರೆಗೂ ಆ ದಿವ್ಯ ಪ್ರಜ್ಞೆಯು ನಮ್ಮೊಳಗೆ ಇಳಿದುಬರಲು ಸಾಧ್ಯವಿಲ್ಲ.

ಅಹಮಿಕೆಯು ವ್ಯಕ್ತಿಯಲ್ಲಿ, 'ತಾನು ಸಮಾಜದ ಇತರ ಜನರಿಂದ ದೂರವಾಗಿದ್ದೇನೆ' ಎಂಬ ಭಾವನೆಯನ್ನು ಸೃಷ್ಟಿಸುತ್ತದೆ. ಅಹಮಿಕೆಯು

ಇಲ್ಲವಾದರೆ, ಇತರರಿಂದ ಬೇರಾಗಿರುವ ಪ್ರತ್ಯೇಕತಾ ಭಾವನೆಯೇ ಬರುವುದಿಲ್ಲ. ಅಹಮಿಕೆಯು ಅಳಿದುಹೋದ ನಂತರ ನಮ್ಮಲ್ಲಿ, 'ನಾನು ಈ ವಿಶಾಲವಾದ ವಿಶ್ವದ ಸಣ್ಣ ಕಣವಾಗಿದ್ದೇನೆ, ಅತಿ ಸಣ್ಣ ಕಣವಾಗಿದ್ದೇನೆ' ಎಂಬ ಸತ್ಯದ ಅರಿವಾಗುತ್ತದೆ. ಹಾಗೂ ಸಮಾಜದಲ್ಲಿ ಪ್ರತಿಯೋರ್ವರೂ ಒಬ್ಬರಿಗಿಂತ ಒಬ್ಬರು ಭಿನ್ನರು ಎಂಬ ಭಾವವು ಅಳಿಯುತ್ತದೆ. ಹಾಗಾಗಿ ಈ ರೀತಿಯ ಕೀಳು ಭಾವನೆಯನ್ನು ಹಟ್ಟುಹಾಕುತ್ತಿರುವ ಅಹಮಿಕೆಯನ್ನು ತ್ಯಜಿಸುವುದೇ ಉತ್ತಮ.

'ನನ್ನೊಳಗೆ ಎಲ್ಲರೂ ಇದ್ದಾರೆ, ಎಲ್ಲರೊಳಗೆ ನಾನಿದ್ದೇನೆ. ಎನ್ನುತ್ತ, ಸಾವಿರ ಜನರ ಮಧ್ಯೆ ತಾನೊಂದು ಸಣ್ಣ ಬಿಂದುವಾಗಿದ್ದೇನೆ!' ಎಂಬ ನುಡಿಯಂತೆ ನಡೆಯಲು ಆರಂಭಿಸಿದ ಕೂಡಲೆ ನಿಮ್ಮ ಮತ್ತು ಬೇರೆಯವರ ನಡುವಿನ ಪ್ರತ್ಯೇಕತೆಯು ಅಳಿದು ಹೋಗುತ್ತದೆ. ಈ ಪ್ರತ್ಯೇಕತಾ ಭಾವನೆಯು ನಾಶವಾಯಿತೆಂದರೆ, ನಿಮ್ಮೊಳಗಿನ ಅಹಮಿಕೆಯು ಅಳಿದುಹೋಗಿದೆ ಎಂದರ್ಥ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/240–41**

***ಅಹಮಿಕೆಯ ಹಸ್ತಕ್ಷೇಪದ ಕುರಿತು ನಾವು ಯಾವಾಗಲು ಎಚ್ಚರದಿಂದಿರಬೇಕು ಅಲ್ಲವೇ ಶ್ರೀಮಾತೇ?***

ಹೌದು, ಮಹಾತ್ವಾಕಾಂಕ್ಷೆಯು ಯಾವಾಗಲೂ ಅಡಚಣೆ ಮತ್ತು ಗೊಂದಲದ ಮೂಲವಾಗಿದೆ.

*

***ಮಾನಸದ ಮತ್ತು ಪ್ರಾಣದ ವಲಯದಿಂದಿಳಿವ ಅಜ್ಞಾನದ ಕ್ರಿಯೆಗಳಿಂದ ಹುಟ್ಟುವ ಮಹಾತ್ವಾಕಾಂಕ್ಷೆಯ ಭಾವನೆಗಳಿಂದ ಮುಕ್ತರಾಗಿ, ನಮ್ಮ ಜೀವನವನ್ನು ಆ ದಿವ್ಯ ಮಾತೆಯ ಇಚ್ಛೆಯ ಪ್ರಕಾರ ಕಾರ್ಯನಿರ್ವಹಿಸುವಂತೆ ಬಿಟ್ಟುಬಿಡಬೇಕು. ಆಗಮಾತ್ರ ನಮ್ಮ ಅಂತರಂಗ–ಬಹಿರಂಗಗಳೆರಡೂ ಶಾಂತಿ–ಆನಂದದಿಂದ ತುಂಬುತ್ತದೆ. ಇದುವೇ ಆ ಶ್ರೀಮಾತೆಗೆ ಕೃತಜ್ಞತೆಯನ್ನು ಸಲ್ಲಿಸುವ ಪ್ರಾಮಾಣಿಕವಾದ ಮಾರ್ಗವಾಗಿದೆ ಅಲ್ಲವೇ?***

ಹೌದು, ಅಹಮಿಕೆ ಮತ್ತು ಮಹಾತ್ವಾಕಾಂಕ್ಷೆಯಿಂದ ಮುಕ್ತವಾದ ಲೆಕ್ಕಾಚಾರರಹಿತವಾದ ಕ್ರಿಯೆಯಿಂದ ನಮ್ಮ ಅಂತರಂಗ–ಬಹಿರಂಗಗಳೆರಡೂ ಶಾಂತಿ–ಆನಂದದಿಂದ ತುಂಬುತ್ತವೆ.

ಎಲ್ಲಾ ಮಹಾತ್ವಾಕಾಂಕ್ಷೆಗಳ ಹಿಂದೆ ಋತವೊಂದು ಪ್ರಕಟಗೊಳ್ಳಲು ಕಾಯುತ್ತಿರುತ್ತದೆ. ಈಗ ಆ ಮಹಾತ್ವಾಕಾಂಕ್ಷೆಗಳೆಲ್ಲವೂ ಸರಿದುಹೋಗಿದ್ದು, ಋತವು ಪ್ರಕಟಗೊಳ್ಳುವ ಸಮಯವು ಸನ್ನಿಹಿತವಾಗಿದೆ.

ಯಾವುದರಿಂದಲೂ ಘಾಸಿಗೊಳ್ಳದಂತೆ ಕಾಳಜಿಯನ್ನು ವಹಿಸಿರಿ. ನಿಮಗೆ ಇಷ್ಟವಿರುವ ಕಾರ್ಯವನ್ನು ಮಾಡುವ ಮಾರ್ಗದಲ್ಲಿ ನಾನು ಸದಾ ನಿಮ್ಮ ಸಹಾಯಕ್ಕೆ ಇರುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/260 – ಶ್ರೀಮಾತೆ**

**ಮಹಾತ್ವಾಕಾಂಕ್ಷೆ**

ಈ ಮಹಾತ್ವಾಕಾಂಕ್ಷೆಯು ಅನೇಕ ಯೋಗಿಗಳ ನಾಶಕ್ಕೂ ಕಾರಣವಾಗಿದೆ. ಇದು ಬಹು ದಿನಗಳವರೆಗೆ ಗೊತ್ತಾಗದಂತೆ ನಮ್ಮೊಳಗೆ ಅಡಗಿಕೊಂಡಿರುವ ಹುಣ್ಣಿನಂತಿರುತ್ತದೆ. ಹಲವರು ಅದರ ಅಸ್ತಿತ್ವವನ್ನು ಅರಿಯದೇ ಅರ್ಥರಹಿತವಾದ ಮಾರ್ಗದಲ್ಲಿ ಮುನ್ನಡೆಯುತ್ತಾರೆ. ಒಮ್ಮೊಮ್ಮೆ ಆ ಹಾದಿಯಲ್ಲಿ ಅವರು ಸಿದ್ಧಿಗಳನ್ನೂ ಪಡೆಯುತ್ತಾರೆ. ಆಗ ಅವರಲ್ಲಿ ಮಹಾತ್ವಾಕಾಂಕ್ಷೆಯ ಲಾಲಸೆ ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ, ಸಾಧನೆಯ ಆರಂಭದಲ್ಲಿ ಅವರು ಅದರಿಂದ ಮುಕ್ತವಾಗಿರುವದಿಲ್ಲ.

ಈ ಮಾರ್ಗದಲ್ಲಿ ಅದ್ಭುತ ಶಕ್ತಿಗಳನ್ನು ಬಳಸಿಕೊಂಡು ತನ್ನ ಸ್ವಾರ್ಥಕ್ಕಾಗಿ ಆ ಸಿದ್ಧಿಗಳನ್ನು ಕಳೆದುಕೊಂಡ ಓರ್ವ ಯೋಗಿಯ ಕಥೆಯನ್ನು ಹೇಳಲಾಗುತ್ತದೆ: ಒಮ್ಮೆ ಆ ಯೋಗಿಯ ಶಿಷ್ಯರು ಅವನನ್ನು ಭೋಜನಕ್ಕೆಂದು ಆಹ್ವಾನಿಸಿದರು. ಮತ್ತು ಅವನನ್ನು ಉನ್ನತ ಪೀಠದ ಮೇಲೆ ಕೂರಿಸಿ ಅವನ ಮುಂದಿನ ಮೇಜಿನ ಮೇಲೆ ತರತರದ ಭಕ್ಷ್ಯಗಳನ್ನು ಇರಿಸಿದ್ದರು. ಹಾಗೂ ಭೋಜನಕ್ಕೂ ಮುನ್ನ ಶಿಷ್ಯರು ಆ ಗುರುವಿಗೆ ಅವರ ಪವಾಡವನ್ನು ತೋರಿಸುವಂತೆ ಕೇಳಿಕೊಂಡರು. ಆದರೆ, ಗುರುವಿಗೆ ವಿನಾ ಕಾರಣ ಶಕ್ತಿಯನ್ನು ವ್ಯಯಗೊಳಿಸಬಾರದು ಎಂಬ ಸತ್ಯದ ಅರಿವಿದ್ದರೂ, ಮಹಾತ್ವಾಕಾಂಕ್ಷೆಯ ಬಲೆಗೆ ಸಿಲುಕಿಕೊಂಡಿದ್ದ ಅವನು, ತನ್ನ ಶಿಷ್ಯರಿಗೆ ಈ ಮೇಜನ್ನು ಅಲ್ಲಿಂದ ತೆಗೆಯಲು ತಿಳಿಸಿದನು. ಆದರೆ ಮೇಜನ್ನು ಮಾತ್ರ ಸರಿಸಬೇಕು, ಅದರ ಮೇಲಿನ ಬಟ್ಟೆ ಮತ್ತು ಭೋಜನದ ಪಾತ್ರೆಗಳನ್ನು ಹಾಗೆ ಇರಿಸಬೇಕು ಎಂದು ಹೇಳಿದನು. ಆದರೆ, ಮೇಜನ್ನು ಸರಿಸಿದ ಕೂಡಲೇ ಆ

ಭಕ್ಷ್ಯಗಳು ಬಿದ್ದುಹೋಗುವದನ್ನು ಅರಿತಿದ್ದ ಶಿಷ್ಯರು ಅದು ಸಾಧ್ಯವಿಲ್ಲವೆಂದು ತಿಳಿಸಿದರು. ಅದಕ್ಕೆ ಗುರುವು ತಾನು ತನ್ನ ಶಕ್ತಿಯಿಂದ ಆ ಮೇಜಿನ ಬಟ್ಟೆಯ ಸಮೇತ ಆಹಾರ ಪಾತ್ರೆಗಳನ್ನು ಅಂತರದಲ್ಲಿಯೇ ನಿಲ್ಲಿಸುವದಾಗಿ ಹೇಳಿ ಆ ಮೇಜನ್ನು ತೆಗೆಸಿದನು. ಆಶ್ಚರ್ಯವೆಂಬಂತೆ ಗುರು ಹೇಳಿದಂತೆ ಮೇಜನ್ನು ತೆಗೆದರೂ ಮೇಜಿನ ವಸ್ತ್ರದ ಮೇಲಿದ್ದ ಪಾತ್ರೆಗಳು ಮೊದಲು ಹೇಗಿದ್ದವೋ ಹಾಗೆಯೇ ಗಾಳಿಯಲ್ಲಿ ತೇಲುತ್ತ ಸ್ಥಿರವಾಗಿ ನಿಂತಿದ್ದವು. ಆದರೆ, ಕೆಲ ಸಮಯದ ನಂತರ ಗುರುವಿಗೆ ತನ್ನ ಶಕ್ತಿ ವ್ಯಯವಾದ ಸತ್ಯದ ಅರಿವಾಗಿರಲು ಅವನು ಅಳುತ್ತಾ ಚೀರುತ್ತಾ ಅಲ್ಲಿಯಿಂದ ಓಡಿಹೋದನು. ಹೀಗೆ ತನ್ನ ಸ್ವಾರ್ಥಕ್ಕಾಗಿ ಆತ ತನ್ನ ಸಿದ್ಧಿಗಳನ್ನು ಕಳೆದುಕೊಂಡಿದ್ದ.

ಸಿದ್ಧಿಗಳನ್ನು ಹೀಗೆ ವ್ಯರ್ಥವಾಗಿ ಬಳಸುವುದು ತಪ್ಪು. ಹಾಗೆಂದು ಅವುಗಳನ್ನು ಬಳಸಲೇಬಾರದು ಎಂದರ್ಥವಲ್ಲ. ಆದರೆ, ಅವುಗಳನ್ನು ಸಿದ್ಧಿಸಿಕೊಂಡ ಮೂಲದ ರೂಪದಲ್ಲಿಯೇ ಬಳಸಬೇಕು. ಉದಾಹರಣೆಗೆ ಈ ಶಕ್ತಿಗಳೆಲ್ಲವೂ ದಿವ್ಯತೆಯ ಮೂಲದಿಂದಲೇ ಬಂದಿದ್ದು, ಅದನ್ನು ದಿವ್ಯತೆಯ ಇಚ್ಚೆಯ ಮೂಲಕವೇ ಬಳಸಬೇಕು. ಹೇಗೆಂದರೆ, ನಿಮ್ಮಲ್ಲಿ ಓರ್ವ ಅಂಧನಿಗೆ ದೃಷ್ಟಿ ಬರಿಸುವ ಶಕ್ತಿಯಿದ್ದಲ್ಲಿ, ನೀವು ಕುರುಡಾಗಿರುವ ವ್ಯಕ್ತಿಯೋರ್ವ ದಿವ್ಯತೆಯನ್ನು ಕಾಣಬೇಕೆಂಬ ಅಭೀಪ್ಸೆಯನ್ನುಳ್ಳವನಾಗಿದ್ದರೆ, ಅವನಿಗೆ ದೃಷ್ಟಿಯನ್ನು ದಯಪಾಲಿಸಬೇಕು. ಅದನ್ನು ಬಿಟ್ಟು ಕೇವಲ ನಿಮ್ಮ ಪವಾಡವನ್ನು ಪ್ರಚುರಪಡಿಸಲು ಯಾರೋ ಒಬ್ಬರಿಗೆ ಕಣ್ಣು ಬರಿಸಬಾರದು. ಇದರಿಂದ ನೀವು ನಿಮ್ಮ ಶಕ್ತಿಯನ್ನು ಕಳೆದುಕೊಳ್ಳುವದರ ಜೊತೆಗೆ ಜನಾಂಗದಲ್ಲಿ ಒಂದು ರೀತಿಯ ಗೊಂದಲವನ್ನು ಸೃಷ್ಟಿಸುತ್ತೀರಿ. ಮೇಲ್ನೋಟಕ್ಕೆ ಎರಡೂ ಪ್ರಮೇಯಗಳು ಒಂದೇ ರೀತಿಯಾಗಿ ತೋರಿಬಂದರೂ, ಒಂದು ಸಂದರ್ಭವು ದಿವ್ಯತೆಯ ಇಚ್ಛೆಯಿಂದ ನಡೆದರೆ, ಇನ್ನೊಂದು ನಿಮ್ಮ ಸ್ವಾರ್ಥದಿಂದ ಜರುಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/7–8** **– ಶ್ರೀಮಾತೆ**

## ಅಸೂಯೆ

### ಶ್ರೀಮಾತೆಯವರಿಂದ ಮಾರ್ಗದರ್ಶನ

ಅಸೂಯೆಗೆ ಯಾವುದೇ ಕಾರಣಗಳು ಬೇಕಿಲ್ಲ. ಅದು ಯಾವಾಗ ಬೇಕಾದರೂ ಉದಿಸಬಹುದು. ಅದು ಕೀಳು ಮತ್ತು ಅಜ್ಞಾನದಿಂದ ಕೂಡಿದ ಭಾವನೆಯಾಗಿದೆ.

*

ಅಸೂಯೆಯು ಮನಸ್ಸಿನ ಸಂಕುಚಿತತೆ ಮತ್ತು ಹೃದಯದ ದೌರ್ಬಲ್ಯದಿಂದ ಉದಿಸುತ್ತದೆ. ಅನೇಕರು ಇದರಡಿಯಲ್ಲಿ ಸಿಲುಕಿ ದಾಳಿಗೊಳಗಾಗುತ್ತಾರೆ ಎಂಬುದೇ ವಿಷಾಧನೀಯ. ಈ ಅಸೂಯೆಯ ಭಾವನೆಯಿಂದ ಬಳಲುತ್ತಿರುವವರು ಅಪಪ್ರಚಾರದಂತಹ ದುರ್ಬಲ ಮತ್ತು ಸಂಕುಚಿತ ಕಾರ್ಯಗಳಲ್ಲಿ ತೊಡಗುತ್ತಾರೆ.

ಅಸೂಯೆಯಿಂದ ಕೂಡಿರುವವರು ಕೋಪಕ್ಕಿಂತ ಕರುಣೆಗೆ ಅರ್ಹರಾಗಿದ್ದಾರೆ. ಅವರ ಕುರಿತು ನಾವು ಅಸಡ್ಡೆ ಹೊಂದಬೇಕು. ಅವರಿಗಿಂತ ನಾವು ದೃಢ ಮನಸ್ಕರಾಗಿದ್ದೇವೆಂಬುದನ್ನರಿತು ಆನಂದದಿಂದಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/261 – ಶ್ರೀಮಾತೆ**

ನೀವು ಪತ್ರದ ಒಂದು ಭಾಗದಲ್ಲಿ, ಶ್ರೀಮಾತೆಯು ನಿಮಗೆ ‘ನಿಜವಾದ ಪ್ರೇಮದಲ್ಲಿ ಅಸೂಯೆಯು ಅನಿವಾರ್ಯವಾಗಿದೆ.’ (ಸಾಮಾನ್ಯ ಬದುಕಿನಲ್ಲಿ) ಎಂದು ತಿಳಿಸಿದ್ದಾರೆ ಎಂದು ಹೇಳಿದ್ದೀರಿ. ಮತ್ತು ಪ್ರೇಮಿಯೋರ್ವನು ತಾನು ಪ್ರೇಮಿಸಿದವರು ಬೇರೆ ಇನ್ನಾರನ್ನೋ ಪ್ರೇಮಿಸುತ್ತಿದ್ದಾರೆ ಎಂಬುದನ್ನು ಕಂಡಕೂಡಲೇ ಅವರಿಬ್ಬರಲ್ಲೂ ಮೊದಲಿನಿಂದಲೇ ಪ್ರೇಮವಿದ್ದಿರಲಿಲ್ಲ ಎಂಬುದೇ ಸತ್ಯ ಎಂದು ತಿಳಿಸಿದ್ದಾರೆ ಎಂಬುದನ್ನೂ ಹೇಳಿದ್ದೀರಿ. ಇದರರ್ಥ ನೀವು ಶ್ರೀಮಾತೆಯನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ, ಮತ್ತು ಅವರ ನುಡಿಗಳನ್ನು ಸರಿಯಾಗಿ ಕೇಳಿಸಿಕೊಂಡಿಲ್ಲ ಎಂದರ್ಥ. ನೀವು ಹೇಳುತ್ತಿರುವುದು ಶ್ರೀಮಾತೆಯ ನುಡಿಗಳಿಗೆ, ಅವರ ವಿಚಾರಗಳಿಗೆ, ಅವರಲ್ಲಿನ ಜ್ಞಾನ ಮತ್ತು ಅವರು ಪಡೆದ ಅನುಭವಕ್ಕೆ ಸಂಪೂರ್ಣ ವ್ಯತಿರಿಕ್ತವಾದ ಸಂಗತಿಯೇ ಆಗಿದೆ. ನೀವು ಹೇಳುತ್ತಿರುವುದು ಪ್ರೇಮ ಮತ್ತು ಅಸೂಯೆಯ ವಿಚಾರದಲ್ಲಿ ಸಾಮಾನ್ಯರು ಅರಿತುಕೊಂಡ ವಿಚಾರವಾಗಿದೆಯೇ ಹೊರತು, ಇದು ಶ್ರೀಮಾತೆಯ ವಿಚಾರವಲ್ಲ. ಆದರೂ ಸಾಮಾನ್ಯ ಜೀವನದಲ್ಲೂ ಸಹ ನಿಜವಾದ ಪ್ರೇಮದಲ್ಲಿ ಅಸೂಯೆಯು ತಲೆದೂರದು ಎಂದು ಅವರು ತಿಳಿಸಿದ ನುಡಿಯನ್ನು ನೀವು ತಪ್ಪಾಗಿ ಅರ್ಥೈಸಿಕೊಂಡಿದ್ದೀರಿ. ಅಸೂಯೆಯೆಂಬುದು ಮಾನವನ ಪ್ರಾಣಮಯಕ್ಕೂ ಕೆಳಹಂತದಲ್ಲಿರುವ ವಲಯದಿಂದ ಬಂದ ಕೀಳು ಭಾವನೆಯಾಗಿದೆ. ಅದು ತಾನು ನೆಲೆಸಿರುವ ವ್ಯಕ್ತಿಯ ಮೇಲೆ ಪ್ರಭುತ್ವವನ್ನು ಸಾಧಿಸಲು ಪ್ರಯತ್ನಿಸುತ್ತಿ–ರುತ್ತದೆ. ಹಾಗೂ ಪ್ರಾಣಮಯದಿಂದ ಬಂದ ಅದು ಅವನ ಆತ್ಮವನ್ನೂ ಸೂರೆಗೈಯಲು ನೋಡುತ್ತದೆ. ಅದು ಅಹಮಿಕೆಯ ಬಿತ್ತಿದ ಬೀಜದ ಫಲವೇ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/384 – ಶ್ರೀ ಅರವಿಂದರು**

# ಶ್ರೀ ಅರವಿಂದೋಪನಿಷತ್ತು

**– ಅನು: ಪುಟ್ಟು ಕುಲಕರ್ಣಿ**

ಮೂಲಪಾಠ

**ಓಂ। ಏಕಮೇವಾದ್ವಿತೀಯಂ ಬ್ರಹ್ಮ ಸದಸದ್ರೂಪಂ ಸದಸದತೀತಂ ನಾನ್ಯತ್ ಕಿಞ್ಚಿದಸ್ತಿ ತ್ರಿಕಾಲಧೃತಂ ತ್ರಿಕಾಲಾತೀತಂ ವಾ ಸರ್ವಂತು ಖಲು ಬ್ರಹ್ಮೈಕಂ ಯತ್ಕಿಞ್ಚ ಜಗತ್ಯಾಮಣು ವಾ**
**ಮಹದೋದ್ದಾರಂ ವಾಣುದಾರಂ ವಾ ಬ್ರಹ್ಮೈವ ತದ್ ಬ್ರಹ್ಮೈವ ಜಗದಪಿ ಬ್ರಹ್ಮ ಸತ್ಯಂ ನ ಮಿಥ್ಯಾ।**

**ಅನ್ವಯ; ಓಂ। ಏಕಮ್ ಏವ ಅದ್ವಿತೀಯಂ ಬ್ರಹ್ಮ। ಸತ್–ಅಸತ್–ರೂಪಮ್– ಸತ್–ಅಸತ್–ಅತೀತಮ್। [ತದ್ ವಿಹಾಯ] ಅನ್ಯತ್ ಕಿಞ್ಚಿತ್ ನ ಅಸ್ತಿ। ತ್ರಿಕಾಲ –ಧೃತಂ ತಿಕಾಲ–ಅತೀತಂ ವಾ ಸರ ತು ಖಲು ಏಕಂ ಬ್ರಹ್ಮ। ಜಗತ್ಯಾಂ ಯತ್ ಕಿಞ್ಚ ಅಭು ವ ಮಹತ್ ವ, ಉದಾರ ವಾ ಅನುದಾರ ವಾ, ತತ್ ಬ್ರಹ್ಮ ಏವ, ಬ್ರಹ್ಮ ಏವ। ಜಗತ್ ಅಪಿ ಬ್ರಹ್ಮ। [ತತ್] ಸತ್ಯಮ್ ನ ಮಿಥ್ಯಾ।**

ಅಸ್ಥಿತ್ವದಲ್ಲಿರುವದೆಲ್ಲವೂ ಏಕಂ ಆಗಿದ್ದು ಅದ್ವಿತೀಯವೂ ಆಗಿದೆ, ಇದೇ ಬ್ರಹ್ಮವಾಗಿದೆ. ತತ್ (ಇದೇ) ಸತ್ ಮತ್ತು ಅಸತ್ ರೂಪದಲ್ಲಿದೆ. ಸತ್–ಅಸತ್ ಅತೀತವೂ ಆಗಿದೆ. ಹೀಗಿರುವದರಿಂದ ಇದನ್ನು ಬಿಟ್ಟು ಅನ್ಯಥಾ ಏನೂ ಇಲ್ಲ. ತ್ರಿಕಾಲ–ಧೃತಂ ಎನ್ನುವದು ತ್ರಿಕಾಲಾತೀತವಾಗಿದೆ ಇದೆಲ್ಲವೂ ಬ್ರಹ್ಮವೇ ಆಗಿದೆ. ಇನ್ನು ಜಗತ್ತು ಎನ್ನುವದು ಅದು ಅಣು ಪ್ರಮಾಣದಲ್ಲಿಯೇ ಇರಲಿ ಅಥವಾ ಮಹತ್ ಸ್ವರೂಪದ್ದೇ ಆಗಿರಲಿ, ಉದಾರತೆಯಿಂದ ಸ್ಪಂದಿಸಲಿ ಅಥವಾ ಅನುದಾರತೆಯಿಂದ ಕೂಡಿರಲಿ, ಅದೆಲ್ಲವೂ ಬ್ರಹ್ಮವೇ ಆಗಿದೆ. ಇದೇ ಬ್ರಹ್ಮ. ಈ ಜಗತ್ (ಬ್ರಹ್ಮಾಂಡ) ಎನ್ನುವದೂ ಬ್ರಹ್ಮವೇ ಆಗಿದೆ. ಹೀಗಾಗಿ (ತತ್) ಸತ್ಯವೇ ಆಗಿದ್ದು ಮಿಥ್ಯವಾಗಿರುವದಿಲ್ಲ.

ಇಲ್ಲಿ ನಿರ್ಗುಣ ಬ್ರಹ್ಮನನ್ನೇ ಆಗಲಿ ಅಥವಾ ಸಗುಣ ಬ್ರಹ್ಮನನ್ನೇ ಅಗಲಿ ಉದ್ದೇಶಿಸುವಾಗ 'ನೀನು' ಎಂದು ಹೇಳಲಾಗುವದಿಲ್ಲ. ಅದಕ್ಕೆ 'ತತ್' ಎಂದು ಅಭಿವ್ಯಕ್ತಿಸಲಾಗುತ್ತದೆ.

ಅಸ್ತಿತ್ವದಲ್ಲಿರುವ ಸರ್ವಸ್ವವೂ ತ್ರಿಕಾಲಾತೀತವಾಗಿವೆ; ಸಕಲವೂ ಭುವನಾತೀತವೂ ಆಗಿದೆ; ಸಕಲವೂ ಭುವನದ ಸ್ವರೂಪದಲ್ಲಿಯೇ ಅಸ್ತಿತ್ವ ಪಡೆದಿದೆ; ಸತ್ ಎನ್ನುವದು ಅಸ್ತಿತ್ವದಲ್ಲಿದ್ದು, ಅಸತ್ ಎನ್ನುವದು ಅತೀತವವಾಗಿದೆ. ಎಲ್ಲವೂ ಸತ್–ಮಯವೇ ಅಗಿದೆ; ಚಿತ್–ಮಯ (ಚಿನ್ಮಯವೂ) ಆಗಿದೆ; ಆನಂದಮಯವಾಗಿದೆ; ಇದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ತತ್ ಎನ್ನುವದೇ ಪರಾತ್ಪರ ಪುರುಷನಾಗಿದ್ದಾನೆ. ಸನಾತನವೂ ಆಗಿದ್ದಾನೆ. ಭಗವಂತನಾಗಿದ್ದಾನೆ.

ಇನ್ನು ಋಗ್ವೇದದ 10ನೇ ಮಂಡಲದ 129 ಸೂಕ್ತದಲ್ಲಿರುವ **'ನಾಸದೀಯ ಸೂತ್ರ'**ವೂ ಸಹಿತ 'ನಾ ಸತ್ ನಾ ಅಸತ್' ಎಂದೇ ಬ್ರಹ್ಮಾಂಡದ ವಿವರಣೆಯನ್ನು ಕಾಲಾತೀತವಾಗಿರುವ ಸಗುಣ–ನಿರ್ಗುಣ ಬ್ರಹ್ಮತ್ವವನ್ನು ಆರೋಪಿಸಿ ಅಭಿವ್ಯಕ್ತಿಸುತ್ತದೆ. ನಾಸದೀಯ ಸೂಕ್ತವನ್ನು **'ಸೃಷ್ಟಿಯ ಸೂಕ್ತ'**ವೆಂದೂ ಕರೆಯಲಾಗುತ್ತಿದೆ. ಆದರೆ ಶ್ರೀ ಅರವಿಂದರ ಈ ಉಪನಿಷತ್ತು, ನಾಸದೀಯ ಸೂಕ್ತದ ವಿಕಾಸದ ಹಂತವನ್ನು ವಿವರಿಸುತ್ತ, ಅದರ ಪಥವನ್ನು ನಿಗದಿಗೊಳಿಸುತ್ತದೆ. ನಿರಾಕಾರವಾಗಿರುವ ಮಹಾಶಕ್ತಿಯು, ನಿಯತಿಯ ಅನುಗುಣವಾಗಿ ವಿಕಾಸದ ಹಂತದಲ್ಲಿ ಇರಲೇಬೇಕಾಗುತ್ತದೆ. ಹೀಗಾಗಿ ವಿಕಾಸದ ಹಂತದಲ್ಲಿ ಲಭ್ಯಗೊಳ್ಳುತ್ತಿರುವ 'ರೂಪಗಳೂ' ಸತ್ಯವಾಗಿರುತ್ತವೆ. ಆ ರೂಪಗಳೆಲ್ಲವೂ ಪರಬ್ರಹ್ಮನ ಅಂಶವೇ ಆಗಿರುವದರಿಂದ, ಆ ರೂಪದಲ್ಲಿಯೂ ಸಹಿತ ಬ್ರಹ್ಮತ್ವ ಅಂಶವು ಅಣು ಸ್ವರೂಪದಲ್ಲಿ ಅಂತಃಚೇತನವಾಗಿ ಸ್ಥಿತವಿರುವದರಿಂದ, ಆ ರೂಪವೂ ಸಹಿತ ಬ್ರಹ್ಮನೇ ಆಗುವದರಿಂದ, ಅದು 'ಸತ್ಯ'ವಾಗಿದೆ. ಅದನ್ನು 'ಮಿಥ್ಯೆ' ಎನ್ನಲು ಸಾಧ್ಯವಾಗುವದಿಲ್ಲ. 'ನಾಸದೀಯ ಸೂಕ್ತ'ವು 'ಬ್ರಹ್ಮಾಂಡ ರಚನೆ'ಯ ಕುರಿತು ಹೇಳುತ್ತಿದೆ. ಇದನ್ನೇ ಆಧುನಿಕ 'ಕಾಸ್ಮಾಲಾಜಿ'ಯೂ ಅಧ್ಯಯನ ಮಾಡುತ್ತಿದೆ. ಅನಂತಾನಂತವಾಗಿರುವ ಅವಕಾಶದ ಸುವ್ಯಾಪ್ತಿಯಲ್ಲಿ ಸ್ಥಿತವಿರುವ ಕೋಟ್ಯಾಂತರ ನೀಹಾರಿಕೆಗಳು, ಅವುಗಳ ಸದಸ್ಯರಾಗಿರುವ ತಾರೆಗಳು–ಗ್ರಹಗಳು–ಉಪಗ್ರಹಗಳೆಲ್ಲವೂ ಈ ಬ್ರಹ್ಮನನ್ನೇ ಸಂಕೇತಿಸುತ್ತಿದ್ದು, ಇವೆಲ್ಲವೂ ಸತ್ಯ ಸ್ವರೂಪದಲ್ಲಿಯೇ ದರ್ಶನಕ್ಕೆ ಲಭ್ಯಗೊಳ್ಳುತ್ತಿವೆ. ಇದನ್ನು ಆಧುನಿಕವಾಗಿ 'ಸೃಷ್ಟಿ ತತ್ತ್ವ' ಅಥವಾ 'ವಿಶ್ವೋತ್ಪತ್ತಿವಾದ' (ಕಾಸ್ಮೊಗೊನಿ) ಎಂದು ಅಧ್ಯಯನ ಪರಂಪರೆ ಅನುಷ್ಠಾನಗೊಂಡಿದೆ.

ಪಂಚ ಭೂತಗಳೂ ಅವಿರ್ಭವಿಸುವ ಮುನ್ನ ಇದ್ದ ನಿರಕಾರತ್ವವು 'ಅಸತ್' ಸ್ವರೂಪದಲ್ಲಿದ್ದು, ಪಂಚ ಭೂತಗಳ ಸಮ್ಮಿಲನದಿಂದ ಲಭ್ಯಗೊಳ್ಳುವ ರೂಹು

ಅದಕ್ಕೊಂದು 'ರೂಪ'ವನ್ನು ಒದಗಿಸುತ್ತದೆ. ಈ ರೂಪವೇ ಬ್ರಹ್ಮನ 'ಸಗುಣ ಸ್ವರೂಪ'ವಾಗಿರುವದರಿಂದ, ಇದೂ ಸಹಿತ 'ಸತ್ಯ'ವೇ ಆಗಿದೆ.

ವಿಕಾಸಗೊಳ್ಳುತ್ತಿರುವ ಮಾನವನ **'ಚೇತನವು' (ಕಾನಸಿಯಸ್‌ನೆಸ್)** 'ಬ್ರಹ್ಮ ಸತ್ಯ ಜಗನ್ಮಿಥ್ಯಾ' ಹಂತದಿಂದ ಆರೋಹಣಗೊಂಡು, ಉತ್ತರೋತ್ತರದಲ್ಲಿ – ಪರಕಾಶದಲ್ಲಿಯೂ ಸಹಿತ – ಇದೇ ರೀತಿಯ ಬ್ರಹ್ಮಾಂಡದ ಸಂರಚನೆ ಮತ್ತು ಸ್ವರೂಪಗಳು ಸ್ಥಿತಗೊಂಡಿರುವದನ್ನು ದೃಷ್ಟಿಸಿದ, ಮಾನವನ ಪ್ರಜ್ಞೆಯು, ಈ ಸತ್ – ಮತ್ತು ಅಸತ್‌ಗಳ ಮಧ್ಯೆ ಇರುವ 'ಗೂಢ'ವನ್ನು ಅರಿತುಕೊಳ್ಳಲು ಯಶಸ್ವಿಯಾಗತೊಡಗಿದಾಗ, ಸತ್ ಎನ್ನುವದು ಸತ್ಯವೇ ಆಗಿದೆ. ಆದರೆ ಅದು ಮಿಥ್ಯವಲ್ಲ ಎನ್ನುವದನ್ನು ದೃಷ್ಟಾಂತಗಳ ಮೂಲಕ ಸ್ಪಂದಗೊಂಡು, ಅದನ್ನು ಅಭಿವ್ಯಕ್ತಿಸಲು ತೊಡಗಿತು. ಶ್ರೀ ಅರವಿಂದರ ಸಮಕಾಲೀನರಾಗಿರುವ **ಮಹರ್ಷಿ ದೈವರಾತ**ರಿಗೂ 'ಈ ವಿಶ್ವ ಸತ್ಯವು – ಬ್ರಹ್ಮವು – ವೇದದ ಸ್ವರೂಪದಲ್ಲಿಯೇ ದೃಷ್ಟಗೊಂಡು, ಅದು **'ಮಂತ್ರ ಸ್ವರೂಪದಲ್ಲಿ' 'ಛಂದೋ ದರ್ಶನ'**ವೆಂದು ಆದರಿಸಲ್ಪಡುತ್ತಿದೆ.

ಶ್ರೀ ಅರವಿಂದರ 'ಸಾವಿತ್ರಿ'ಯು ಈ ಉಪನಿಷತ್ತಿನ ವಿಸ್ತೃತ ರೂಪವನ್ನು ತೋರಿಸುತ್ತಿದೆ. ಪ್ರಪ್ರಥಮ ಸಾಲಿನಲ್ಲಿಯೇ 'ದೇವ ಕಣವೆಲ್ಲ ಕಣ್ಣೊಡೆವ ಮುನ್ನ ಮೊದಲೊಂದು ಘಳಿಗೆಯಲ್ಲಿ' ಎಂದೇ ಆರಂಭಗೊಳ್ಳುವ ಈ ಮಹಾಕಾವ್ಯವು 'ಸೃಷ್ಟಿಯ ರಚನೆಯಾಗುವದಕ್ಕಿಂತ ಕೆಲವೇ ಕೆಲವು ಘಳಿಗೆಗಳಲ್ಲಿ ಇದ್ದ, ಬ್ರಹ್ಮಾಂಡದ ಸ್ಥಿತಿಯಿಂದಲೇ ಅಭಿವ್ಯಕ್ತಗೊಳ್ಳುತ್ತದೆ. ನಿರಾಕಾರವಾಗಿದ್ದುದು (ಸತ್ ಮತ್ತು ಅಸತ್ ಆಗಿದ್ದುದು) ಹೇಗೆ 'ಸತ್' ಸ್ವರೂಪದಲ್ಲಿ– ಅಗ್ನಿ, ಅನಿಲ, ಅಂಬರ, ಅಂಬುಧಿ ಮತ್ತು ಅವನಿ (ಭೂಮಿ) – ಸ್ವರೂಪವನ್ನು ಪಡೆದುಕೊಂಡು ವಿಕಾಸದ ಶ್ರೇಣಿಗೆ ಕಾರಣವಾಯಿತು ಎನ್ನುವದನ್ನು ಅಭಿವ್ಯಕ್ತಿಸುತ್ತದೆ.

(ಸಶೇಷ)

## ಶ್ರೀ ಅರವಿಂದರ
## ‘ಉರ್ವಶಿ’

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

### ಅಧ್ಯಾಯ 1

### 2

ಕಾಳಮೇಘದ ಮೇಲೆ ಕಾಳೋರಗದ ಓಘವು ಕಾಲೂರಿ ಕುಳಿತಿರುವ ಕಾಲದಲಿ
ರಾಹುಗ್ರಸ್ತ ರವಿಯಂತೆ ರಜನಿಯು ಕವಿದು, ಲೋಕದ ಮೇಲೊಂದು
ಗುಡ್ಡಗಾಡುಗಳ ಗೋಪುರವು ಕಟ್ಟಿ
ಅಂಬೆಗಾಲಿಕ್ಕುತ ಬಂದ ಅಂಬುದಗಳ ದಂಡು ಅಂಬರಾಂಬರವನೆಲ್ಲ ಅಂಧಕಾರದ
ಅಂಗೈಯೊಳಗಿರಿಸಿರಲು
ಮೇಘಮಂಡಲದೊಳಗಿಂದ ಸೆಳೆಮಿಂಚಾಡುತ ಬಂದೊಂದು ಕೋಲ್ಮಿಂಚು
ಇಂದ್ರಾಯುಧವಾಗಿ, ಪರ್ಜನ್ಯಾಸ್ತ್ರವಾಗಿ ಮಿನುಗಿ, ಮಿಂಚುಗೊಂಚಲಿನ
ಮಳೆಯಿಳಿಸಿ,
ಮಲಯಮಾರುತರ ಮನೆಯಂಗಳದಿ ಮಂದಹಾಸವನೇ ಮೆರೆಸಿ
ದಿಗಂತವೆಲ್ಲ ದಿಟ್ಟಿಗೋಚರವಾಗಿರಲು,
ಆಗಸದಿ ಅಳಿದುಳಿದ ಅಂಬುದಾಲಯಗಳ ಮೇಲೆ ಮೂಡುವ ಮಾನಿನಿಯೇ?
ಇಲ್ಲ, ಕಿರಣಾಕರನವ ಕಾದರಥಚಕ್ರಗಳ ಹಾಲ್ಗಡಲದೊಳಗಿಳಿಸಿ,
ಹರ್ಯಶ್ವಗಳ ಹೆಗಲಿಳಿಸಿ,
ಹಸಿವಿಂಗಿಸಿ, ಹೊನ್ನಲೋಕದ ಹರ್ಮ್ಯದ ಹಿತ್ತಲಿನ ಕೊಟ್ಟಿಗೆಯೊಳಗವನು ಕಟ್ಟಿ
ಕಾಲ್ಚಾಚಲೆಂದು ಕ್ಷಿತಿಜಕಿಳಿದಿರಲು,
ಮೂರುಸಂಜೆಯ ಮಬ್ಬಿನೊಳಗೆ ಇಬ್ಬನಿಯಿಡುವ ಗೋಧೂಳಿ ಮುಹೂರ್ತವನು
ಮೂಡಿಸಿದ ಸಂಧ್ಯಾಸಾಮ್ರಾಜ್ಞಿಯೇ?
ಕೊನೆಗೆ ಕರಿಗಂಬಳಿಯ ಕೋನಕೋನದಲಿ ಕಣ್ಬಿಡುವ ಕೋಟಿನಕ್ಷತ್ರಗಳು
ಸಹಸ್ರಸೂರ್ಯಮಂಡಲ ದೊಲು ಸುತ್ತಿ,
ಶಶಿಶೀತಲನವ ಮಧುಚಂದ್ರಕಾಂತಿಯನೇ ಕೆತ್ತಿ, ಬೆಳಗಿಲ್ಲದ ಬಾಂದಳವಿದು
ಭಣಗುಟ್ಟುವ ಬಂಜರುಭೂಮಿಯಲ್ಲವೆಂದಿರಲು

ಕವಿದ ಕತ್ತಲಕೂಟದೊಳಗೆ ಕುಳಿತ ಚುಕ್ಕಿ–ಚಂದ್ರಮರ ಚೈತನ್ಯದೊಳಗೆ
ಸ್ವರ್ಣಕಾಂತಿಯ ಸುರಿಸಿದ ಸೂರ್ಯಕನ್ಯೆಯೇ?
ಅಗ್ನಿಯ ಆಂತರ್ಯದೊಳಗೆ ಅನುರಾಗವನರಳಿಸಿ ಅಮರಪ್ರಾಂತ್ಯದಿ
ಅಮೃತಕುಂಭವನಿಟ್ಟ ಮದನಮೋಹಿನಿಯೇ?
ಸ್ವರ್ಲೋಕದ ಸುರಿರಗಾಗೆಂದೇ ಸೃಷ್ಟಿಯಾದ ಸುಂದರೋದ್ಯಾನದೊಳಗೊಮ್ಮೆ
ನಲ್ಲ–ನಲ್ಲೆಯರಾಗಿ ನಡೆದ ನೆನಪೆಲ್ಲ ನೂರಾಳದೊಳಗಿಂದೆದ್ದು ನಿಂತಿರಲು,
ಕಾದಲೆಯ ಕಣ್ಣೋಟವದು ಕೇದಗೆಯ ಕುಡಿಯೊಲಾಗಿ ಕಂಡಿತ್ತು. ನೈದಿಲೆಯ
ನೋಟವನೇ ನೆನಪಿಸಿತ್ತು.
ಸಹಧರ್ಮಿಣಿ ಸುಂದರಿಯವಳ ಆನನವದು ಕಾನನದ ಕೋಟಿಕುಸುಮಗಳ
ಕಾಂತಿಯನೇ ಕರೆಸಿತ್ತು.
ವಂದನೀಯಳ ವಾಣಿಯದು ವಸಂತಾಗಮನದಿ ಕೂಗಿಕರೆವ ಕೋಕಿಲದ
ಕುಕಿಲಿನಂತಾಗಿ ಕೇಳಿತ್ತು.
**ಚಂದ್ರನಲಿ ಚಿತ್ರಿಸಿಹ ಚೆಲುವಿನೊಳಗುಡಿಯಿಂದ ಬಂದಿಳಿವ ಗಂಗೆ**ಯು ಭಗೀರಥ
ಬಾಂಧವರನು ಬದುಕಿಸಿದಂತೆ,
ಭಾವನೆಗಳ ಬುಗ್ಗೆಯದು ಬುವಿಯಾಳದಿಂದ ಬಂದು ಬತ್ತಿದ ಬಾವಿಯನು
ಮತ್ತೆ ಮೇಲ್ವಾಯ್ದಿತ್ತು.
ಪ್ರಾಕ್ತನ ಭವದಲೊಮ್ಮೆ ಒಡನುಡಿದ ಬಿಡಿನುಡಿಗಳವು, ಒಡಲಾಳದ ಒಂದೆಡೆಯಲಿ
ಪಡೆನುಡಿಗಳಾಗಿ
ಪವಡಿಸಿಹವು, ಗುಪ್ತಗಾಮಿನಿಯಾಗಿ ಗಮಿಸಿಹುದು, ಸುಪ್ತಸುಪ್ತಿಗೊಳಗಾಗಿ
ಸುಳಿದಿಹುದು.
ನಿನ್ನ ನಾಮವನೇ ನೆನೆಯುತ್ತ ನೂರುಲೊಕಗಳಲಿ ನಡೆದಿಹವು, ನೂರುಜನ್ಮಗಳಲಿ
ನವೆದಿಹವು.
ಲಕ್ಷಾವಧಿಯ ಕಕ್ಷೆಯೊಳಗೆ ಸುರಕ್ಷಿತವಾಗಿರುವ ಸುಲಕ್ಷಣದ ಅಕ್ಷರಗಳೆಲ್ಲ
ಒಂದಾಗುತ ಬಂದು
ವಂದನೀಯವಿಹ ನಿನ್ನ ಸುಂದರನಾಮವನು ಸ್ಫುರಿಸುವ ಸಿದ್ಧತೆಯಲ್ಲಿವೆ.
ಹೆಸರೆತ್ತುವ ಹುನ್ನಾರದಲಿವೆ.
ಬ್ರಾಹ್ಮಿಯ ಬಾಂದನು ಬಿಟ್ಟು ಬರುವ ಅಶ್ವಿನೀರಥದೊಳಗೆ ಸೂರ್ಯಕುವರಿಯೊಡನೆ
ಒಡಮೂಡುವ ದಸ್ರ–ನಾಸತ್ಯರು,

ನಿಶೆಯ ನಾಲ್ಕುಹಡಿಯ ಕಟ್ಟಡವನು ಕೆಡವಿ ತೆಳುಬೆಳಕುದಾರದ ತೀಕ್ಷ್ಣತೆಯಿಂದ
ಕಾಲುದಾರಿಯ ರಚಿಸಿ ನಿಂದಿರುವಾಗ,
ನಿರ್ಮಾಯಘನದ ನೀಲಾವರ್ತದಿಂದ ಉದಿಸಿ ಬರುವ ಉಷೆಯು ಕ್ಷಿತಿಜವನು
ಕಾಂತಿಮಯವಾಗಿಸಿ ಕಾಲ್ದೆಗೆದಿರುವಾಗ,
ಸ್ವರ್ಲೋಕದ ಸ್ವರ್ಣಾಶ್ಮಗಳಿಂದ ಸಿದ್ಧವಿಹ ಹೆದ್ದಾರಿಗುಂಟ ಹೊರಡುವ
ಅರುಣರಥದಿ ಆರೂಢನಿಹ ಸವಿತೃಸೂರ್ಯನು,
ಸೂಚಿತೇಜಗಳ ಮೊನೆಯಿಂದ ರಜನಿಯ ಚುಚ್ಚಿ ಬೆಳಗು ಬಾಂದಳವನು
ಹಗಲು ಹೊನ್ನಾಗಿಸಿರಲು
ಮಬ್ಬಿಡಿದ ಮೂಡಣದಿ ಮೂಡಿದ ಮುಂಜಾವಿನ ಮಂಜಾಗಿರುವೆ, ಪುಟವಿಕ್ಕಿದ
ಪಂಜಾಗಿರುವೆ;
ಖಗದೊಲಾಗಿ ನಭದಲೇರುವ ಚಂಡಭಾಸ್ಕರನವ ಕೆಂಡದುಂಡೆಯಾಗಿ ಕಂಡಿರಲು
ಸುಡುವ ಸೂರ್ಯನ ಸಿಟ್ಟಿನಲಿ ಸುಟ್ಟುರಿವ ಬದುಕಿನ ಮಧ್ಯಾಹ್ನದ ಮಂಪರಾಗಿರುವೆ;
ದಿನವೆಲ್ಲ ದಣಿದ ದಿನಕರನವ ಮಹಾಕಾರಣದಿ ಮಿನುಗುವ ಮಾತಾಯ
ಮಡಿಲೇರಿ ಮಲಗಲೆಂದು
ಪಡುವಣದ ಪ್ರಾಕಾರಕಿಳಿದು ಪಯಣಿಸಿರಲು, ಅಸ್ತಂಗಮನದಿ ಅಡಿಯಿಡುವ
ಮುಚ್ಚಂಜೆಯ ಮಬ್ಬಿನ ಕಾವಳವಾಗಿರುವೆ;
ಕತ್ತಲಾವರಿಸಿರಲು ಮಲಗಿದ ಮುದ್ದುಮಕ್ಕಳನು ಸವಿಗನಸುಗಳ ಸ್ವಪ್ನರಾಜ್ಯಕ್ಕೆ
ಕರೆದೊಯ್ವ ನಿಶೆಯ ಉಸಿರಾಗಿರುವೆ;
ನೂರುನದಿಗಳಿಗೆ ನೆಲೆವೀಡಾಗಿ ನೆಲೆಸಿರುವ ಹಿಮವಂತನ ಪರ್ವತರಾಜ್ಯದಿ
ಪವಡಿಸಿರುವ ಬೆಳ್ಳಿಬೆಟ್ಟವಾಗಿರುವೆ;
ಪ್ರಣವತರಂಗಿಣಿ ಪುಷ್ಪಭದ್ರೆಯರು ಪರಿವಾರಿಗರಾಗಿ ಹರಿದು ಸರಿದು ಹಳ್ಳವಾಗಿ
ಕೊರೆದ ಕೊಳ್ಳಕೊನ್ನಾರವಾಗಿರುವೆ;
ಅಪರಂಪಾರದ ಆಚೆ–ಈಚೆಗೆ ಸೂಚ್ಯವಾಗಿ ಬೆಳೆದು ಭವಾರಣ್ಯವನೇ
ಕೆಣಕುವೊಲಿರುವ ಕಣಿವೆ–ಉದ್ಯಾನವಾಗಿರುವೆ;
ಐತಿಹ್ಯವುಳ್ಳ ಗುಡಿಗಳಿಹ ಗ್ರಾಮವಾಗಿರುವೆ, ಐಶಾರಾಮದ ಪ್ರಾಕಾರಗಳಿಹ
ಪಟ್ಟಣವಾಗಿರುವೆ,
ನೂರುನೃಪರ ನಿಯಮಗಳಲಿ ನಡುಗುಡುಗಿ ನೀರಾಗಿ, ನರಕವನೇ ನೆನಪಿಸುವ
ನಗರವಾಗಿರುವೆ;

ಮಹೀತಲದಿ ಮಹಿಮಾನ್ವಿತವಿಹ ಮೋಹಕತೆಯ ಮೂಡು–ಮುಳುಗಾಗಿರುವೆ;
ಸ್ವಪ್ನಸಾಮ್ರಾಜ್ಯದಲೂ ಲಭ್ಯ ತಾನಿರದ ಸೌಂದರ್ಯದ ಸೊಬಗು
ಸರ್ವೇಶ್ವರಿಯಾಗಿರುವೆ;
ಅಖಿಲಾನಂತದಲೂ ಅಲಭ್ಯವಿಹ ಆತ್ಮಾನುಭೂತಿಯ ರಾಜ್ಯ–ರಾಜೇಶ್ವರಿಯಾಗಿರುವೆ;
ಭೂತಕಾಲದಲೊಮ್ಮೆ ಭಾರ್ಯೆಯಾಗಿದ್ದ ಭಾಮಿನಿಯೇ ಬುವಿಯಂಗಳಕೆ
ಬಂದಿಳಿದೆನ್ನ ಬಳಿಸಾರಿ ಬಾ!
ಪವಿತ್ರತೆಯ ಪದವಿಗಾಗೆಂದು ಪೂರ್ವದ ಪ್ರಕಾಶವನೇ ಪರಿತ್ಯಜಿಸಿದೀ ಪತಿರಾಯನ
ಪ್ರಾಣಗರ್ಭದೊಳಗೆ, ಪ್ರೇಮತತ್ವವ ಪ್ರವಹಿಸುವ ಪೌರ್ಣಮಿಯಾ
ಪೂರ್ಣಪ್ರತಿನಿಧಿಯಾಗುತ ಬಾ!
ಸೌಂದರ್ಯವನೇ ಸೇಡಿನ ಸೂಡಿಯಾಗಿಸಿ ಸರ್ವಸ್ವವನೇ
ಸುಡುಗಾಡಿಗೆಸೆಯಲೆಂಬ ಸಿಟ್ಟನು ಸುಟ್ಟೆಸೆದು ಬಾ!
ಅನಂತಕಾಲೇಶ್ವರನ ಅವ್ಯಕ್ತಲೀಲೆಗಳನೆಲ್ಲ ಅಂಗೈಯೊಳು ಅವಿತಿಡುವ
ಇಂದ್ರಜಾಲದೊಲು
ಪೂರ್ಣಜ್ಯೋತಿಯ ಪ್ರಾಕಾರದೊಳಗಲ್ಲಿ ಪಡೆದ ಪ್ರಕಾಶದಪಟಲವನು
ಪರಿತ್ಯಜಿಸಿ ಪ್ರತ್ಯಕ್ಷಳಿರಲು ಬಾ!ಕಾರ್ಮಣರ ಕಾಣ್ಕೆಯೊಳಗೆ ಕನಕಕಾಂತಿಯಾಗುತ ಬಾ!
ಮರ್ತ್ಯರ ಮಿತಿಯೊಳಗೆ ಹಿತಮಿತವಾಗುತ ಬಾ!
ಹೃದಯಾಬ್ಧಿಯ ಹೃತ್‌ವಲಯದಿಂದಿಳಿದೆನ್ನ ಹೃತ್ಕಮಲದಿ ಹೃತ್ಪೂರ್ವಕವಾಗಿ
ಪೂರ್ಣವಾಗಲು ಬಾ!
ವೇದಮಂಡಲದಲಿ ವಂದನೀಯವಿಹ ವಿವಾಹಸೂಕ್ತದಲೊಮ್ಮೆ ಒಂದಾಗಿ
ಒಪ್ಪಿತರಾಗಿದ್ದೆವೆಂಬುದನು ಒಪ್ಪುತ ಬಾ!
ಉರ್ವಿತಲದಿ ಉರ್ವಭ್ಯಶ್ನುತೆಯಾಗಿಹ ಉರ್ವಶಿಯೇ ಉರುಹಾಕುತ ಬಾ!
ಪೃಥಿವಿಯಲಿ ಪುರುಷೋತ್ತಮನಿಹನೀ ಪುರೂವರಸ್ಸನೆದೆಯೊಳಗೆ ಪದವಿಡುತ ಬಾ!”
ರಜನಿಯಲೂ ರಂಜನೀಯವಿಹ ರಮ್ಯೋಕ್ತಿಗಳನು ಸಾರುವ
ಸ್ವಪ್ನಸಾಮ್ರಾಜ್ಯದಲೊಮ್ಮೆ ಸಂಚರಿಸಿರಲು,ರೆಕ್ಕೆಗುದುರೆಯ ಬೆನ್ನೇರಿ
ಮೇಘಮಾಲೆಗಳ ಬಳಿಸಾರಿ,
ಹಿಂಜಿದ ಬೂರಲರಳೆಯ ಬೂದುಬೆಟ್ಟಗಳಲಿಗೌಪ್ಯವಿಹ ಗಂಧರ್ವಲೋಕದ
ಗಾನಮಂದಿರದಿ ಕಿಂಕಿಣಿಯರ ಕಂಚಿನ ಕಂಠದಿಂದೊಗಮಿಗುವ
ಸ್ನಿಗ್ಧಾಲಾಪವನಾಲಿಸುತ ಕರ್ಣಪೀಯೂಶಗೊಂಡಿರಲು, ಗುಡುಗು–ಸಿಡಿಲಿನ

ಸೂತ್ರದೊಳಗಿಂದ ಸೂಕ್ಷ್ಮಲತೆಯಾಗುತ ಸುಳಿದೀಚೆ ಬಂದ ಕೋಲ್ಮಿಂಚೊಂದು,
ಮೋಡದೊಳಗೆ ಕರಿಗಡ್ಡೆಯಾಗಿ ಕುಳಿತಿರುವ ಜಲದಪ್ಸರಿಯರನು ಜರಿದಿಳಿಸಿ
ಬಂದಿಲ್ಲಿ, ಬುವಿಯೆಡೆಗೆ ಭವಿಸುವಾ ಭಾವನೆಯನು ಬರೆದಿತ್ತು.

ಅದರ ಇನ್ನೊಂದೆಡೆಯ ಗಾಳಿಗೋಪುರದ ಗುಡಿ–ಗೊಂಡಾರಣ್ಯದೊಳಗೆ
ಗುಹ್ಯಗಣ ಗಾರುಡಿಗರು
ಗಂಧಗೊರಡುಗಳನೆಲ್ಲ ಗೊಂಬೆಗಳಾಗಿಸಿ ಕೊರೆದು, ಪಡಿಯಚ್ಚಿನಿಂದೆದ್ದಾ
ಪುತ್ಥಳಿಗಳಲಿ ಪ್ರಾಣವಾಯುವ ತುಂಬಿಸಿ, ನೆಲದ ಮೇಲೆಸೆಯುತ್ತಾ
ನೋಡನೋಡುವನಿತರೊಳು ನೂರಾರು ನೆಂಟರನೇ ನೆರೆಸಿಹರು;
ಕಿನ್ನರಾಶ್ವರ ಕೂಟಮಂದಿರದಿ ಕಾಲಿಟ್ಟೊಡನೇ ಕೇಂದ್ರದಿ ಕುಲುಕಿತಿಹ
ಕುಲುಮೆಯೊಳಗೆ ಕುದಿಯುತಿಹ
ಕೆಂಡರಸದಿಂ ಕಂಡರಿಸಿಹರವರು ಕೋಟ್ಯಂತರದ ಕಾಣ್ಕೆಗಳನು: ಇಂದ್ರವನದ
ಮೂಲೆಯಲಿ ಮಡಗಿಹ ಮಣಿಮಂಚ, ದೇವಛಂದದ ರತ್ನಹಾಸದ ರಜ್ಜಿನಿಂದ
ರಚಿಸಿಹ ರನ್ನಗಂಬಳಿ, ಸೂರ್ಯಪೂಜೆಗೆಂದು ಸಿದ್ಧವಿಹ ಸ್ವರ್ಣಪೀಠ,
ದೇವಪತ್ನಿಯರ ದಿವ್ಯಾಭರಣದಿ ಶ್ರೀಮಂತವಿಹ ಶಿರೋರತ್ನ, ದಿವ್ಯಶಿಶುವಿನ
ಆಟಿಕೆಗೆಂದಿರುವ ಮೂರುಗಾಲಿಯ ಮರದನಸ,
ಸುಮನಸರ ಸೌಧದಲಿ ಸಮಯವನು ಸಾರುತ ಗಂಟೆಗಂಟೆಗಳಿಗೊಮ್ಮೆ
ಘಂಟೆಯ ಬಾರಿಸುವ ಸೂರ್ಯ ಘಟಿಕಾಯಂತ್ರ,
ಚೆಲುವ ದೇವಿಯರ ಚಿತ್‌ಪಟಲವನು ಚಿರಕಾಲವಿರುವೊಲು ಚಿತ್ರಿಸುವ
ಚಂದ್ರಛಾಯಾದರ್ಪಣ...
ಇಂತು ಮಹಾದ್ಭುತಗಳನೇ ಮೆರೆಯಿಸುವಾ ಮೊಗಸಾಲೆಯನು ದಾಟಿ,
ಕಿಂಪುರುಷರ ಕೋಟೆಕೊತ್ತಳದಿ ಕಾಲಿಟ್ಟು, ಕೋನಕೋನದಲಿ ಅಲೆರದಿರಲು
ಮೃಗಜಲದ ಮಹಾವಾರಿಧಿಯೊಂದು ಮೂಡಿ ಮೋಹಕತೆಯನಲ್ಲಿ ಮೆರೆಸಿತ್ತು,
ಅಮೂರ್ತಕಿರಣಗಳೇ ಸೂರ್ಯಗೋಳದ ಗ್ರಹಿಕೆಯನಿತ್ತು ಸಂಧ್ಯೆಯ
ಚಮತ್ಕಾರಗಳನಲ್ಲಿ ಚಿತ್ರೈಸಿತ್ತು.
ಕೊನೆಗೊಮ್ಮೆ ದಧಿಕ್ರಾವನವನೇರಿ ವಲಯದ ತುತ್ತತುದಿಯ ಮೀರಿ ಚಂದ್ರಲೋಕಕೆ
ಚಲಿಸಿ,
ಚಂದ್ರಾಶ್ಮಗಳ ಸಂಗ್ರಹಿಸಿ, ಚಾರು–ಚಂದ್ರಾನನೆಯೊಲಿಹ ಚಂದ್ರಮಾನವರೊಡನೆ
ಚರಿಸಿ, ಮರಳಿ ಮರ್ತ್ಯಕ್ಕಿಳಿದು,

ಮೀನಿನಂತೀಜುವ ಮನವಿರಲು, ಮತ್ಸ್ಯಕನ್ಯೆಯರ ಮಹಾಸಾಗರಕಿಳಿದು
ಅರ್ಧ ಮೀನರ್ಧ ಮಾನವರಿಹ ಮಾಯಾವಿಜಾಲದಾ ಜಲದಾಳದಿ ಜತನದಿಂದಿರುವ
ಜಕ್ಕ–ಜಕ್ಕಿಣಿಯರ ಜೊತೆಯಾಗಿ ನಡೆದು, ನೀರಾಳದಿ ನರಪಿಶಾಚಿಗಳಾಗಿ
ನೆಲೆಸಿರುವ ಸಾಯರನ್ನುಗಳೊಡನೆ ಸ್ವೈರಣೆಯಿಂದ ಸಲುಗೆಯ ಬೆಳೆಸಿ,
ಕಂಡುಂಡ ಕಾಣ್ಕೆಗಳನೆಲ್ಲ ಕೇವಲ ಕನಸೆಂದು ಕರೆದು ಕೊರಗುವ ಮನವಿರದ
ಮಂದರಾತ್ರಿಯದು ಮುಗಿದು,
ಬೂದುಬಣ್ಣದಿ ಭ್ರಮೆಯಿಡುವ ಬೆಳ್ಳಿಬೆಟ್ಟಗಳೆಲ್ಲ ಮತ್ತೆ ಬೆಳ್ಳಗಾಗುತ ಬಂದು,
ಹರಿದ್ವರ್ಣದ ಹಿನ್ನೆಲೆಯಲಿ, ಹೊನ್ನಲೀಲೆಯ ಹರಿಸಿದ ಹಂಸಾದಿತ್ಯನವ,
ಕತ್ತಲೆಯ ಕೋನಕೋನದೊಳಗೆ ಕಿರಣಗಳ ಕೋಲ್ಮಿಂಚನು ಕರೆಸಿ,
ಕನಸುಗಾರನ ಕಣ್ದೆರೆಸಿರಲು, ಎಚ್ಚರವಲ್ಲವೆಚ್ಚರದ ಚುಮುಚುಮು ಚಳಿಯಲಿ
ಚಾರುಲೋಕಗಳನೇ ಚರಿಸಿದ ಸಾಮಾನ್ಯ ಲೋಗನವ ಲೋಕಲೋಕಂಗಳ
ಯಾತ್ರಿಕನಾಗಿ, ದಿಟ್ಟಿಸಿದ ದಿವ್ಯದರ್ಶನದ ನೂರು ನೆನಹುಗಳನೆಲ್ಲ,
ಮತ್ತೆ ಮನದೊಳಗೆ ಮೂಡಿಸಿ ಮೆರೆಸಲೆಂದಲ್ಲಿ ಮುನ್ನೋಡುವನು.
ಸ್ಮೃತಿಸಾಮ್ರಾಜ್ಯದೊಳಗೊಮ್ಮೆ ಸಂಚರಿಸಿ, ಸಿಕ್ಕಸಿಕ್ಕೆಡೆಗಳಲೆಲ್ಲ ಸುತ್ತುಹಾಕುತ
ಸುಸ್ತಾಗುವನು. ಕೊನೆಗೊಮ್ಮೆ ಕಾಣದಿರುವ ಕೂಟಗಳನೆಲ್ಲ ಕಡೆಗಣಿಸಿ,
ಕೆಳಗಿಳಿದು ಕಣ್ಮುಂದಿರುವ ಕೇಡುಗೂಡಿನ ಬದುಕನೇ ಬೈಯುತವನು ಬದುಕುವನು,
ಭ್ರಮೆಯ ಬಾಂದಳದಿ ಭೋರೆಂದು ಬೀಸುವ ಬಿಸಿಲುಗುದುರೆಯನೇ
ತಾನೇರಿದ ರೆಕ್ಕೆಗುದುರೆಯೆಂದು ಭಾವಿಸುವನು.
ಅವ್ಯಕ್ತಲೋಕದ ಅದೃಶ್ಯಮಾರ್ಗದಿಂದವರೋಹಿಸಿದ ಅಮೃತನಾಮವದು
ಅಚಿರಾಂಶುವಾಗಿ ಅಲೆದಿತ್ತು,
ಸ್ವರ್ಗಸೀಮೆಯಲಿ ಸೌದಾಮಿನಿಯಾಗಿ ಸುಳಿದಿತ್ತು, ವಾಯುವಲಯದಿ
ವಿದ್ಯುಲ್ಲತೆಯಾಗಿ ವಿಜೃಂಭಿಸಿತ್ತು,
ಮುಕ್ತಾಯದಿ ಮಾನವನ ಮಸ್ತಿಷ್ಕಮಂಡಲಕಿಳಿದು ಮಧುರಸ್ವಪ್ನಗಳ
ಸರಮಾಲೆಯನಿತ್ತಿತ್ತು.
ಕೊನೆಗೆ ಕಾಂತನೋರ್ವ ಕಗ್ಗಾಡಿನಲಿ ಕಳೆದೋದ ಕಾಂತೆಯನು ಕೂಗಿ ಕರೆವಂತೆ
ಉಲಿದನವ ಉರ್ವಾಶಿನಿಯ! ಉದಕ–ಮಂಡಲದ ಉಪ್ಪರಿಗೆಯಲಿ
ಉರುಹಾಕುತಿಹ ಉರ್ವಶಿಯ!
ಈ ಹಿಂದೊಮ್ಮೆ ಸೂರ್ಯಮಂಡಲದಿಂದ ಸುಳಿದೀಚೆ
ಸುಂದರೋದ್ಯಾನದೊಳಗಲೆಯುತಿಹ ಸರಣ್ಯೂದೇವಿಯು, ಅಶ್ವೆಯಾಗುತ

ಅಟವಿಯೊಳು ಅಡಗಿಕೊಂಡಿರಲು, ವಿವಸ್ವತನವ ವಾಜಿರೂಪವ ತಳೆದು,
ತನ್ನಾಕೆಯೊಡನೆ ಸೇರಿ ಸುಖಿಸಿರಲು, ಸುಧನ್ವನರಿಹ ಅಶ್ವಿನಿಗಳೆಂಬ
ಅರ್ಧಾಶ್ವದೇವಯುಗಲರ ದಿವ್ಯಾವತರಣವಾಗಿತ್ತು. ಆ ವಿವಸ್ವತನೊಲು
ವಾಜಿಯನೇರಿ ಹಿಮಾರಣ್ಯದೆಡೆ ಹೊರಟಿರಲು ಹಯವದು,
ಉತ್ತರೋತ್ತರದ ಎತ್ತರೆತ್ತರಕೆ ಏರುತ

ದಕ್ಷಿಣದ ಗಾಳಿಯನು ಗೊರಸಿನಿಂದ ಗುಡಿಸಿ, ತಾ ಗಗನಗೋಪುರದೆಡೆಗೇರಿತ್ತು.
ಅನಿತರೊಳು ಅಭಯದಿಂದಲೆಯುತಿಹ ಅಮರಲೋಕದ ಅಪ್ಸರಿಯರೆಲ್ಲರೂ ಅವುಡುಗಚ್ಚಿದರು.
ಸರ್ಪಲೋಕದ ಸರಹದ್ದನು ಸೇರಿ, ನಾಗಕುಲದ ನೂರುನಾಯಕರನೇ ನಭದೆಡೆಗೆ ಹಿಡಿದೆತ್ತಿ,
ಬಂಡೆಗಲ್ಲುಗಳ ಮೇಲೆ ಹೊಡೆದೆತ್ತಿ, ಹಾವುಜೀವಗಳನೆಲ್ಲ ಹತ್ಯೆಗೈದು ಹೊತ್ತೊಯ್ಯುವ
ರಣಹದ್ದೊಂದು ರುಂಯ್ಯಿಡುತ ವಿಹಗವಂಶಸ್ಥರಿಹ ವನಾಂತಿಕದೆಡೆ ವಕ್ಕರಿಸಿರಲು,
ಗುಂಪುಗುಂಪಾಗಿ ಗುಟುರ್‌ಗುಂವ್ಗುಡುತಿರುವ ಕಪೋತ ಪಾರಿವಾಳಗಳವು
ಮಿರಿಮಿರಿ ಮಿಂಚುವ ಹಸಿರು–ಜಾಂಬಳಿ ವರ್ಣದ ಕುತ್ತಿಗೆಯ ಮೇಲೆತ್ತಿ,
ಮುಗಿಲಿನೊಳು ಮೂರುವರ್ತುಲಗಳ ಸುತ್ತಿ ತನೂರುಹವನೆತ್ತಿ ತೂಗುತಿಹಾ ತುಡುಗನನು
ಕಂಡೊಡನೆ ಕೆಂಡದಲಿ ಕಾಲಿಟ್ಟಂತೆ ಕಲಮಲಗುಡುತ ಕಿರುಚಿ ಕಲೆವ ಕಪೋತಗಳೊಲು
ಸುಂದರಿಯರ ಸ್ಥೈರ್ಯವಡಗಿತ್ತು, ಅಪ್ಸರಿಯರೆದೆಯೊಳಗೆ ಅಳುಕೊಂದು ಅಲೆದಾಡಿತ್ತು.
ಅವರಾ ಕಸಿವಿಸಿಗೆ ಕಾರಣನೀ ಕಾರ್ಮಣನಾಗಿರಲಿಲ್ಲ. ಅವರ ದಿಟ್ಟಿಯಲವನಿನ್ನೂ ಭೆಟ್ಟಿಯಾಗಿರಲಿಲ್ಲ.
ಬದಲಿಗೆ, ಆ ಭವಕನ್ಯೆಯರ ಭಾವನೆಯಲಿ ಭಯವನು ಬಿತ್ತಿದ ಬೀಜವದು ‘ಬಡಗಣದಿಂದ’ ಬಂದೆರಗಿತ್ತು
ಅಲ್ಲಿಯವರೆಗೂ ಆಹ್ಲಾದಕರವಾಗಿದ್ದ ಪ್ರಕೃತಿಯದು ಪರಿತ್ಯಕ್ತವಿಹ ಪಾತಾಳದೊಲು ಪತರುಗುಟ್ಟಿತ್ತು.
ದೂರ ದಿಗಂತದಲ್ಲೆಲ್ಲೋ ದಿಟ್ಟಿಗೋಚರವಿರದೆ ಮುನ್ನೂಕುತಿಹ ಮೇಘದೊಡಲಿಂದ ಮೇಲೆದ್ದ

ಗುಡುಗು ಗರ್ಜನೆಯದು ಗಿರಿವನಗಳನೆಲ್ಲ ಗಮಿಸಿ ಗೋಪಾಲಕರನು
ಗುಂಭವಿಡಿಸುವ
ಗಟ್ಟಿದನಿಯಾಗಿ ಗುಟುರುಗುಟ್ಟಿತ್ತು.ಮುಲುಕುಮೋಡದ ಮೆಲುದನಿಯಾಗಿ
ಮೇಲ್ವಾಯ್ದಿತ್ತು.
ವಾಯುವ್ಯದ ವಾಯುಮೂಲೆಯೊಳಗಲ್ಲಿ ವಜ್ರಖನಿಯೊಲು ಒಟ್ಟುತೊಟ್ಟುತ್ತ
ದಟ್ಟವಾಗಿತ್ತದು 'ದ್ಯೌ'ಲೋಕ.
ಮೋಡದ ಮೇಲೊಂದು ಮೋಡವು ಮಲಗಿ, ಮೇಘಮಂಡಲದ
ಮಹಾಸುಪ್ಪತ್ತಿಗೆಯನೇ ಮೆರೆಸಿರಲು,
ಆ ಕಾರ್ಮೋಡಗಳ ಕತ್ತಲಕಮರಿಯೊಳಗೆ ಕಳೆದುಹೋಗಿತ್ತದು ಅನಿಮೇಷರಿಹ
ಅಮರಪ್ರಾಂತ್ಯ.
ಗಡ್ಡೆಗಡ್ಡೆಗಳಾಗಿ ಗುಡ್ಡೆ ಹಾಕಿದೊಲಿಹ ಗುಡುಗು ಗೊಂಡಾರಣ್ಯವೆಂಬ
ಗುಡ್ಡಗಾಡುಗಳ ನೆತ್ತಿಯ ಮೇಲೊಂದು ಮಿನುಗು ಮಾಳಿಗೆಯಾಗಿ,
ಮೆರೆಯುತ್ತಿತ್ತೊಂದು ಮೂಡುಮುಳುಗಿರದ ಮುಗಿಲು –ಮತ್ತೊಂದು.
ಮರ್ತ್ಯಚಕ್ಷುಗಳಿಂದ ಮರೆಮಾಚಲ್ಪಟ್ಟ ಮೋಡದಾಚೆಯಾ ಮುಗಿಲು
ಮಂಡಲದೊಳಗೆ,
ಸಪ್ತವರ್ಣಗಳ ಸುತ್ತಿ ಸಿದ್ಧವಿಹ ಸೂರ್ಯಹಾಸದ ರತ್ನಛಂದವನೇ ರಜ್ಜುಸರ್ಜದಲಿ
ಸೆರೆಹಿಡಿದು,
ಸಮಾಧಿಗೈದು ಸುಖದಿ ಮಲಗಿ ನಿದ್ರಿಸಿತ್ತೊಂದು ಚೆಂಗುಲಾಬಿ–ಹೊಂಗುಲಾಬಿಯ
ನಿರ್ಮಲಾಕಾಶ.
ಅದರಡಿಯ ಅಂಗಣದಿಂದ ಗುಡುಗೊಂದು ಗುಡುಗಿತ್ತು, ಮಿಂಚೊಂದು
ಮಿಂಚಿತ್ತು,
ಅಂಚಿನಿಂದಿಡಿದು ಅಂಚಿನೊರೆಗೆ ಸಂಚರಿಸುತ್ತ ಸಂಚಲನವನೇ ಸೃಜಿಸಿತ್ತು,
ಸಂಚಕಾರವನೇ ಸೃಷ್ಟಿಸಿತ್ತು.
ಅದಾವನೋ ಅಮಾವಾಸ್ಯೆ ಮಾಂತ್ರಿಕನೋರ್ವ ತೂರಿದನೋ ಎಂಬಂತಿರುವ
ಮಂಕುಬೂದಿಯೇ
ಮಬ್ಬು ಮಸುಕಿಡಿದ ಮೋಡಗಳ ಮೈದಳೆದು ಮುನ್ನೂಕಿದೊಲಾಗಿ
ಗಗನಗಾಂಭೀರ್ಯವಿಡಿದಿತ್ತು.
ತೆಂಕಣದ ತೇರಿನಲಿ ತನ್ಮಯದಲಿದ್ದ ಮಾರುತವದು ತಿರುಗಿ ತತ್ತರಿಸಿತ್ತು, ಭಯದಿ
ಬಿತ್ತರಿಸಿತ್ತು.

ಕವಲುಗೋಲ್ಮಿಂಚಿನ ಶತಧಾರೆಯಿಹ ಸಿಡಿಲು ಶಕ್ತ್ಯಾಯುಧವನು ಸಾಣೆಹಿಡಿದು
ಸಿದ್ಧವಿರಿಸಿ,
ವೈಯಾಘ್ರಕೋಶದೊಳು ವಜ್ರಸಮ ಹರಿತವಿಹ ವಾರುಣಾಸ್ತ್ರಗಳ ಒತ್ತಟ್ಟಿಗಿರಿಸಿಹ
ಮೇಘಮಾಲೆಯದು, ಮೋಡಗವಿದು ಮನೆ–ಮಾಳಿಗೆಗಳನೆಲ್ಲ ಮುಸುಕಿ
ಮಳೆಯಿಳಿಸಲೆಂದು ಮೌನದಿ ಮೀನಾಮೇಷವನೆಣಿಸಿರಲು, ಹೃದಯವಿದು
ವರ್ಷಾಧಾರೆಯಲಿ ಒರಗಿ ಒದ್ದೆಯಾಗಿ, ಮಲಗಿ ಮುದ್ದೆಯಾಗಿ
ತಣಿಯಲೆಂದಲ್ಲಿ ತವಕಿಸಿತ್ತು,
ಕಿವಿಯ ಪಟಲಗಳವು ಸುರಿವ ಸೋನೆರಾಗವನು ಕೇಳಿ
ಕರ್ಣಪೀಯೂಷಗೊಳಲೆಂದಲ್ಲಿ ಕಾತರಿಸಿತ್ತು.
‘ಜೀಮೂತ’ವಾಹನನವ ‘ಮಾತಂಗ’ರಥವನೇರಿ ‘ನೀರದ’ ನಿಲಯದಿಂದಿಳಿದು,
‘ಬಲಾಹಕ’ದಿಂದ ಬಂದಿಳಿದು, ಜನರಿರುವ ಜಗದೊಳಗೆ ಜಂಜರ ಜಲದ
ಜಾಲಂಧರವ ರಚಿಸುವ ರೂಹೆಗೊಂಡಿರಲು,
ರಕ್ಕಸರನೆಲ್ಲ ಕಕ್ಕಿಸಿ ಬಿಕ್ಕಿಸಿ ಒಕ್ಕಲಿಸಿ ದಿಕ್ಕುಪಾಲಾಗಿಸಲೆಂದು, ಧೇನಿಸಿದ ದೇವತೆಗಳ
ದಂಡಿನಲಿಹ ಇಂದ್ರನ ಹರ್ಯಶ್ವ, ಸೂರ್ಯನ ಶ್ವೇತಾಶ್ವ, ವರುಣನ
ವಜ್ರಾಶ್ವ, ಯಮಳರ ಹಂಸಾಶ್ವಗಳ ತೆರದಿ ನಿಲಿಂಪರ ನಿಯಮದಂತೆ,
ಬಿಟ್ಟ ಬಾಣದಲೋಡಿ, ಮುಟ್ಟಿ ಮೂಲತಾಣವನು, ಮುಗಿಸಲೆಂದವರನು
ಮುನ್ನೂಕುವೊಲು, ಇನಿತು ಕಾಲ ಸ್ತಬ್ಧಮುಗ್ಧವಾಗಿದ್ದ ಸ್ಥಾವರ
ಮುಗಿಲಿನಂಚಿನ ಸ್ವರ್ಗಸೀಮೆಯಿಂದ ಸುಳಿದೀಚೆ ಬಂದ ಬಲವಿರದ
ಬೆಳಕು, ಬಾಂದಳವೊಂದು ಭವಿಸುತ್ತ ಬಂದು, ಬುವಿಯೆಡೆಗೆ ಬಿದ್ದಿರಲು,
ನೀಲಾಕಾಶದಿ ನಿದ್ರಿಸಿಹ ನಿರಾಳದೊಳಗಿಂದ ನೀರಾವರ್ತವದು ನೆಲಕಿಳಿದು ನಿಂತಿತ್ತು.
ಹಸಿರಿನ ಬಸಿರಿಗೆ ಉಸಿರನ್ನಿತ್ತು, ಹರಿದ್ವರ್ಣದ ಹರ್ಮ್ಯಗಳನೆಲ್ಲ ಹೊನ್ನ
ಹೂದೋಟವನಾಗಿಸಿತ್ತು.
ಸೂತ್ರದಲಿ ಸುಯ್ಯೆಂದು ಸುರಿಯುತ ಸೋನೆರಾಗವ ಸುಳಿಸುತಿಹ ಸೂಜಿಮಲ್ಲಿಗೆ
ಮಳೆಯದು
ದಬ್ಬಣಗಾತ್ರವ ಧರಿಸಿತ್ತು, ಹುಚ್ಚೆದ್ದು ಹರಿಸಿತ್ತು, ಮಲಯಮಾರುತರನೇ ಮರೆಸಿತ್ತು,
ವರ್ಷಣದಲಿ ಹರ್ಷಣದ ಬರ್ಷಣವಾಗಿತ್ತು.ಘರ್ಷಣವೇ ಆಕರ್ಷಣವಾಗಿತ್ತು.
ಮುಗಿಲು ಮಧ್ಯದೊಳಗಾರೋ ಮಹಾಬಿಲವ ಮೂಡಿಸಿದೊಲಾಗಿರಲು
ವರ್ಷಾಲಾಪವದು ವರ್ತ್ಮಬಂಧದ ವಜ್ರಾಘಾತವನಿತ್ತು, ವಾರುಣಿಯನೇ
ಧಾರುಣಿಗಿಳಿಸಿತ್ತು.

ಮೇಘಜಾಲದೊಳಗೆ ಮಡಗಿರುವ ಮೂರು ಮಂತ್ರಾಯುಧಗಳು ಮತ್ತೆ
ಮುನ್ನೂಕಿರಲು
ಮೋಡಗಳು ಢಳಮಳಿಸಿ, ಡಿಕ್ಕಿ ಹೊಡೆದು, ದಿಕ್ಕುಗಳೇ ಬಿಕ್ಕಿಬಾಯಾರಿ
ಗುಂಭವಿಡಿದಂತಾಗಿತ್ತು
ಗಾರ್ಗಲ್ಲ ಬೆಟ್ಟಗಳು ಧಟ್ಟನೆ ಬಡಿದೊಡಲಿಂದ ಕಿಡಿ ಹಾರಿರಲದು
ಸಿಡಿಲುಮರಿಮಿಂಚಾಗಿತ್ತು
ನಭದಿಂದ ನೆಲಕಿಳಿದು ನಿಂತಿರಲದು ಗುಡುಗು ಗೊಂಡಾರಣ್ಯದೊಳಗಿಂದಿಳಿದ
ವಿದ್ಯುಲ್ಲತೆಯಾಗಿತ್ತು.
ಗುಡುಗುಗದ್ದಲದೊಳಗೆ ಗೊಂಚಗೊಂಚಲಾಗಿರುವ ಮಿಂಚೊಂದು ಮಿನುಗಿತ್ತು,
ಮತ್ತೆ ಮರೆಯಾಗಿತ್ತು.
ಎತ್ತಲೆತ್ತಲಿಂದಲೋ ಒತ್ತೊತ್ತುತ ಬಂದು, ಮನವ ಮೆತ್ತಗಾಗಿಸಿಹ ಕೋಲ್ಮಿಂಚದು
ಕಣ್ಗೆ ಕತ್ತಲಾವರಿಸಿತ್ತು.
ಗಾಳಿಗುರುಬರ ಗೊಟ್ಟಿಯೊಳಗೆ ಕಟ್ಟಿಹಾಕಿರುವ ಒಟ್ಟುವಾತಗಳನೆಲ್ಲ ಒಟ್ಟೊಟ್ಟಿಗೆ
ಅಟ್ಟಿ ಬಿಟ್ಟಿರಲು
ಭೋರೆಂದು ಬೀಸುತ ಬಂದ ಸುಂದರಗಾಳಿಯು ಸೇರಿ ಸೊನೆಯ
ಸುಂಟರಗಾಳಿಯಾಗಿ ಸುಳಿಯೆಬ್ಬಿಸಿ
ಚಕ್ರವಿಕ್ರಮದಿ ಚರಿಸಿ ಚಂಡಮಾರತವಾಗಿ ಖಂಡಖಂಡಗಳನೆಲ್ಲ ತುಂಡರಿಸುವ
ಭಂಡಧೈರ್ಯದಲದು ಭವಿಸಿತ್ತು.
ಮಲಯ–ಮಾರುತರ ಮಕ್ಕಳೆಲ್ಲ ಮೇಘಪುತ್ರರೊಡನೆ ನಡೆದು ನಡುಗುಡುಗಿಸಿ
ನೆಲಕೆ ನೀರಿಳಿಸಿಹರು.
ಮಿಂಚೊಡೆಸಿ–ಮಳೆಯಿಳಿಸಿ, ಮರ್ತ್ಯದ ಮೈಮುರಿಸಿ–ಮೆತ್ತಗಾಗಿಸಿ, ಸೂರ್ಯನನೇ
ಸುತ್ತಿ–ಸುಸ್ತಾಗಿ ಸುಮ್ಮನಾಗಿಸಿಹರು.
ಒಡನೆ, ಸರ್ರನೆ ಸ್ವರ್ಲೋಕದಿಂದಿಳಿದ ಸ್ವರ್ಣ–ಸುಪರ್ಣವಂದು ದೈತ್ಯವಿಶಾಲವಿಹ
ಪಕ್ಷಗಳ
ಬಿಚ್ಚಿ, ಬಾನಾಡಿಯಾಗಿ ಭವಿಸಿರಲು ಬಂಡೆಗಲ್ಲುಗಳೇ ನಾಗಾಂತಕನಾ ನೆರಳಿನಲಿ
ನಿಲುವೊಂತೆ.

(ಸಶೇಷ)

## ಶ್ರೀ ಅರವಿಂದರ
## 'ಗೀತಾ ಪ್ರಬಂಧಗಳು'

– ಅನು: ಜಾನ್ವಿ

### 35

### ಎರಡನೆಯ ಸರಣಿ:
### ಅಧ್ಯಾಯ – 2
### ಜ್ಞಾನ ಮತ್ತು ಭಕ್ತಿಗಳ ಸಮನ್ವಯ (2/2)

ಸಾಮಾನ್ಯವಾಗಿ ನೋಡಿದರೆ, ಜ್ಞಾನ ಹಾಗೂ ನಿರ್ವಿಕಾರಿತ್ವ (ನಿಷ್ಪಕ್ಷಪಾತತನ) ಸಿದ್ಧಿಸಿದ ಮೇಲೆ ಪುನಃ ಭಕ್ತಿಗೆ ಬರುವುದೆಂದರೆ, ಹೃದಯದ ಭಾವನಾತ್ಮಕ ಚಟುವಟಿಕೆಗಳಿಗೆ ಮರಳಿದಂತೆ, ಅದೊಂದು ರೀತಿಯ ಹಿಂದಡಿ ಇಟ್ಟಂತೆ ಎಂಬಂತೆ ತೋರಬಹುದು. ಏಕೆಂದರೆ ಭಕ್ತಿಯಲ್ಲಿ ಯಾವಾಗಲೂ ವ್ಯಕ್ತಿ ವಿಶೇಷತೆ ಇದ್ದೇ ಇರುತ್ತದೆ, ಭಕ್ತಿ ಇರುವುದೇ ಅದರ ಆಧಾರದ ಮೇಲೆ, ಅದರ ಪ್ರೇರಣಾ ಶಕ್ತಿಯೇ ವೈಯಕ್ತಿಕ ಜೀವದ ಆರಾಧನಾ ಭಾವನೆ, ವೈಯಕ್ತಿಕ ಜೀವ (ಅಥವಾ ಜೀವಾತ್ಮ) ಪರಮಾತ್ಮನೆಡೆಗೆ ಹರಿಸುವ ಪ್ರೇಮ ಅಥವಾ ಆರಾಧನಾ ಭಾವ. ಗೀತೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದರೆ ಈ ಸಂಶಯ ಅಥವಾ ಆಕ್ಷೇಪ ನಿರಾಧಾರ ಎಂಬುದು ಗೊತ್ತಾಗುತ್ತದೆ. ಗೀತೆಯು ಯಾವತ್ತಿಗೂ ನಿಷ್ಕ್ರಿಯೆಯನ್ನು, ಕ್ರಿಯಾ ವಿಮುಖತೆಯನ್ನು ಹೇಳಿಲ್ಲ ಅಥವಾ ನಿರ್ವೈಯಕ್ತಿಕ ನಿರಾಕಾರ ಪುರುಷನಲ್ಲಿ ಸೇರಿ ವಿಲೀನವಾಗಿಬಿಡುವುದೇ ಶ್ರೇಷ್ಠ ಎಂದು ಎಲ್ಲಿಯೂ ಹೇಳಿಲ್ಲ. ಬದಲಾಗಿ ಪುರುಷೋತ್ತಮನ ಜೊತೆ ನಮ್ಮ ಸಮಗ್ರ ವ್ಯಕ್ತಿತ್ವವನ್ನು, ಸಮಗ್ರ ಅಸ್ತಿತ್ವವನ್ನು, ಜೀವನದ ಎಲ್ಲ ಚಟುವಟಿಕೆಗಳೊಂದಿಗೆ ಸೇರಿಸಲು ಹೇಳಿದೆ. ಆದ್ದರಿಂದ ಗೀತೆಯ ಮಟ್ಟಿಗೆ ಈ ಆಕ್ಷೇಪ ಹೊಂದುವುದಿಲ್ಲ. ಈ ಯೋಗದಲ್ಲಿ ಆತ್ಮವು (ಜೀವಾತ್ಮ) ನಿಮ್ನ ಪ್ರಕೃತಿಯ ಹಿಡಿತದಿಂದ ಬಿಡುಗಡೆ ಹೊಂದುವುದು. ತನ್ನ ನಿರ್ವೈಯಕ್ತಿಕ ಹಾಗೂ ನಿರ್ವಿಕಾರ ಆತ್ಮ ಸತ್ತೆಯ ಮೂಲಕ ಪಾರಾಗುವುದು. ಆದರೆ ಅದು ಕ್ರಿಯಾ ವಿಮುಖವಾಗಿ ಬಿಡುವುದಿಲ್ಲ. ಅಪರಾ ಪ್ರಕೃತಿಯಲ್ಲಿ ಇರುವ ಎಲ್ಲ ಇತರ ಸತ್ತೆಗಳ (ಜೀವಗಳ) ಕ್ರಿಯಾ ಚಟುವಟಿಕೆಗಳಿಗೆ ಮುಖ ತಿರುವಿ ಬಿಡುವುದಿಲ್ಲ. ಅತಿರೇಕದ ಶಾಂತ ಸ್ಥಿತಿಗೆ ಈ ಪರಮೇಶ್ವರನಿಗೆ ಸಮರ್ಪಣೆ ಮಾಡಬೇಕೆಂಬ ಭಾವದ ಉಪಕ್ರಮವನ್ನು ಜೋಡಿಸದೇ ಹೋದರೆ, ಯಾವ ಕ್ರಿಯೆಗಳಿಗೂ ನಮ್ಮ ಸಂಬಂಧವನ್ನು ಹೇಳಲು ಸಾಧ್ಯವಾಗುವುದಿಲ್ಲ. ಏನೋ ತ್ರಿಗುಣಗಳ ಆಟ ತನ್ನಷ್ಟಕ್ಕೆ

ತಾನೇ ಮುಂದುವರಿದಿದೆ, ಅದರಲ್ಲೇನೂ ದೈವೀ ಸತ್ವ ಇಲ್ಲ ಎಂದು ಹೇಳಿದಂತಾಗುವುದು. ನಮ್ಮ ಅಹಮಿಕೆಯ ಕೊನೆಯ ಬಡಿದಾಟ ಅಥವಾ ನಿಮ್ನ ಪ್ರಕೃತಿಯ ಪ್ರಭಾವದ ಅವಶೇಷ ಎಂದು ಹೇಳಿದಂತಾಗುವುದು. ನಮ್ಮ ಜ್ಞಾನ (ಯೋಗ)ವು ಅದನ್ನು ನಿರಾಕರಿಸುವುದು ಮತ್ತು ಅದರಿಂದ ಮುಕ್ತವಾಗಿ ನಿಶ್ಚಲ ಶಾಂತಿ ಅಥವಾ ನಿಷ್ಕ್ರೀಯ ಬ್ರಾಹ್ಮೀ ಸ್ಥಿತಿಯನ್ನು ಹೊಂದುವುದನ್ನು ಮಾತ್ರ ಪುರಸ್ಕರಿಸುವುದರಿಂದ ನಾವು ಆ ಕ್ರಿಯೆಗಳಿಗೆ ಬಾಧ್ಯಸ್ಥರಲ್ಲ. ನಮಗೂ ಅವುಗಳಿಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳಿದಂತಾಗುವುದು. ಆದರೆ ನಿಶ್ಚಲ ಪ್ರಶಾಂತ ಸ್ಥಿತಿಯ ಜೊತೆ ಪ್ರಕೃತಿಯ ಚಟುವಟಿಕೆ, ಕ್ರಿಯಾ ಅವಶ್ಯಕತೆಯ ಒತ್ತಡವನ್ನು ಜೋಡಿಸಿದರೆ, ಎಲ್ಲ ಕ್ರಿಯೆ, ಕಾರ್ಯ, ಚಲನೆ, ಚಟುವಟಿಕೆಗಳನ್ನು ಪರಮಾತ್ಮನಿಗೆ ಸಮರ್ಪಿಸಬಹುದಾದ ಯಜ್ಞವೆಂದು ಭಾವಿಸಿದರೆ, ಇಂಥ ದ್ವಿಗುಣ ಬೀಗದ ಕೈ ಮೂಲಕ ನಿಮ್ನ ಅಹಂ ಪ್ರಕೃತಿಯ ಚಲನೆಯಿಂದ ಪಾರಾಗಿ ನಮ್ಮ ನೈಜ ಆಧ್ಯಾತ್ಮಿಕ ವ್ಯಕ್ತಿತ್ವದಲ್ಲಿ ಬೆಳೆಯಲು ಸುಲಭವಾಗಿ ಸಾಧ್ಯವಾಗುವುದು. ಆಗ ನಾವು ನಿಮ್ನ ಪ್ರಕೃತಿಯ ಅವಿದ್ಯಾ ಜನ್ಯ ಅಹಂದಿಂದ ಬಂಧಿತರಾಗಿರುವುದಿಲ್ಲ, ಬದಲಾಗಿ ಪರಾಪ್ರಕೃತಿ ಸ್ಥಿತ ಜೀವ(ಜೀವಾತ್ಮ)ರಾಗಿರುತ್ತೇವೆ. ನಿರ್ವಿಕಾರ ಹಾಗೂ ನಿರ್ವೈಯಕ್ತಿಕ ಆತ್ಮ ಬೇರೆ ಮತ್ತು ವಿಕಾರ ಹೊಂದುವ ವೈಯಕ್ತಿಕ ಪ್ರಕೃತಿ ಬೇರೆ ಎಂಬ ದ್ವಿಧಾ ಭಾವ ನಾಶ ಹೊಂದಿರುವುದರಿಂದ ಪುರುಷೋತ್ತಮನು ಏಕಕಾಲಕ್ಕೆ ಈ ಎರಡೂ ಸ್ಥಿತಿಗಳನ್ನು, ಶಕ್ತಿಗಳನ್ನು ಹೊಂದಿದ್ದಾನೆ ಮತ್ತು ಎರಡನ್ನೂ ಸಮಾನವಾಗಿ ಏಕಕಾಲಕ್ಕೆ ಅಪ್ಪಿಕೊಂಡಿದ್ದಾನೆ, ಅಭಿವ್ಯಕ್ತಗೊಳಿಸುತ್ತಾನೆ ಎಂಬ ಜ್ಞಾನವು ದೃಢವಾಗುತ್ತದೆ. ಕ್ಷರ, ಅಕ್ಷರ ಮತ್ತು ಪುರುಷೋತ್ತಮ (ಅಥವಾ ವೈಯಕ್ತಿಕ, ವಿಶ್ವಾತ್ಮಕ ಮತ್ತು ವಿಶ್ವಾತೀತ) ಈ ಮೂರೂ ಸ್ಥಿತಿಗಳು ಆತ್ಮ ಚೈತನ್ಯವೇ; ವ್ಯಕ್ತಿ ಮತ್ತು ವಿಶ್ವ ಎರಡೂ ಕೇವಲ ತೋರಿಕೆಯ ವೈರುಧ್ಯಗಳಾಗಿದ್ದು ಇವೆರಡೂ ಪುರುಷೋತ್ತಮನ ಸಮ್ಮುಖದಲ್ಲಿರುವ ವಿಪರೀತ ಮುಖಗಳಾಗಿವೆ (ಅಥವಾ ವಿಭಿನ್ನ ಆಯಾಮಗಳಾಗಿವೆ) "ಈ ಲೋಕದಲ್ಲಿ ಎರಡು ಪ್ರಕಾರದ ಪುರುಷರಿದ್ದಾರೆ. ಕ್ಷರ ಮತ್ತು ಅಕ್ಷರ; ಕ್ಷರ ಅಂದರೆ ನಾಶ ಹೊಂದುವ ಹಾಗೂ ಅಕ್ಷರ ಅಂದರೆ ನಾಶ ಹೊಂದದಿರುವ ವಿಶ್ವಾತ್ಮಕ ಪುರುಷ. ಇವೆರಡಕ್ಕಿಂತ ಶ್ರೇಷ್ಠನಾದ, ಉಚ್ಚನಾದ ಮತ್ತು ಉತ್ತಮನಾದ ಪುರುಷನಿದ್ದಾನೆ. ಅವನೇ ಪುರುಷೋತ್ತಮ" ಪುರುಷೋತ್ತಮನಾದ ನಾನೇ ಈ ಲೋಕದಲ್ಲಿ ಪ್ರವೇಶಿಸಿ ಈ ಲೋಕವನ್ನು ಭರಿಸಿದ್ದೇನೆ. ನಾನು ಇವೆರಡರಿಂದಲೂ ಭಿನ್ನ, ಇವೆರಡಕ್ಕಿಂತ ಶ್ರೇಷ್ಠ ಮತ್ತು ಉತ್ತಮ. "ಯಾರು ನನ್ನನ್ನು ಪುರುಷೋತ್ತಮನೆಂದು ತಿಳಿದು ಆರಾಧಿಸುವುರೋ (ಯಾರಿಗೆ ನನ್ನಲ್ಲಿ ಆ ತೆರನಾದ ಭಕ್ತಿ ಇದೆಯೋ) ಅವರು

ಸಂಪೂರ್ಣವಾಗಿ ನನಗೆ ಶರಣಾಗತರಾಗಿರುತ್ತಾರೆ, ಅನನ್ಯ ಭಕ್ತರಾಗಿರುತ್ತಾರೆ" (15/16–19) ಸಮಗ್ರ ಜ್ಞಾನ ಹಾಗೂ ಸಮಗ್ರ ಸಮರ್ಪಣಾ ಭಾವದಿಂದ ಕೂಡಿದ ಭಕ್ತಿಯನ್ನೇ ಗೀತೆಯು ಪುರಸ್ಕರಿಸುತ್ತದೆ.

ಸಾಧಕನು ಭಕ್ತಿ ಮತ್ತು ಜ್ಞಾನ ಎರಡನ್ನೂ ಹೊಂದಿರಬೇಕೆಂದು ಗೀತೆ ಸ್ಪಷ್ಟವಾಗಿ ಹೇಳುತ್ತದೆ. ಉಳಿದಂತೆ ಭಕ್ತಿಯ ಎಲ್ಲ ಪ್ರಕಾರಗಳೂ ಶ್ರೇಷ್ಠವಾಗಿವೆ, ಅವು ತಕ್ಕಮಟ್ಟಿಗೆ ಫಲವನ್ನೂ ಕೊಡುತ್ತವೆ, ಆದರೂ ಅವು ಜ್ಞಾನ ಭಕ್ತಿಯ ಸಂಯೋಗದ ಸಮರ್ಪಣೆಗಿಂತ ಹೆಚ್ಚಲ್ಲ, ಕಡಿಮೆಯೇ. ಅವು ಆತ್ಮದ ಪರಾಕಾಷ್ಠೆಯ ಸಿದ್ಧಿಯನ್ನು ತಂದು ಕೊಡಲಾರವು. ಯಾರು ರಾಜಸಿಕ ಅಹಂಕಾರದ ಪಾಪ ಕೃತ್ಯಗಳನ್ನು ಸಂಪೂರ್ಣವಾಗಿ ತ್ಯಜಿಸಿ ಪರಮಾತ್ಮನೆಡೆಗೆ ಸಾಗುತ್ತಿರುವುರೋ ಅಂಥವರನ್ನು ಗೀತೆಯು ನಾಲ್ಕು ವರ್ಗಗಳಲ್ಲಿ ವಿಂಗಡಿಸುತ್ತದೆ. ಕೆಲವರು ದುಃಖ, ಯಾತನೆಗಳಿಂದ ಅಹತರಾಗಿ ಆಶ್ರಯ ಬೇಡಿ ಭಗವಂತನ ಬಳಿ ಸಾರುತ್ತಾರೆ. ಅವರನ್ನು "ಆರ್ತರು" ಎಂದು ಗೀತೆ ಕರೆಯುತ್ತದೆ. ಯಾರು ಸಂಪತ್ತು, ಕಲ್ಯಾಣ, ಮಂಗಳ, ಶುಭವನ್ನು ಬಯಸಿ ಬರುತ್ತಾರೋ ಅವರನ್ನು ಅರ್ಥಾರ್ಥಿಗಳು ಎಂದು ಹೇಳುತ್ತದೆ. ಯಾರು ಜ್ಞಾನವನ್ನರಸಿ ಭಗವಂತನ ಬಳಿಸಾಗುವರೋ ಅವರು ಜಿಜ್ಞಾಸುಗಳು. ಕೊನೆಯದಾಗಿ ಕೆಲವರು ಜ್ಞಾನದಿಂದ ಭಗವಂತನನ್ನು ಆರಾಧಿಸುತ್ತಾರೆ. ಅವರು ಜ್ಞಾನಿಗಳು. ಎಲ್ಲ ಪ್ರಕಾರದ ಭಕ್ತರನ್ನೂ ಗೀತೆ ಸನ್ಮಾನಿಸುತ್ತದೆ, ಗೌರವಿಸುತ್ತದೆ, ಆದರೆ ಕೊನೆಯ ಜ್ಞಾನಿಯನ್ನೇ ಪರಿಪೂರ್ಣನೆಂದು ಗಟ್ಟಿಯಾಗಿ ಹೇಳುತ್ತದೆ. "ಉದಾರಾಃ ಸರ್ವ ಏವೈತೇ" (7/17) ಭಕ್ತಿಯ ಎಲ್ಲ ಪ್ರಕಾರಗಳೂ ಚಲನೆಗಳೂ ಶ್ರೇಷ್ಠವಾಗಿವೆ, ಆದರೆ ಜ್ಞಾನದಿಂದ ಕೂಡಿದ ಭಕ್ತಿಯು ವಿಶಿಷ್ಟವಾಗಿದೆ, 'ವಿಶಿಷ್ಯತೇ' (7/17). ಇವು ನಾಲ್ಕನ್ನೂ ಕ್ರಮವಾಗಿ ಹೀಗೆ ವಿವರಿಸಬಹುದು. ಮೊದಲನೆಯದು (ಆರ್ತ) ಪ್ರಾಣಿಕ, ಭಾವನಾತ್ಮಕ ಮತ್ತು ತುರ್ತು ಪರಿಣಾಮವನ್ನು ಬಯಸುವಂಥದಾಗಿದೆ,* ಎರಡನೇಯದು (ಅರ್ಥಾರ್ಥಿ) ವ್ಯಾವಹಾರಿಕ ಮತ್ತು ಕ್ರಿಯಾಶೀಲ ಸ್ವಭಾವದ್ದಾಗಿದೆ; ಮೂರನೇಯದು (ಜಿಜ್ಞಾಸು) ತಾರ್ಕಿಕ, ಬೌದ್ಧಿಕ ಸ್ವಭಾವದ್ದಾಗಿದ್ದರೆ ನಾಲ್ಕನೇಯದು (ಜ್ಞಾನಿ) ಅಂತರ್ಭೋಧೆ. ಅಂತ ಜ್ಞಾನ ಸತ್ವವುಳ್ಳದ್ದಾಗಿದ್ದು ವ್ಯಕ್ತಿತ್ವದ ಉಳಿದೆಲ್ಲ ಘಟಕಗಳನ್ನು ಪರಮಾತ್ಮನ ಏಕತೆಗೆ ಎತ್ತರಿಸುವಲ್ಲಿ ಸಫಲವಾಗಿದೆ. ವ್ಯಾವಹಾರಿಕವಾಗಿ ಉಳಿದವುಗಳನ್ನು ಪೂರ್ವ ತಯಾರಿ ಎಂದು ಭಾವಿಸಲು ಅಡ್ಡಿಯಿಲ್ಲ. ಏಕೆಂದರೆ ಗೀತೆಯು ಸ್ಪಷ್ಟವಾಗಿ ಹೇಳುವುದೇನೆಂದರೆ, ಅನೇಕಾನೇಕ ಜನ್ಮಗಳ ನಂತರ, ಸಮಗ್ರ ಜ್ಞಾನವನ್ನು ಪಡೆದು,

ಅದನ್ನು ಜೀವನದಲ್ಲಿ ಅಳವಡಿಸಿಕೊಂಡು, ಜನ್ಮಾಂತರದಲ್ಲಿ ಪರಾತ್ಪರನನ್ನು ಪಡೆಯುವನು – ಭಗವಂತನೇ ಸಮಗ್ರ ವಿಶ್ವದ ಚರಾಚರ ಜೀವಿಗಳಲ್ಲಿದ್ದಾನೆ, ಎಲ್ಲವೂ ಅವನೇ ಎಂಬ ಜ್ಞಾನ ಪಡೆಯುವುದು ಸುಲಭವಲ್ಲ. ಅಂಥ ಜ್ಞಾನವುಳ್ಳ ಸಾಧಕನನ್ನೇ 'ಮಹಾತ್ಮ' ಎಂದು ಕರೆಯುವುದು. ಅಂಥ ವ್ಯಕ್ತಿ ಭೂಮಿಯ ಮೇಲೆ ವಿರಳ – ಎಲ್ಲದರಲ್ಲೂ ಭಗವಂತನನ್ನೇ ಕಾಣುತ್ತ, ಅವನ ಸಾನಿಧ್ಯವನ್ನೇ ಅನುಭವಿಸುತ್ತ, ಅವನ ಏಕತೆಯಲ್ಲಿಯೇ ಪ್ರವೇಶ ಮಾಡಿ, ತಾದಾತ್ಮ್ಯ ಹೊಂದಿ, ಸರ್ವಜ್ಞತ್ವವನ್ನು ಪಡೆಯುವುದು ದುರ್ಲಭ. ಸರ್ವವಿದ್ ಸರ್ವಭಾವೇನ (17/9).

ಭಗವಂತನನ್ನು ಕೇವಲ ಪ್ರಾಪಂಚಿಕ ವರದಾನಗಳಿಗಾಗಿ ಅರ್ಚಿಸುವ, ಆರಾಧಿಸುವ ಹಾಗೂ ಕೇವಲ ದುಃಖ ನಿವಾರಣೆಗಾಗಿ, ಯಾತನೆಯಿಂದ ಬಿಡುಗಡೆಗಾಗಿ ಪ್ರಾರ್ಥಿಸುವ, ಪರಮಾತ್ಮನನ್ನು ಪರಮಾತ್ಮನಿಗಾಗಿಯೇ ಆರಾಧಿಸದಿರುವ 'ಭಕ್ತಿಯನ್ನು' ಶ್ರೇಷ್ಠ, ಉನ್ನತ, ಉದಾರ ಎಂದು ಹೇಗೆ ಹೇಳುವುದು? ಇಲ್ಲಿ ಕಂಡುಬರುವ ಅಹಂಭಾವ, ದೌರ್ಬಲ್ಯ, ಮುಂತಾದ ವಿಕೃತಿಗಳು ಸೇರಿದಾಗ ಅವೆಲ್ಲವೂ ನಿಮ್ನ ಪ್ರಕೃತಿಯಿಂದ ಮೇಲೆ ಹೇಗೆ ಏರಲು ಸಾಧ್ಯ? ಅಲ್ಲದೇ, ಎಲ್ಲಿ ಸಮ್ಯಕ್ ಜ್ಞಾನವಿಲ್ಲವೋ ಅಲ್ಲಿ ಸಾಧಕನು ಸಮಗ್ರವಾದ ರೀತಿಯಲ್ಲಿ ಸಮಗ್ರ ಸರ್ವ ಸಮಾವೇಶಕ ಭಕ್ತಿಯಿಂದ ಭಗವಂತನ ಬಳಿ ಹೇಗೆ ಸಾಗಬಲ್ಲನು? ಎಂಬ ಪ್ರಶ್ನೆ ಸಹಜವಾಗಿ ಬಂದೇ ಬರುತ್ತದೆ. ಇದರಿಂದ ಮಾನವನು ತನ್ನದೇ ಆದ ರೀತಿಯಲ್ಲಿ, ತನಗೆ ಇಷ್ಟವಾದ ನಾಮ ರೂಪಗಳನ್ನು ನೀಡಿ ಅಪರಿಪೂರ್ಣವಾದ ರೀತಿಯಲ್ಲಿ ಆರಾಧಿಸಿದಂತಾಗುವುದಿಲ್ಲವೇ? ಅವೆಲ್ಲವೂ ಅವನದೇ ಆದ ಮಾನಸಿಕ, ಭಾವನಾತ್ಮಕ ಕಲ್ಪನೆ ಅಲ್ಲವೇ? ತನ್ನ ಅಗತ್ಯಗಳು, ತನ್ನ ಸ್ವಭಾವ, ತನ್ನ ಪ್ರಕೃತಿಗನುಗುಣವಾಗಿ ತಾನೇ ಮಾಡಿಕೊಂಡ ದೇವರನ್ನು ತನ್ನ ಸಹಜ ಬಯಕೆಗಳ ಪೂರ್ತಿಗಾಗಿ ಆರಾಧಿಸಿದಂತಾಗುವುದಿಲ್ಲವೇ? ಅವನು ತಾನು ಕಲ್ಪಿಸಿದ ದೇವರುಗಳಿಗೆ ಇಂದ್ರ, ವರುಣ, ಅಗ್ನಿ, ವಿಷ್ಣು, ಶಿವ, ಏಸೂ ಕ್ರಿಸ್ತ, ಬುದ್ಧ ಅಥವಾ ಇಂಥದೇ ದೇವತೆಗಳ ಯಮಳ ಸ್ವರೂಪವನ್ನು ಆರಾಧಿಸುವುನು. ತನ್ನದೇ ಆದ ವೈಯಕ್ತಿಕ ಇಷ್ಟ ದೇವತೆ, ಪ್ರೇಮ, ನ್ಯಾಯ, ಕರುಣೆ, ಶಿಷ್ಟ ರಕ್ಷಕ ಹಾಗೂ ದುಷ್ಟ ಶಿಕ್ಷಕ ಇಂಥವೆಲ್ಲ ಗುಣಗಳಿಂದ ಕೂಡಿದ ದೇವರನ್ನು ಆರಾಧಿಸುತ್ತಾನೆ. ಇಂಥ ದೇವರನ್ನು ಆತ ತನ್ನ ಹೃದಯದೊಳಗೂ ಪೂಜಿಸುತ್ತಾನೆ, ಬಾಹ್ಯದಲ್ಲಿ ದೊಡ್ಡ ದೊಡ್ಡ ಮೂರ್ತಿ ಸ್ಥಾಪಿಸಿ ಸಾಮೂಹಿಕವಾಗಿಯೂ ಪೂಜಿಸುತ್ತಾನೆ, ತನ್ನ ಹೃನ್ಮನಗಳಿಂದ ಆರಾಧಿಸುತ್ತಾನೆ, ಬೇಡಿಕೊಳ್ಳುತ್ತಾನೆ, ತನ್ನ ಐಹಿಕ ಭೋಗಭಾಗ್ಯಗಳ ಪೂರೈಕೆಗಾಗಿ ಪ್ರಾರ್ಥನೆ ಸಲ್ಲಿಸುತ್ತಾನೆ. ರೋಗ ಬಾಧೆಗಳಿಂದ ಮುಕ್ತಿಗಾಗಿ, ದುಃಖ

ನಿವೃತ್ತಿಗಾಗಿ, ಬೌದ್ಧಿಕ ಜ್ಞಾನ ವೃದ್ಧಿಗಾಗಿ, ಕೆಲಸಲ ವಾಮ ಮಾರ್ಗದ ಕುತಂತ್ರ ಬುದ್ಧಿಗಾಗಿ ಕೂಡ ಆರಾಧನೆ ಮಾಡುತ್ತಾನೆ. ಇದೆಲ್ಲ ಒಂದು ಹಂತದವರೆಗೆ ಒಳ್ಳೆಯದೇ. ಎಲ್ಲೋ ಕೆಲವರಿಗೆ ಮಾತ್ರ ಆ ಭಗವಂತನೇ ಸರ್ವಸ್ವ, ಸರ್ವಾಂತರ್ಯಾಮಿಯಾಗಿರುವ ಆ ವಾಸುದೇವನೇ ಸಕಲವೂ ಎಂದು ಅರಿವಾಗುತ್ತದೆ. ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ (7/19) ಅಂಥ ಪುಣ್ಯಾತ್ಮರು ವಿರಳ – ಸಾಮಾನ್ಯವಾಗಿ ಮಾನವರು ಅನೇಕ ವಿಧ ಆಶೆ, ಆಮಿಷಗಳಿಗೆ ಬಲಿಯಾಗಿ ಅಡ್ಡದಾರಿ ತುಳಿಯುತ್ತಾರೆ. ಇದರಿಂದಾಗಿ ಅವರ ಆಂತರಿಕ ಜ್ಞಾನ ನಷ್ಟವಾಗುತ್ತದೆ ಕಾಮೈಃ ತೈಃ ತೈಃ ಹೃತ ಜ್ಞಾನಾಃ (7/20). ಅಜ್ಞಾನವಶರಾಗಿ ತಮ್ಮ ತಮ್ಮ ಭಾವನೆಗಳಿಗನುಗುಣವಾಗಿ ಬೇರೆ ಬೇರೆ ದೇವತೆಗಳ, ಭಗವಂತನ ಅಪೂರ್ಣ ರೂಪಗಳ ಆರಾಧನೆ ಮಾಡುತ್ತಾರೆ. 'ಪ್ರಪದ್ಯಂತೇ ಅನ್ಯದೇವತಾಃ' (7/20) ಕೊನೆಗೆ ಸಂಕುಚಿತವಾಗಿ ತಮ್ಮ ತಮ್ಮ ಸ್ವಭಾವಕ್ಕನುಗುಣವಾಗಿ ನಿರ್ದಿಷ್ಟ ನಿಯಮ, ಆಚಾರ, ವಿಧಿ ವಿಧಾನಗಳಿಗೆ ಕಟ್ಟು ಬೀಳುತ್ತಾರೆ. ತಂತಂ ನಿಯಮಮಾಸ್ಥಾಯ (7/20) ಅವರಿಗೆ ತಮ್ಮ ಅಪೂರ್ಣ ದೃಷ್ಟಿಗನುಗುಣವಾಗಿ ತಾವು ಅಂಟಿಕೊಂಡ ವಿಧಿ, ದೇವರೇ ಅಂತಿಮ ಸತ್ಯವೆನಿಸುತ್ತದೆ; ಈಶ್ವರನನ್ನು ಅವನ ಸಮಗ್ರತೆಯ ಹಿನ್ನೆಲೆಯಲ್ಲಿ ನೋಡಬಲ್ಲ ಸಾಮರ್ಥ್ಯ ಅವರಲ್ಲಿ ಇಲ್ಲದಿರುವುದೇ ಇದಕ್ಕೆ ಕಾರಣ. ಅವರ ಶ್ರದ್ಧೆ, ಭಕ್ತಿ ಅನನ್ಯವಾಗಿದ್ದರೆ, ಅವರವರ ಇಷ್ಟ ದೇವರು ಅವರ ಅಗತ್ಯಗಳನ್ನು ಸ್ವಲ್ಪ ಮಟ್ಟಿಗೆ ಪೂರೈಸಬಹುದು, ಫಲಗಳು ಕ್ಷಣಿಕವಾಗಿದ್ದರೂ ಮಾನವ ಅವುಗಳನ್ನೇ ಪರಮ ಶಾಶ್ವತವೆಂದು ಭ್ರಮಿಸಿ ಅವುಗಳ ಬೆನ್ನು ಹತ್ತುತ್ತಾನೆ. ಈ ದಾರಿಯಿಂದ ಲಭಿಸಿದ ಸಿದ್ಧಿಗಳಾಗಲಿ, ಸುಖಭೋಗಗಳಾಗಲಿ ಒಂದು ಹಂತದವರೆಗೆ ಮರ್ಯಾದಿತವಾಗಿರುತ್ತವೆ. ಕ್ಷರ ಪ್ರಕೃತಿಯಲ್ಲಿರುವ ದೇವತೆಯ ಬೇರೆ ಬೇರೆ ರೂಪಗಳನ್ನು ಆರಾಧಿಸುತ್ತ ಪ್ರಾಪಂಚಿಕ ಭೋಗಗಳನ್ನು ನೀಡಬಲ್ಲ ದೇವರನ್ನು ಮಾತ್ರ ನಂಬಿಕೊಂಡಿದ್ದರೆ ಆಧ್ಯಾತ್ಮಿಕ ಪ್ರಗತಿ ಸಾಧ್ಯವಾಗುವುದಿಲ್ಲ. ಕ್ಷರ ಪ್ರಕೃತಿಯಲ್ಲಿ ಇರುವ ಬೇರೆ ಬೇರೆ ರೂಪದ ಈಶ್ವರನನ್ನು ಅವರು ಕಾಣುತ್ತಾರೆ. ಇಚ್ಛಿತ ಫಲದಾಯಕ ಇಷ್ಟ ದೈವವನ್ನು ಕಾಣುತ್ತಾರೆ. ಸರ್ವಾತೀತ ಪೂರ್ಣ ಭಗವಂತನನ್ನು ಅವರು ಕಾಣುವುದಿಲ್ಲ. ಯಾರು ವಿಶ್ವಾತೀತನಾದ, ಸಂಪೂರ್ಣ ಭಗವಂತನನ್ನು ಸದಾ ಆರಾಧಿಸುವುರೋ ಅವರು ಇಡೀ ವಿಶ್ವವನ್ನು, ಅದರ ಒಳ್ಳೆಯ, ಕೆಟ್ಟ ಚಲನೆಯ ಜೊತೆಗೆ ಸ್ವೀಕರಿಸುತ್ತಾರೆ. ನಿಮ್ನ ಸ್ತರವನ್ನು ಪರಿವರ್ತಿಸುವುದರ ಜೊತೆಗೆ ಪ್ರಕೃತಿಯನ್ನು ಔನ್ನತ್ಯಕ್ಕೆತ್ತರಿಸುವ ಪ್ರಯತ್ನ ಮಾಡುತ್ತಾರೆ. ವಿಶ್ವೋತ್ತೀರ್ಣ ಸ್ಥಿತಿಗೆ ಏರಿ ವಿಶ್ವಾತೀತ ಸ್ಥಿತಿಯನ್ನು ಹೊಂದುವ

ಸಾಹಸ ಮಾಡುತ್ತಾರೆ. ದೇವಾನ್ ದೇವೋ ಯಜೋ ಯಾಂತಿ ಮದ್ ಭಕ್ತಾಃ ಯಾಂತಿ ಮಾಮಪಿ (7/23).

ಇಂಥ ಜನರ ಭಕ್ತಿ ಮೂಢವಿರಲಿ, ದರ್ಶನ ಅಪರಿಪೂರ್ಣವಿರಲಿ ಭಗವಂತನು ಅಂಥ ಜನರನ್ನು ಸಹ ಕೈ ಬಿಡುವುದಿಲ್ಲ. ಏಕೆಂದರೆ ಭಗವಂತನು ತನ್ನ ಉಚ್ಚ ಸ್ಥಾಯಿಯಾದ ವಿಶ್ವಾತೀತದಲ್ಲಿ ಅಜಾತನೂ, ಅವಿಕಾರಿಯೂ, ಇವೆಲ್ಲ ಆಂಶಿಕ ಅವತರಣಗಳಿಗಿಂತ ಅತಿ ಶ್ರೇಷ್ಠನೂ ಆಗಿರುವುದರಿಂದ ಅವನನ್ನು ತಿಳಿಯುವುದು ಎಲ್ಲರಿಗೂ ಸುಲಭ ಸಾಧ್ಯವಲ್ಲ. ಅವನು ಅಗಮ್ಯನಲ್ಲದೇ ಹೋದರೂ ಸುಗಮನೂ ಅಲ್ಲ. ಅವನು ತನ್ನನ್ನು ತನ್ನ ಯೋಗ ಮಾಯೆಯಲ್ಲಿ ಬಚ್ಚಿಟ್ಟುಕೊಂಡಿರುತ್ತಾನೆ. ಅದರ ಮೂಲಕ ಅವನು ಜಗತ್ತಿನ ಜೊತೆಗೆ ಒಂದಾಗಿಯೂ ಅದರಿಂದ ಆಚೆಗೂ ಇರುತ್ತಾನೆ. ಪ್ರಪಂಚದ ಎಲ್ಲ ವಸ್ತುಗಳಲ್ಲಿಯೂ ಅವನಿದ್ದಾನೆ, ಆದರೆ ಪ್ರಚ್ಛನ್ನನಾಗಿದ್ದಾನೆ. ಪ್ರತಿಯೊಬ್ಬರ ಹೃದಯದಲ್ಲೂ ಇದ್ದಾನೆ. ಆದರೆ ಎಲ್ಲರಿಗೂ ಪ್ರಕಟವಾಗಿ ಕಾಣುವುದಿಲ್ಲ. ತಿಳಿಯದಂತೆ ಇದ್ದಾನೆ. ಪ್ರಕೃತಿಯಲ್ಲಿ ಇರುವ ಎಲ್ಲ ವಸ್ತುಗಳೂ ಆ ಭಗವಂತನ ಪ್ರಕಟನೆಗಳೇ ಎಂಬುದು ಮಾನವನಿಗೆ ಗೊತ್ತಿದೆ. ಆದರೆ ಅವೆಲ್ಲವೂ ಅವನ ಕಾರ್ಯಗಳು, ಅವನ ಶಕ್ತಿ ಅವನನ್ನು ಮರೆಮಾಡಿರುವ ಪರದೆಗಳೂ ಸಹ ಹೌದು. ಭಗವಂತನಿಗೆ ವಿಶ್ವದ ಭೂತ, ವರ್ತಮಾನ, ಭವಿಷ್ಯ ಎಲ್ಲವೂ ಗೊತ್ತು, ಆದರೆ ಅವನ ಬಗ್ಗೆ ಯಾರಿಗೂ ಗೊತ್ತಿಲ್ಲ. ಆದರೆ ಹೀಗೆಯೇ ಮುಂದುವರಿದರೆ, ಪ್ರಕೃತಿಯಲ್ಲಿ ತನ್ನ ನಾನಾ ವಿಧ ಕಾರ್ಯಗಳ ಮೂಲಕ ಮಾನವನನ್ನು ಭ್ರಮಿತಗೊಳಿಸುತ್ತ, ಯಾವ ಜೀವಿ ಅಥವಾ ವಸ್ತುಗಳಲ್ಲಿಯೂ ತಾನು ಪ್ರಕಟನಾಗದೇ ಹೋದರೆ, ಮಾಯೆಯಲ್ಲಿ ಸಿಲುಕಿರುವ ಜೀವಿಗೆ ಆ ಭಗವಂತನನ್ನು ಕಾಣುವ, ಸಾಕ್ಷಾತ್ಕರಿಸಿಕೊಳ್ಳುವ ಯಾವ ಆಶೆಯೂ ಇರದು. ಆದ್ದರಿಂದ ಯಾರು ಯಾವ ವಿಧದಿಂದಲೇ ಆಗಲಿ, ತಮ್ಮ ತಮ್ಮ ಪ್ರಕೃತಿಗನುಗುಣವಾಗಿ ಅವನನ್ನು ಸಮೀಪಿಸಿದರೆ ಭಗವಂತನು ಅವರ ಭಕ್ತಿಯನ್ನು ಸ್ವೀಕರಿಸುತ್ತಾನೆ ಮತ್ತು ಅವರ ಪ್ರಾರ್ಥನೆಗೆ ಓಗೊಡುತ್ತಾನೆ. ಭಗವಂತನ ವಿವಿಧ ಆಕಾರಗಳೆಲ್ಲವೂ ಅವನ ಅಪರಿಪೂರ್ಣ ಅವತರಣಗಳೇ, ಪ್ರಕಟಣೆಗಳೇ, ಅವುಗಳ ಮೂಲಕವೇ ಅಪರಿಪೂರ್ಣನಾದ ಮಾನವನು ಭಗವಂತನನ್ನು ಸ್ಪರ್ಶಿಸಬಲ್ಲನು. ನಮ್ಮ ಬಯಕೆಗಳ ಮೂಲಕವೇ ನಾವು ಮೊದಲು ಅವನನ್ನು ಸಮೀಪಿಸುತ್ತೇವೆ; ಹೀಗಾಗಿ ಯಾವ ಅರ್ಚನೆ, ಆರಾಧನೆಯೂ ಅಸಾಧು, ಅಯೋಗ್ಯ ಅಥವಾ ನಿಷ್ಫಲವಲ್ಲ. ಎಲ್ಲವುಗಳಿಗೂ ಅವುಗಳದೇ ಆದ ಮಿತಿ ಇರಬಹುದು, ಆದರೆ ಯಾವುವೂ ನಿಷ್ಫಲವಲ್ಲ. ಮುಖ್ಯವಾಗಿರಬೇಕಾದ ಅವಶ್ಯ ಸಂಗತಿ ಏನೆಂದರೆ, ನಂಬಿಕೆ – ಶ್ರದ್ಧೆ.

"ಯಾರು ಯಾರು ಯಾವ ಯಾವ ರೂಪದಲ್ಲಿ ದೇವತೆಗಳನ್ನು (ಭಗವಂತನನ್ನು) ಶ್ರದ್ಧೆಯಿಂದ ಆರಾಧಿಸುತ್ತಾರೋ ಅವರವರಿಗೆ ಆಯಾ ದೇವತೆಯಲ್ಲಿಯೇ ಸ್ಥಿರವಾದ ಶ್ರದ್ಧೆ ಉಂಟಾಗುವಂತೆ ನಾನು ಮಾಡುತ್ತೇನೆ" (7/21) ಅವರ ಶ್ರದ್ಧೆಯ ಬಲದಿಂದ ಅವರ ಧರ್ಮ, ಪಂಥ, ಆರಾಧನೆಯ ಮೂಲಕವೇ ಅವರಿಗೆ ಅವರ ಇಚ್ಛೆಗಳ ಪೂರ್ತಿಯ ಜೊತೆಗೆ ಆಧ್ಯಾತ್ಮಿಕ ಸಾಕ್ಷಾತ್ಕಾರವು ಅವರ ಆಯಾ ಸಮಯಕ್ಕೆ ತಕ್ಕಂತೆ ಆಗುವ ಹಾಗೆ ನಾನೇ ಏರ್ಪಾಡು ಮಾಡುತ್ತೇನೆ ಎಂದು ಕೃಷ್ಣನೇ ಹೇಳುತ್ತಾನೆ. ಮೊದಮೊದಲು ತನ್ನ ಬಯಕೆ, ತನ್ನ ಇಷ್ಟಾರ್ಥ, ಕಲ್ಯಾಣಕ್ಕಾಗಿ ಭಗವಂತನನ್ನು ಸಮೀಪಿಸಿದರೂ ಕೊನೆಗೆ ಮಾತ್ರ ಅವನ ಎಲ್ಲ ಇಷ್ಟಾರ್ಥಗಳ ಜೊತೆಗೆ ದೈವೀ ಕಲ್ಯಾಣವೂ ಪ್ರಾಪ್ತವಾಗುವುದು. ತನ್ನ ಸುಖ ಸಂತೋಷಗಳಿಗಾಗಿ ಭಗವಂತನನ್ನು ಆಶ್ರಯಿಸುವುದರ ಮೂಲಕ ಮಾನವನು ತನ್ನೆಲ್ಲ ಸುಖ ಸಂತೋಷಗಳಲ್ಲಿ ಭಗವಂತನನ್ನೇ ಕಾಣಲು ಆರಂಭಿಸುತ್ತಾನೆ. ಪರಮಾತ್ಮನನ್ನು ಸುಗುಣ – ಸಾಕಾರನನ್ನಾಗಿ ಆರಾಧಿಸುವುದರ ಮೂಲಕ ಅವನೇ ಸರ್ವಸ್ವ, ಅವನು ಪರಾತ್ಪರ, ಅವನೇ ಸಕಲ ಸೃಷ್ಟಿಯ ಮೂಲ ಎಂಬ ಜ್ಞಾನವಾಗುತ್ತದೆ.**

ಈ ರೀತಿ ಆಧ್ಯಾತ್ಮಿಕ ಬೆಳವಣಿಗೆಯೊಂದಿಗೆ ಭಕ್ತಿಯು ಜ್ಞಾನದ ಜೊತೆ ಒಂದಾಗಿ ಬಿಡುವುದು. ಜೀವನು ಏಕೈಕ ಪರಮಾತ್ಮನಲ್ಲಿ ಆನಂದ ಕಂಡುಕೊಳ್ಳುವುನು – ಪರಮೇಶ್ವರನಲ್ಲಿ ಎಲ್ಲವೂ ಇದೆ, ಅವನೇ ಎಲ್ಲವೂ ಆಗಿದ್ದಾನೆ. ಎಲ್ಲ ವಸ್ತು, ಘಟನೆ, ಸಂಗತಿ, ಪ್ರಕೃತಿಯಲ್ಲಿ ಏನೆಲ್ಲ ಇದೆಯೋ, ಏನೆಲ್ಲ ನಡೆಯುವುದೋ ಅದೆಲ್ಲವೂ ಅವನೇ ಆಗಿದ್ದಾನೆ. ಆತ್ಮದಾಳದಲ್ಲೂ ಇದರ ಅರಿವಿದೆ, ಆತ್ಮ ಮತ್ತು ಪ್ರಕೃತಿಯನ್ನು ಮೀರಿ ಆಚೆಗೂ ಇದ್ದಾನೆ ಎಂಬುದು ಅರಿವಾಗುತ್ತದೆ. ಒಟ್ಟಾರೆ ಪೂರ್ಣ ಸತ್ ಚಿತ್ ಆನಂದನು ಅವನೇ ಎಂಬ ಸಾಕ್ಷಾತ್ಕಾರವಾಗುತ್ತದೆ. ಅವನು ಸದಾ ಪರಮೇಶ್ವರನ ಜೊತೆ ಸಂಲಗ್ನವಾಗಿದ್ದಾನೆ "ನಿತ್ಯಯುಕ್ತ" ಎಂಬ ಸತ್ಯದ ಅರಿವಾಗುತ್ತದೆ. ಅವನ ಇಡೀ ಜೀವನ ಮತ್ತು ಪೂರ್ಣ ಅಸ್ತಿತ್ವವು ಒಂದು ಶಾಶ್ವತವಾದ ಯೋಗವಾಗುವುದು. ಎಲ್ಲದಕ್ಕಿಂತ ಪರಮೋಚ್ಚ ಸ್ಥಿತಿಯಿಂದ ಪರಾತ್ಪರ ವಿಶ್ವಾತೀತ ಪುರುಷನೊಂದಿಗೆ ಏಕತೆ ಸಿದ್ಧಿಸುವುದು. ಆ ಪರಾತ್ಪರನಲ್ಲಿಯೇ ಭಕ್ತಿ – ಪ್ರೇಮಗಳು ಸಂಲಗ್ನವಾಗುವುವು. ಅವನ ಮೇಲೆಯೇ ಎಲ್ಲ ಭಕ್ತಿ, ಪ್ರೇಮಗಳು ಏಕತ್ರಿತ "ಏಕಭಕ್ತಿಃ" ಯಾವ ವೈಯಕ್ತಿಕ ಅಥವಾ ಅಂಶಾವತಾರದ ಮೇಲಲ್ಲ ಧರ್ಮ, ಜಾತಿ, ಪಂಥಗಳ ಮೇಲಲ್ಲ ಈ ಪರಾತ್ಪರನಲ್ಲಿಯೇ ಭಕ್ತಿ ಕೇಂದ್ರಿತವಾಗುವುದು. ಓರ್ವನೇ ದೇವರು, ಪರಾತ್ಪರನಲ್ಲಿ ಮಾತ್ರವೇ ಭಕ್ತಿ ಮಾಡುವುದು ಅವನ ಜೀವನವಾಗಿ

ಬಿಡುವುದು. ಧರ್ಮ, ಮತ, ಪಂಥ, ಸಿದ್ಧಾಂತ ಎಲ್ಲವನ್ನು ಮೀರಿ ಅವನು ಪರಾತ್ಪರನನ್ನು ಆರಾಧಿಸುವುನು. ಅವನಿಗೆ ಬೇರೆ ಯಾವ, ಆಶೆ, ಆಕಾಂಕ್ಷೆ, ವ್ಯವಹಾರ, ವೈಯಕ್ತಿಕ ಬಯಕೆ ಏನೂ ಇಲ್ಲ. ಜೀವನದಲ್ಲಿ ಬೇರಾವ ಬಯಕೆಯೂ ಇಲ್ಲ. ಅವನಿಗೆ ಯಾವ ಬಾಧೆಯೂ ಇಲ್ಲ, ದುಃಖ ಇಲ್ಲ, ಯಾತನೆ ಇಲ್ಲ, ಏಕೆಂದರೆ ಅವನು ಸರ್ವಾನಂದಮಯನಾದ ಭಗವಂತನನ್ನೇ ಹೊಂದಿರುತ್ತಾನೆ. ಅವನ ಜೀವನ ಕೃತಾರ್ಥತೆ ಅನುಭವಿಸುತ್ತದೆ. ಸರ್ವಶಕ್ತನಾದ ಸರ್ವವ್ಯಾಪಿಯಾದ ಪರಮೇಶ್ವರ ತನ್ನ ಬಳಿ ಇದ್ದಾನೆ ಎಂಬ ದೃಢ ಭಾವ ಅವನಲ್ಲಿರುತ್ತದೆ. ಅವನು ಪರಮಾತ್ಮನ ಪರಿಪೂರ್ಣ ಪ್ರಿಯಕರನಾಗಿರುತ್ತಾನೆ. ಭಗವಂತನಲ್ಲಿ ಅವನು ಆನಂದ ಕಾಣುವಂತೆ ಭಗವಂತನೂ ಅವನಲ್ಲಿ ಆನಂದ ಕಾಣುತ್ತಾನೆ. ಅಂಥ ಸಾಧಕನು ಭಕ್ತನೂ ಹೌದು ಜ್ಞಾನಿಯೂ ಹೌದು, ಅವನು ಜ್ಞಾನಿ–ಭಕ್ತ. ಇಂಥ "ಜ್ಞಾನಿಭಕ್ತನು" ನನ್ನ ಆತ್ಮ ಎಂದು ಗೀತೆಯಲ್ಲಿ ಪುರುಷೋತ್ತಮ ಕೃಷ್ಣ ಹೇಳುತ್ತಾನೆ (7/18) ಉಳಿದವರು ಪ್ರಕೃತಿಯಲ್ಲಿನ ಕೆಲ ಭಾವ ರೂಪಗಳನ್ನು ಮಾತ್ರ ಗ್ರಹಿಸುತ್ತಾರೆ. ಕೆಲ ಆಂಶಿಕ ಶಕ್ತಿಗಳನ್ನು ಮಾತ್ರ ಗ್ರಹಿಸುತ್ತಾರೆ. ಆದರೆ ಜ್ಞಾನಿ ಭಕ್ತನು ಮಾತ್ರ ಪುರುಷೋತ್ತಮನ ಜೊತೆ ಏಕರೂಪನಾಗಿ ಅವನನ್ನೇ ಹೊಂದುತ್ತಾನೆ. ಪರಾ ಪ್ರಕೃತಿಯಲ್ಲಿ ಅವನದು ದಿವ್ಯ ಜನ್ಮ, ಸತ್ತೆಯಲ್ಲಿ ಸಮಗ್ರ. ಸಂಕಲ್ಪದಲ್ಲಿ ಪೂರ್ಣ ರೂಪ, ಪ್ರೇಮದಲ್ಲಿ ಅನನ್ಯ, ಜ್ಞಾನದಲ್ಲಿ ಪರಿಪೂರ್ಣನಾಗಿರುತ್ತಾನೆ. ಅವನಲ್ಲಿ ವಿಶ್ವ ಜೀವನದ ಸಾರ್ಥಕತೆ ಎದ್ದು ಕಾಣುತ್ತದೆ. ಏಕೆಂದರೆ ಜೀವವು ತನ್ನನ್ನೂ ಮೀರಿ ಮೇಲೆ ಹೋಗಿ ತನ್ನದೇ ಆದ ಪರಮೋಚ್ಚ ಸತ್ಯ ಸ್ವರೂಪವನ್ನು ಹೊಂದಿರುತ್ತದೆ.

---

* ಆನಂತರ ಇತ್ತೀಚಿಗೆ ಮೂಡಿಬಂದ ಅತಿಶಯ ಪ್ರೇಮ ಭಕ್ತಿಯು ಅಂತರಾತ್ಮಿಕ–ವಾಗಿದೆ. ಕೆಳಹಂತದಲ್ಲಿ ಅದು ಪ್ರಾಣಿಕ – ಭಾವನಾಪರವಾಗಿದೆ ಮತ್ತು ಬಾಹ್ಯತ ಕೂಡ ಅದೇ ರೀತಿ ಅಂದರೆ ಪ್ರಾಣಿಕ ಮತ್ತು ಭಾವನಾತ್ಮಕವಾಗಿ ತೋರುವುದು ನಿಜವೇ.

** ಪರಮೋಚ್ಚ ಸಿದ್ಧಿಯ ನಂತರವೂ ಸಹ ಆರ್ತ, ಅರ್ಥಾರ್ಥಿ, ಜಿಜ್ಞಾಸು, ಭಕ್ತಿಗಳಿಗೆ ಆಸ್ಪದವಿದ್ದೇ ಇರುತ್ತದೆ. ಇಷ್ಟೇ ಆ ವ್ಯಕ್ತಿ ಮೊದಲಿನಂತೆ ಸಂಕುಚಿತ ಭವದಿಂದಿರದೇ ರೂಪಾಂತರ ಹೊಂದಿರುತ್ತಾನೆ. ಶ್ರೇಷ್ಠ ಸಿದ್ಧಿ ಪ್ರಾಪ್ತಿಯ ನಂತರವೂ ಜಗತ್ತಿನಲ್ಲಿರುವ ದುಃಖ, ನೋವು, ಅಜ್ಞಾನ, ಪಾಪಗಳನ್ನು ನಿವಾರಿಸಬೇಕೆಂಬ ತಳಮಳ ಅವನಲ್ಲಿರುವ ಸಾಧ್ಯತೆ ಇದೆ. ಪರಮ ಹಿತ, ಶಕ್ತಿ, ಆನಂದ, ಜ್ಞಾನಗಳು ನಿಮ್ನ ಪ್ರಕೃತಿಯಲ್ಲಿ ವಿಕಾಸ ಹೊಂದಿ ಸ್ಥಾಪಿತವಾಗಲಿ ಎಂಬ ದಿವ್ಯ ಆಶಯ ಅವನಲ್ಲಿರುವುದೂ ಕೂಡ ಸಾಧ್ಯವಿದೆ.

(ಸಶೇಷ)

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |
| 37 | ಶ್ರೀ ಅರವಿಂದರು |
| 38 | ಶ್ರೀ ಅರವಿಂದರ 'ಪ್ರೇಮ ಮತ್ತು ಮೃತ್ಯು' |

## ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ ಸಹಭಾಗಿತ್ವದಲ್ಲಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 39 | ಶ್ರೀ ಅರವಿಂದರ ಸಾವಿತ್ರಿ – ಒಂದು ಸಾಂಕೇತಿಕ ಅಖ್ಯಾಯಿಕೆ – ಹೊತ್ತಿಗೆ 1 |
| 40 | ಶ್ರೀ ಅರವಿಂದರ ಸಾವಿತ್ರಿ – ಭಾಗ 1, ಹೊತ್ತಿಗೆ 2 (ಸರ್ಗಗಳು 1 ರಿಂದ 5) |
| 41 | ಶ್ರೀ ಅರವಿಂದರ 'ಸಾವಿತ್ರಿ' – ಚಿನ್ಮಯದ ದೀಪ್ತಿ |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ಶ್ರೀ ಅರವಿಂದೋ ಸಂಕೀರ್ಣ ಧ್ಯಾನ ಮಂದಿರದಲ್ಲಿ ಶ್ರೀ ಅರವಿಂದರ ಪವಿತ್ರ ಪುಣ್ಯಾವಶೇಷಗಳನ್ನು ಸ್ಥಾಪನೆ ಮಾಡಿ 25 ವರ್ಷ ಪೂರ್ಣಗೊಂಡಿರುವ ಸಲುವಾಗಿ ದಿನಾಂಕ 11/06/2025 ರಂದು ಬೆಳ್ಳಿ ಹಬ್ಬವನ್ನು ಭಕ್ತಿ ಮತ್ತು ಶ್ರದ್ಧೆಗಳಿಂದ ಆಚರಿಸಲಾಯಿತು. ಇದರ ಪ್ರಯುಕ್ತವಾಗಿ, ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಬಂಧ ಸಂಜೆ 5.00 ರಿಂದ 6.00 ವರೆಗೂ ಸಂಸ್ಥೆಯ ಕಾರ್ಯ ನಿರ್ವಾಹಕ ಧರ್ಮದರ್ಶಿಗಳಾದ ಡಾ॥ ಅಜಿತ್ ಸಬ್ನೀಸ್‌ರವರು ಪವರ್ ಪಾಯಿಂಟ್ ಚಿತ್ರ ಪ್ರದರ್ಶನ ಮೂಲಕ ಸವಿಸ್ತಾರವಾಗಿ ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್, ಶ್ರೀ ಅರವಿಂದೋ ಸೊಸೈಟಿ ಕರ್ನಾಟಕ, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ, ಈ ಎಲ್ಲಾ ಸಂಸ್ಥೆಗಳಿಗೆ ಅವಿರತವಾಗಿ ದುಡಿದ ಹಲವು ಗಣ್ಯ ವ್ಯಕ್ತಿಗಳನ್ನು ಸಭೆಯಲ್ಲಿ ಹಾಜರಿದ್ದ ಸಭಿಕರಿಗೆ ಅವರುಗಳ ಫೋಟೋಗಳನ್ನು ತೋರಿಸಿ ಪರಿಚಯ ಮಾಡಿಕೊಟ್ಟರು.

ಈ ಎಲ್ಲಾ ಸಂಸ್ಥೆಗಳು ಶ್ರೀಮಾತಾರವಿಂದರ ತತ್ತ್ವ ಆದರ್ಶ ಮತ್ತು ಸಿದ್ಧಾಂತಗಳ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ಉಲ್ಲೇಖಿಸಿದರು. ಈ ಸಂದರ್ಭದಲ್ಲಿ ಸದರಿ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ ಹಲವಾರು ಪ್ರಮುಖರ ಪೈಕಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀನಿವಾಸ ವೆಂಕಟರಾವ್ ಸಬ್ನೀಸ್ (ಶ್ರೀಜಿ), ನಿವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್, ಶ್ರೀಯುತರಾದ ಲೇಟ್ ಬಿ.ಡಿ. ಜತ್ತಿ, ಮಾಜಿ ಉಪ ರಾಷ್ಟ್ರಪತಿಗಳು, ಸುಪ್ರೀಂ ಕೋರ್ಟ್ ಗೌರವಾನ್ವಿತ ಮಾಜಿ ಮುಖ್ಯ ನ್ಯಾಯಮೂರ್ತಿಗಳಾದ ಲೇಟ್ ಇ.ಎಸ್. ವೆಂಕಟರಾಮಯ್ಯ, ಶ್ರೀ ಪ್ರದೀಪ್ ನಾರಂಗ್, ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿ, ಶ್ರೀ ವಿಜಯ್ ಕೆ. ಪೋದಾರ್ ಇನ್ನು ಅನೇಕ ಪ್ರಮುಖರನ್ನು ಮತ್ತು ಅವರುಗಳು ಮಾಡಿದ ಸೇವೆಯನ್ನು ಸ್ಮರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು. "Sri Aurobindo's Sacred Relics" ವಿಷಯ ಕುರಿತು ದಿನಾಂಕ 10ನೇ ಜೂನ್ 2025 ರಿಂದ 11ನೇ ಆಗಸ್ಟ್ 2025 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.




ಫೋಟೊ: ಇಮೇಜಿಂಗ್ ಸಾವಿತ್ರಿ

ನಿರ್ದಯದ ಬಲದ ತುದಿಗಾಲಿನಲ್ಲಿ ಆಸಕ್ತ ಪೂರ್ಣದಂಚು
ಪ್ರತಿ ಅಸ್ಥಿಭಾರ ಕುದಿ–ಕುದಿತದೊಡನೆ ತಹತಹಿಸಿ ಹಾಕಿ ಹೊಂಚು
ಚಿತ್ರಹಿಂಸೆಯಲಿ ಕ್ಷತಿಗೊಂಡ ಹೃದಯ–ಹೃದಯಗಳಮೂಲದಿಂದ
ಉಕ್ಕುತ್ತ ಬಂದ ಆ ರಕ್ತದಿಂದ ಲೇಪಿಸುತ ಬಿಗಿಯ ಬಂಧ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 8 ಪುಟ 128)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಅಕ್ಕಸದ ಸೊಕ್ಕಿನಲಿ ಓರ್ವನಿವನು ರಕ್ಕಸನು ಕಾಣುತಿಹನು
ಆದರಿವ ಪ್ರಭೆಯ ಪ್ರಭಾವಲಯದಲಿ ಕಾಲ–ಬಂಧಿ ತಾನು;
ಆಕಾಶ–ಮಾಲೆ–ಮಾಲೆಗಳ ನೆಲೆಯ ಆಧರಿಸಿ ನಿಂತು ಹೀಗೆ
ದೇವದೂತನೊಲು ಕಂಡನವನೀಗ ರಕ್ಷಣೆಯ ಕೊಡುವ ಹಾಗೆ;
ಮತ್ತೆ ಮೇಲಾಗಿ ಚಿಜ್ಜ್ಯೋತಿ ನೆಲೆಯ ಸ್ವರ್ಗಾಭಿಗಮನ ಪಥದಿ
ಅಧಃಪತನದಲಿ ಅಧೋಗತಿಗಿವನೆ ನಾಯಕನ ಸ್ಥಾನ ಹೊಂದಿ.

– ಪುಟ್ಟು ಕುಲಕರ್ಣಿ
(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 7 ಪುಟ 207)

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.